

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಏಪ್ರಿಲ್ 7 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 346 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4






ಮಹಿಳೆಯರಿಗೆ 2029ರ ಸಂಸತ್ ಚುನಾವಣೆಯಲ್ಲಿ
ಶೇ.33ರಷ್ಟು ಮೀಸಲು

ಪ್ರಧಾನಿ ಮೋದಿ ಘೋಷಣೆ





ಬಾರ್ಪೇಟಾ (ಅಸ್ಸಾಂ), ಏ.6– ದೇಶದಲ್ಲಿ 2029ರ ಸಾರ್ವತ್ರಿಕ ಚುನಾವಣೆ ಯಿಂದ ಮಹಿಳೆಯರಿಗೆ ಸಂಸತ್ತಿನಲ್ಲಿ ಶೇ 33ರಷ್ಟು ಮೀಸಲಾತಿಯನ್ನು ಜಾರಿಗೆ ತರಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಅಸ್ಸಾಂನ ಬಾರ್ಪೇಟಾದಲ್ಲಿ ಸೋಮವಾರ ಚುನಾವಣಾ ರ್‍ಯಾಲಿಯಲ್ಲಿ ಮಾತ ನಾಡಿದ ಅವರು, ಈ ವಿಷಯ ಕುರಿತು ಚರ್ಚಿಸಲು ಏಪ್ರಿಲ್ 16ರಂದು ಸಂಸತ್ತಿನ ವಿಶೇಷ ಅಧಿವೇಶನ ಕರೆಯಲಾಗಿದೆ ಎಂದು ತಿಳಿಸಿದರು. ಆದರೆ ಕೆಲ ರಾಜಕೀಯ ಪಕ್ಷಗಳು ಮತ್ತು ನಾಯಕರು ಇದರ ಬಗ್ಗೆ ಇಲ್ಲಸಲ್ಲದ ವದಂತಿಗಳನ್ನು ಹರಡುತ್ತಿದ್ದಾರೆ. ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರವನ್ನು ಖಚಿತಪಡಿಸಿಕೊಳ್ಳಲು ಅಸ್ಸಾಂನ ಮಹಿಳೆಯರು ಎಲ್ಲ ಪಕ್ಷಗಳನ್ನು ಒತ್ತಾಯಿಸಬೇಕು ಎಂದು ಮೋದಿ ಆಗ್ರಹಿಸಿದರು.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದ ದೇಶದ ನಾಗರಿಕರಿಗೆ ವಿಶೇಷವಾಗಿ ಬಡವರು, ಮಧ್ಯಮ ವರ್ಗ ಮತ್ತು ರೈತರ ಮೇಲಾಗುವ ದುಷ್ಪರಿಣಾಮಗಳನ್ನು ತಗ್ಗಿಸಲು ಸರ್ಕಾರ ಶ್ರಮಿಸುತ್ತಿದೆ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ವಿರುದ್ಧ ಟೀಕೆ: ನಮ್ಮ ಸರ್ಕಾರವು 2025ರಲ್ಲಿ ಪಾಕಿಸ್ತಾನದ ಭಯೋತ್ಪಾದಕ ಶಿಬಿರಗಳ ಮೇಲೆ 'ಆಪರೇಷನ್ ಸಿಂಧೂರ' ನಡೆಸುತ್ತಿದ್ದರೆ, ಕಾಂಗ್ರೆಸ್‌ನವರು ಪಕ್ಕದ ದೇಶದ ರಾಗಕ್ಕೆ ತಕ್ಕಂತೆ ಹಾಡುತ್ತಿದ್ದರು. 2016ರ ಸರ್ಜಿಕಲ್ ಸ್ಟ್ರೈಕ್ ನಡೆಸಿದಾಗಲೂ ಕಾಂಗ್ರೆಸ್ ಹಾಗೆಯೇ ವರ್ತಿಸಿತ್ತು ಎಂದು ಪ್ರಧಾನಿ ಮೋದಿ ಅವರು ಕಾಂಗ್ರೆಸ್ ವಿರುದ್ಧ ಕಟುವಾಗಿ ಟೀಕಿಸಿದರು.

ಕಾಂಗ್ರೆಸ್‌ಗೆ ಅಭಿವೃದ್ಧಿಯ ಬಗ್ಗೆ ದೂರದೃಷ್ಟಿ ಇಲ್ಲ ಎಂದು ಆರೋಪಿಸಿದ ಅವರು, ಬಿಜೆಪಿಯು ದೀರ್ಘಾವಧಿ ಬೆಳವಣಿಗೆ ಮತ್ತು ಸರ್ವತೋಮುಖ ಅಭಿವೃದ್ಧಿಯನ್ನು ಕೇಂದ್ರೀಕರಿಸಿದೆ ಎಂದರು.

ದಶಕಗಳಿಂದ ಮಾಜಿ ಸೈನಿಕರ ಬೇಡಿಕೆಯಾದ 'ಒಂದು ಶ್ರೇಣಿ, ಒಂದು ಪಿಂಚಣಿ' ಯೋಜನೆಯ ಜಾರಿಯನ್ನು ಕಾಂಗ್ರೆಸ್ ನಿರ್ಲಕ್ಷಿಸಿತ್ತು. ಆದರೆ ನಾವು ಅವರ ಬೇಡಿಕೆಗೆ ನ್ಯಾಯ ಒದಗಿಸಿದ್ದೇವೆ. ಇಲ್ಲಿಯವರೆಗೆ ಸೇನಾ ಸಿಬ್ಬಂದಿಯ ಬ್ಯಾಂಕ್ ಖಾತೆಗಳಿಗೆ 1.24 ಲಕ್ಷ ಕೋಟಿ ವಿತರಿಸಿದ್ದೇವೆ ಎಂದು ಪ್ರಧಾನಿ ಮೋದಿ ವಿವರಿಸಿದರು. ಗಾಂಧಿ ಕುಟುಂಬವು ವಂಶ ಪಾರಂಪರ್ಯ ರಾಜಕೀಯ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಅವರು ದೂರಿದರು.

ಕಾಂಗ್ರೆಸ್‌ನದ್ದು ಸುಳ್ಳಿನ ಅಂಗಡಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಮೊಹಬ್ಬತ್ ಕಿ ದುಕಾನ್' ಹೇಳಿಕೆಗೆ ಪ್ರತಿಕ್ರಿಯಿಸಿದ ಮೋದಿ, ಕಾಂಗ್ರೆಸ್‌ನದ್ದು ಮಿಥ್ಯಾ ಕಿ ದುಕಾನ್ (ಸುಳ್ಳಿನ ಅಂಗಡಿ) ಆಗಿದೆ ಎಂದು ಜರೆದರು.

ಹಿಮಾಚಲ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಅಲ್ಲಿ ಅವರು ಚುನಾವಣೆಗೂ ಮುನ್ನ ದೊಡ್ಡ ಭರವಸೆಗಳನ್ನು ನೀಡಿದ್ದರು. ಆದರೆ ಅವುಗಳನ್ನು ಇಲ್ಲಿಯವರೆಗೂ ಈಡೇರಿಸಿಲ್ಲ. ಹೀಗಾಗಿ ಕಾಂಗ್ರೆಸ್‌ನ ಸುಳ್ಳು ಭರವಸೆಗಳಿಗೆ ಬಲಿಯಾಗಬೇಡಿ ಎಂದು ಪ್ರಧಾನಿ ಹೇಳಿದರು.

ಒಂದೇ ರಾತ್ರಿಯಲ್ಲಿ ಇಡೀ ಇರಾನ್ ನಾಶ ಮಾಡ್ತೇವೆ
ಬಹುಶಃ ಆ ರಾತ್ರಿ ಇಂದೇ ಆಗಿರಬಹುದು: ಟ್ರಂಪ್ ಕೊನೆಯ ಎಚ್ಚರಿಕೆ



ವಾಷಿಂಗ್ಟನ್: ಪಶ್ಚಿಮ ಏಷ್ಯಾ ಯುದ್ಧವು ಕಳೆದ ಐದು ವಾರಗಳಿಂದ ನಡೆಯುತ್ತಿದೆ. ಇದು ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆಯನ್ನು ಸೃಷ್ಟಿಸಿದೆ. ಜಗತ್ತು ಹಲವಾರು ಪ್ರಮುಖ ಸವಾಲುಗಳನ್ನು ಎದುರಿಸುತ್ತಿದ್ದು ಇದಕ್ಕಾಗಿ ಇರಾನ್ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಕ್ರಮಣಕಾರಿ ಹೇಳಿಕೆ ನೀಡಿದ್ದು ಅಂತಿಮ ಗಡುವು ಮಂಗಳವಾರ ಕೊನೆಯಾಗುತ್ತದೆ ಎಂದು ಪುನರುಚ್ಚರಿಸಿದರು.

ಏನು ಮಾಡಬೇಕೋ ಅದನ್ನು ಮಾಡಿದರೆ, ಯುದ್ಧವು ಬಹಳ ಬೇಗನೆ ಕೊನೆಗೊಳ್ಳಬಹುದು. ಇರಾನ್‌ನ ಪ್ರತಿ–ಪ್ರಸ್ತಾಪವು ಮುಖ್ಯ. ಆದರೆ ಅವರು ನಿರೀಕ್ಷಿಸಿದಷ್ಟು ಉತ್ತಮವಾಗಿ ಸ್ಪಂದಿಸುತ್ತಿಲ್ಲ ಎಂದು ಟ್ರಂಪ್ ಹೇಳಿದರು. ನಮ್ಮ ಯುದ್ಧದ ಉದ್ದೇಶ ಒಂದೇ ಆಗಿದ್ದು ಅದು ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರಬಾರದು ಎಂಬುದು ಎಂದು ಅಮೆರಿಕ ಅಧ್ಯಕ್ಷರು ಹೇಳಿದರು.

ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯುವಂತೆ ಟ್ರಂಪ್ ಇರಾನ್ ಮೇಲೆ ನಿರಂತರವಾಗಿ ಒತ್ತಡ ಹೇರುತ್ತಿದ್ದಾರೆ. ಅದು ಸಂಭವಿಸದಿದ್ದರೆ, ಅವರು ಇರಾನ್‌ನ ಇಂಧನ ಸೌಲಭ್ಯಗಳು ಮತ್ತು ನಾಗರಿಕ ಮೂಲಸೌಕರ್ಯವನ್ನು ನಾಶಪಡಿಸುವುದಾಗಿ ಎಚ್ಚರಿಸಿದ್ದಾರೆ. ಮಂಗಳವಾರ ರಾತ್ರಿ 8 ಗಂಟೆಗೆ ಅಂದರೆ ಬುಧವಾರ ಭಾರತೀಯ ಸಮಯ ಬೆಳಿಗ್ಗೆ 5:30ಕ್ಕೆ ಅಂತಿಮ ಗಡುವು ನಿಗದಿಪಡಿಸಿದ್ದಾರೆ.

45 ದಿನಗಳ ಕದನ ವಿರಾಮಕ್ಕಾಗಿ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ನಡೆಯುತ್ತಿದೆ ಎಂದು ಅಮೆರಿಕದ ಮಾಧ್ಯಮಗಳು ಹೇಳಿವೆ. ವರದಿಗಳ ಪ್ರಕಾರ, ಪಾಕಿಸ್ತಾನ, ಈಜಿಪ್ಟ್ ಮತ್ತು ಟರ್ಕಿಯಂತಹ ದೇಶಗಳು ಈ ಒಪ್ಪಂದದ ಮಧ್ಯಸ್ಥಿಕೆ ವಹಿಸುತ್ತಿವೆ.

ಖಮೇನಿ ಎಚ್ಚರಿಕೆ: ಅಮೆರಿಕದ ಕದನ ವಿರಾಮ ಪ್ರಸ್ತಾವನೆಯನ್ನು ಟೆಹ್ರಾನ್ ತಿರಸ್ಕರಿಸಿದ ಕೆಲವು ಗಂಟೆಗಳ ಬೆನ್ನಲ್ಲೇ ಇರಾನ್‌ನ ಸರ್ವೋಚ್ಚ ನಾಯಕ ▶ 6ನೇ ಪುಟಕ್ಕೆ

ಎಲ್‌ಪಿಜಿ ಬದಲಾಗಿ ಪೆಟ್ರೋಲ್ ಬಳಸಿ
ಆಟೋ ಚಾಲಕರಿಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಲಹೆ



ದಾವಣಗೆರೆ: ಪೆಟ್ರೋಲ್ ಸದಾಕಾಲ ಲಭ್ಯವಿರುವ ಇಂಧನ. ಸದ್ಯದ ಮಟ್ಟಿಗೆ ಆಟೊ ಚಾಲಕರು ಎಲ್‌ಪಿಜಿ ಬದಲಿಗೆ ಪೆಟ್ರೋಲ್ ಬಳಸುವುದು ಸೂಕ್ತ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸಲಹೆ ನೀಡಿದರು.

ದೇಶದಲ್ಲಿ ಸುಮಾರು 70 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲದ ಸಂಗ್ರಹವಿದೆ. ನಿರಂತರವಾಗಿ ತೈಲ ಪೂರೈಕೆ ಆಗುತ್ತಿದ್ದು, ಜನರು ಆತಂಕಪಡುವ ಅಗತ್ಯವಿಲ್ಲ. ವಾಣಿಜ್ಯ ಸಿಲಿಂಡರ್‌ಗಳ ವಿತರಣೆಯನ್ನು ಶೇ 70ಕ್ಕೆ ಹೆಚ್ಚಿಸಲಾಗಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶೇ. 60ರಷ್ಟು ಎಲ್‌ಪಿಜಿಯನ್ನು ದೇಶದಲ್ಲೇ ಉತ್ಪಾದಿಸಲಾಗುತ್ತಿದೆ. ಶೇ 40ರಷ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ. ಜಾಗತಿಕ ಮಟ್ಟದಲ್ಲಿ ಆಟೊ ಎಲ್‌ಪಿಜಿ ಸಂಪನ್ಮೂಲಗಳು ಸೀಮಿತವಾಗಿವೆ. ವಿಶ್ವದ ಕೆಲವೇ ದೇಶಗಳಲ್ಲಿ ಆಟೋ ಎಲ್‌ಪಿಜಿ ಲಭ್ಯವಿದೆ ಎಂದರು.

ಸರ್ಕಾರಿ ಒಡೆತನದ 72 ಸೇರಿದಂತೆ ರಾಜ್ಯದಲ್ಲಿ 372 ಆಟೋ ಎಲ್‌ಪಿಜಿ ವಿತರಣಾ ಕೇಂದ್ರಗಳಿವೆ. ಜಾಗತಿಕ ಮಟ್ಟದಲ್ಲಿ ಬೆಲೆ ಏರಿಕೆಯಾದ ಹಿನ್ನೆಲೆಯಲ್ಲಿ ಖಾಸಗಿ ಕಂಪನಿಗಳು ಪ್ರತಿ ಕೆಜಿ ಎಲ್‌ಪಿಜಿ ದರವನ್ನು 110ಕ್ಕೆ ಏರಿಸಿವೆ. ಸರ್ಕಾರಿ ಒಡೆತನದ ಕೇಂದ್ರಗಳಲ್ಲಿ ಆಟೊ ಎಲ್‌ಪಿಜಿ ದರ ಪ್ರತಿ ಕೆಜಿಗೆ 89 ಇದೆ. ಹೀಗಾಗಿ, ಈ ಕೇಂದ್ರಗಳಲ್ಲಿ ಎಲ್‌ಪಿಜಿಗೆ ಆಟೋಗಳ ಉದ್ದನೆಯ ಸರತಿ ಸಾಲು ಕಂಡುಬರುತ್ತಿದೆ ಎಂದರು.

ಇಂದು ದ್ವಿತೀಯ ಪಿಯು ಫಲಿತಾಂಶ ಇಲ್ಲ

ಬೆಂಗಳೂರು: 2025–26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾತರದಿಂದ ಕಾಯುತ್ತಿದ್ದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಪರೀಕ್ಷಾ ಮಂಡಳಿ ತೀವ್ರ ನಿರಾಶೆ ಮೂಡಿಸಿದೆ.

ನಾಳೆ ಪ್ರಕಟವಾಗಬೇಕಿದ್ದ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶವನ್ನು ಮುಂದೂಡಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಚುನಾವಣೆ ನೀತಿ ಸಂಹಿತೆ ಹಾಗೂ ಆಡಳಿತಾತ್ಮಕ ಕಾರಣಗಳಿಂದಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಅಧ್ಯಕ್ಷ ಪ್ರಕಾಶ್ ನಿಟ್ಟಾಲಿ ಹೇಳಿದ್ದಾರೆ. ▶ 6ನೇ ಪುಟಕ್ಕೆ

ಮತ್ತೆ ಸರ್ಕಾರಕ್ಕೆ ಸಾರಿಗೆ ನೌಕರರು ಸೆಡ್ಡು: ಏ.8ರಂದು ಬಸ್ ಸ್ಥಗಿತ!

ಬೆಂಗಳೂರು, ಏ.6– 38 ತಿಂಗಳ ವೇತನ ಹಿಂಬಾಕಿ ಮತ್ತು ಹೊಸ ವೇತನ ಪರಿಷ್ಕರಣೆಗಾಗಿ ಆಗ್ರಹಿಸಿ ಈಗಾಗಲೇ ಸಾರಿಗೆ ನೌಕರರು ಹೋರಾಟಕ್ಕೆ ಮುಂದಾಗಿದ್ದರು. ಆದರೆ ಸರ್ಕಾರ 26 ತಿಂಗಳ ವೇತನ ಹಿಂಬಾಕಿಯೊಂದಿಗೆ 2025 ಏಪ್ರಿಲ್‌ನಿಂದ ವೇತನ ಪರಿಷ್ಕರಣೆಗೆ ಒಪ್ಪಿಗೆ ನೀಡಿತ್ತು ಸದ್ಯ ಇದಕ್ಕೆ ಒಪ್ಪದ ಸಾರಿಗೆ ನೌಕರರ ಕೂಟ ಮತ್ತೆ ಹೋರಾಟಕ್ಕೆ ಮುಂದಾಗಿದೆ.

ರಾಜ್ಯ ಸರ್ಕಾರ ಸಾರಿಗೆ ನೌಕರರಿಗೆ ನೀಡಬೇಕಿದ್ದ 38 ವೇತನ ಹಿಂಬಾಕಿ, 2024ರಿಂದ ಆಗಬೇಕಿದ್ದ ಹೊಸ ವೇತನ ಒಪ್ಪಂದಕ್ಕಾಗಿ ಆಗ್ರಹಿಸಿ ಹೋರಾಟಕ್ಕೆ ಮುಂದಾಗಿದ್ದರು. ಆದರೆ ರಾಜ್ಯ ಸರ್ಕಾರ 38 ತಿಂಗಳು ವೇತನ ▶ 6ನೇ ಪುಟಕ್ಕೆ

ಟೋಲ್‌ಗಳಲ್ಲಿ ಏ.10ರಿಂದ ಕ್ಯಾಷ್ ಇಲ್ಲ; ಡಿಜಿಟಲ್ ಪಾವತಿ ಮಾತ್ರ



ನವದೆಹಲಿ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ತನ್ನ ಟೋಲ್ ಪ್ಲಾಜಾಗಳಲ್ಲಿ ಸಂಪೂರ್ಣ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿ ಮಾಡಲು ನಿರ್ಧರಿಸಿದೆ.

ಏಪ್ರಿಲ್ 10ರಿಂದ ಟೋಲ್ ಶುಲ್ಕವನ್ನು ಇನ್ನು ಮುಂದೆ ಯುಪಿಐ ಅಥವಾ ಫಾಸ್ಟ್‌ಟ್ಯಾಗ್ ಮೂಲಕ ಮಾತ್ರ ಪಾವತಿಸಬೇಕು. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕೃತವಾಗಿ ಸೂಚಿಸಿದೆ.

ಸವಾರರಿಗೆ ಸಲಹೆಗಳು: ನೀವು ಬಳಕೆ ಮಾಡುತ್ತಿರುವ ವಾಹನದ ಫಾಸ್ಟ್‌ಟ್ಯಾಗ್ ಸಕ್ರಿಯವಾಗಿದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಿ. ಫಾಸ್ಟ್ ಟ್ಯಾಗ್ ಖಾತೆಯಲ್ಲಿ ಕನಿಷ್ಠ ಹಣ ಇರುವಂತೆ ನೋಡಿಕೊಳ್ಳಿ, ಯುಪಿಐ ಸೇವೆ ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಿ.

ನಗದು ಪಾವತಿಗೆ ಅವಕಾಶ ಇರುವುದಿಲ್ಲ. ಹಾಗೂ ಐಡಿ ಕಾರ್ಡುಗಳನ್ನು ತೋರಿಸಿ ಟೋಲ್ ದಾಟುವ ಪದ್ಧತಿಗೂ ಸಂಪೂರ್ಣ ಕಡಿವಾಣ ಬೀಳಲಿದೆ ಎಂದು ಪ್ರಾಧಿಕಾರ ತಿಳಿಸಿದೆ. ಈ ಮೊದಲು ಟೋಲ್ ಶುಲ್ಕವನ್ನು ▶ 6ನೇ ಪುಟಕ್ಕೆ

ದೇಶವನ್ನೇ ಬೆಚ್ಚಿ ಬೀಳಿಸಿದ್ದ ಅಪ್ಪ-ಮಗನ ಲಾಕ್‌ಅಪ್ ಡೆತ್
ತಮಿಳ್ನಾಡಲ್ಲಿ 9 ಪೊಲೀಸರಿಗೆ ಮರಣದಂಡನೆ!



ಲಾಕ್‌ಅಪ್ ಡೆತ್ ಆದ ತಂದೆ–ಮಗ



ಮಧುರೈ: ಲಾಕ್‌ಅಪ್ ಡೆತ್ ಪ್ರಕರಣವೊಂದರಲ್ಲಿ 9 ಪೊಲೀಸರಿಗೆ ಮರಣದಂಡನೆ ವಿಧಿಸಿ ಮಧುರೈ ಜಿಲ್ಲೆಯ ನ್ಯಾಯಾಲಯ ಆದೇಶ ಪ್ರಕಟಿಸಿದೆ.

2020ರ ಜೂನ್ 19ರಂದು, ಲಾಕ್‌ಡೌನ್ ಸಮಯದಲ್ಲಿ ಅಂಗಡಿ ನಿಗದಿತ ಸಮಯದ ನಂತರವೂ ತೆರೆದಿದ್ದಾರೆ ಎಂಬ ಆರೋಪದ ಮೇಲೆ, ಮೊಬೈಲ್ ಅಂಗಡಿ ನಡೆಸುತ್ತಿದ್ದ ಜಯರಾಜ್ ಮತ್ತು ಅವರ ಮಗ ಬೆನಿಕ್ಸ್ ಅವರನ್ನು ಬಂಧಿಸಲಾಗಿತ್ತು ನಂತರ ಈ ಆರೋಪ ಸುಳ್ಳು ಎಂದು ಹೇಳಲಾಗಿತ್ತು. ಆದರೆ, ತೂತುಕೂಡಿ ಜಿಲ್ಲೆಯ ವ್ಯಾಪಾರಿ ಪಿ. ಜಯರಾಜ್ ಮತ್ತು ಅವರ ಮಗ ಜೆ ಬೆನಿಕ್ಸ್ ಅವರು ಕಸ್ಟಡಿಯಲ್ಲಿ ಮೃತಪಟ್ಟಿದ್ದರು.

ಆರು ವರ್ಷಗಳ ಹಿಂದೆ ನಡೆದಿದ್ದ ಈ ಘಟನೆಗೆ ದೇಶ ವ್ಯಾಪಿ ಆಕ್ರೋಶ ವ್ಯಕ್ತವಾಗಿತ್ತು. ಈ ಪ್ರಕರಣವನ್ನು ನ್ಯಾಯಾಲಯ, ಅಧಿಕಾರದ ದುರುಪಯೋಗದ ಸ್ಪಷ್ಟ ಉದಾಹರಣೆ ಎಂದು ಹೇಳಿದೆ. ತಮಿಳುನಾಡಿನಲ್ಲಿ ಅನೇಕ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳು ಇದ್ದಾರೆ. ಈ ತೀರ್ಪು ಪೊಲೀಸರಲ್ಲಿ ಭಯ ಹುಟ್ಟಿಸುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ತಂದೆ ಮತ್ತು ಮಗನನ್ನು ಬಟ್ಟೆ ಬಿಚ್ಚಿಸಿ ಕ್ರೂರವಾಗಿ ಹಲ್ಲೆ ಮಾಡಲಾಗಿತ್ತು. ಅದನ್ನು ಓದಿದರೆ ಹೃದಯ ನಡುಗುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

2020ರ ಜೂನ್ 19ರಂದು ಜಯರಾಜ್ ಮತ್ತು ಬೆನಿಕ್ಸ್ ಅವರನ್ನು ಸತಂಕುಳಂ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಕೆಲವೇ ದಿನಗಳಲ್ಲಿ ಇಬ್ಬರೂ ಮೃತಪಟ್ಟರು. ಬಂಧಿತರ ಸಂಬಂಧಿಕರು, ಪೊಲೀಸ್ ಠಾಣೆಯಲ್ಲಿ ಇಡೀ ರಾತ್ರಿ ಹಲ್ಲೆ ನಡೆಸಲಾಗಿದೆ ▶ 6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣ ಪ್ರಕರಣ
ಬಿ ರಿಪೋರ್ಟ್ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಇಡಿ ಅರ್ಜಿ

ಬೆಂಗಳೂರು, ಏ.6– ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿ ರಿಪೋರ್ಟ್ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಜಾರಿ ನಿರ್ದೇಶನಾಲಯ ಅರ್ಜಿ ಸಲ್ಲಿಸಿದೆ.

ನಮ್ಮ ತನಿಖೆಯಲ್ಲಿ ಸಾಕಷ್ಟು ಮಾಹಿತಿ ಬಹಿರಂಗ ಆಗಿದೆ ಎಂದು ಕೆಳಹಂತದ ನ್ಯಾಯಾಲಯ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಇಡಿ ಅಧಿಕಾರಿಗಳು ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಮುಡಾದಲ್ಲಿ ಹಗರಣ ನಡೆದಿದೆ. ನಾಲ್ವರು ಆರೋಪಿಗಳ ಪಾತ್ರ ಇರೋದು ತನಿಖೆಯಲ್ಲಿ ಸಾಕ್ಷ್ಯಾಧಾರ ಇದೆ. ಹೀಗಾಗಿ, ಮರು ತನಿಖೆಗೆ ಮನವಿ ಮಾಡಲಾಗಿದೆ. ಸ್ನೇಹಮಯಿ ಕೃಷ್ಣ ಬಳಿಕ ಇ.ಡಿಯಿಂದಲೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಕೆಯಾಗಿದೆ.

ಇನ್ನೆರಡು ವರ್ಷವೂ ಸಿದ್ದರಾಮಯ್ಯ ಸಿಎಂ ಆಗಿರ್ತಾರೆ...

■ ಮೈಸೂರಲ್ಲಿ ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳಿಕೆ ■ ನೀವೇ ಇರಿ ಎಂದು ಹೈಕಮಾಂಡ್ ಪ್ರತ್ಯೇಕ ಸ್ಪಷ್ಟನೆ ನೀಡದು

ಮೈಸೂರು, ಏ.6(ಬಿಎಲ್‌ಯು)– ಸಿದ್ದರಾಮಯ್ಯನವರು ಇನ್ನೂ ಎರಡು ವರ್ಷ ಮುಖ್ಯಮಂತ್ರಿಯಾಗಿರಲಿದ್ದು, ಇದಕ್ಕೆ ಹೈಕಮಾಂಡ್‌ನಿಂದ ಪ್ರತ್ಯೇಕ ಸ್ಪಷ್ಟನೆಯ ಅಗತ್ಯವಿಲ್ಲ ಎಂದು ಗೃಹಸಚಿವ ಡಾ.ಜಿ. ಪರಮೇಶ್ವರ್ ಹೇಳಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2013ರಲ್ಲಿ ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಲಿದ್ದಾರೆ ಎಂದು ಹೈಕಮಾಂಡ್ ಯಾವುದೇ ಘೋಷಣೆ ಮಾಡಿರಲಿಲ್ಲ. ಆದಾಗ್ಯೂ ಅವರು ಅಧಿಕಾರಾವಧಿಯನ್ನು ಪೂರ್ಣಗೊಳಿಸಲಿಲ್ಲವೇ?. ಪ್ರಸ್ತುತ ಸಿದ್ದರಾಮಯ್ಯನವರು ಮುಖ್ಯ ಮಂತ್ರಿಯಾಗಿ ಇನ್ನೇನು ಮೂರು ವರ್ಷ ಪೂರ್ಣಗೊಳಿಸಲಿದ್ದು, ಇನ್ನೂ ಎರಡು ವರ್ಷ ನೀವೇ ಮುಖ್ಯಮಂತ್ರಿಯಾಗಿರುತ್ತೀರಿ ಎಂದು ಹೈಕಮಾಂಡ್ ಪ್ರತ್ಯೇಕ ಸ್ಪಷ್ಟನೆ ನೀಡುವ ಅಗತ್ಯವಿಲ್ಲ ಎಂದರು. ಅಧಿಕಾರ ಹಸ್ತಾಂತರ ಸಂಬಂಧ ನಮ್ಮ ಪಕ್ಷದ ಕೆಲವರು ಮಾತನಾಡಿದ್ದಾರೆ. ಆದರೆ ಅದೆಲ್ಲವೂ ಅವರ ವೈಯಕ್ತಿಕ ಅಭಿಪ್ರಾಯವೇ ಹೊರತು ಪಕ್ಷಕ್ಕೆ ಸಂಬಂಧಿಸುವುದಿಲ್ಲ. ಈ ಬಗ್ಗೆ ಪ್ರತಿಕ್ರಿಯೆ ನೀಡಲು ನಾನು ತಯಾರಿಲ್ಲ. ಅಷ್ಟಕ್ಕೂ ಅಧಿಕಾರ ಹಸ್ತಾಂತರದ ಬಗ್ಗೆ ತೀರ್ಮಾನ ಮಾಡುವುದು ಹೈಕಮಾಂಡ್. ಈ ವಿಚಾರವಾಗಿ ಎಐಸಿಸಿ ಎಂದಾದರೂ, ಏನನ್ನಾದರೂ ಹೇಳಿದೆಯೇ? ಇದರರ್ಥ ಆ ರೀತಿಯ ಯಾವ ಬೆಳವಣಿಗೆ ಆಗಿಲ್ಲ. ಈ ವಿಷಯವಾಗಿ ಹೈಕಮಾಂಡ್ ಯಾವ ಗೊಂದಲವನ್ನೂ ಸೃಷ್ಟಿಸಿಲ್ಲ. ಅದೇನೇ ಇರಲಿ ಹೈಕಮಾಂಡ್ ಹೇಳುವ ತನಕ ಎಲ್ಲರೂ ಕಾಯಬೇಕು ಎಂದು ತಿಳಿಸಿದರು.

ಡಿಕೆಶಿಗೆ ಸಮಸ್ಯೆಯಾಗಿಲ್ಲ: ಡಿ.ಕೆ.ಶಿವಕುಮಾರ್ ಅವರು ಉಪಮುಖ್ಯಮಂತ್ರಿಗಳು ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಅವರು ನಮ್ಮ ನಾಯಕರು. ಅವರಿಗೆ ಯಾವ ಸಮಸ್ಯೆಯೂ ಎದುರಾಗಿಲ್ಲ. ಮುಖ್ಯಮಂತ್ರಿ ಸ್ಥಾನಕ್ಕೆ ನಮ್ಮ ಎಲ್ಲಾ ಶಾಸಕರು ಅರ್ಹರು ಎಂದು ಸಿದ್ದರಾಮಯ್ಯ ಅವರೇ ವಿಧಾನಮಂಡಲ ಅಧಿವೇಶನದಲ್ಲೇ ಹೇಳಿದ್ದಾರೆ. ▶ 6ನೇ ಪುಟಕ್ಕೆ




ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಜಿಲ್ಲಾಡಳಿತದ ಅಧಿಕಾರಿಗಳ ಜೊತೆ ಅನೌಪಚಾರಿಕ ಸಭೆ ನಡೆಸಿದರು.

ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ
ದೂರು ನೀಡಿದರಷ್ಟೇ ಪೊಲೀಸರು ಕ್ರಮ

ಮೈಸೂರು, ಏ.6(ಬಿಎಲ್‌ಯು)– ಕಾಳಸಂತೆಯಲ್ಲಿ ಎಲ್‌ಪಿಜಿ ಸಿಲಿಂಡರ್ ಮಾರಾಟದ ವಿರುದ್ಧ ಪೊಲೀಸ್ ಇಲಾಖೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಮಾಡಲಾಗುತ್ತಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ದೂರು ಅಥವಾ ಮಾಹಿತಿ ನೀಡಿದರೆ ಪೊಲೀಸರು ದಾಳಿ ನಡೆಸಲಿದ್ದಾರೆ ಎಂದರು. ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ನಿಯಂತ್ರಣ ಮಾಡುವುದು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜವಾಬ್ದಾರಿಯೇ ಹೊರತು ಪೊಲೀಸರದ್ದಲ್ಲ. ಕಾಳ ಸಂತೆಯಲ್ಲಿ ಸಿಲಿಂಡರ್ ಮಾರಾಟ ಮಾಡಲಾಗುತ್ತಿದೆ ಎಂದು ಇವರು ಮಾಹಿತಿ ನೀಡಿದರೆ ▶ 6ನೇ ಪುಟಕ್ಕೆ



ಏ.10ರಿಂದ ಏ.12ರವರೆಗೆ ಯರಗನಹಳ್ಳಿಯಲ್ಲಿ ಶ್ರೀ ಸೀತಾರಾಮರ ಕಲ್ಯಾಣೋತ್ಸವ, ರಾಮೋತ್ಸವ

ಮೈಸೂರು,ಏ.6–ಚಾಮರಾಜನಗರ ತಾಲೂಕಿನ ಯರಗನಹಳ್ಳಿಯಲ್ಲಿ ಶ್ರೀ ಸೀತಾರಾಮ ಸೇವಾ ಟ್ರಸ್ಟ್ ವತಿ ಯಿಂದ ಏ.10ರಿಂದ ಏ.12ರವರೆಗೆ ಶ್ರೀ ಸೀತಾ ರಾಮರ ಕಲ್ಯಾಣೋತ್ಸವ ಹಾಗೂ ರಾಮೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಏ.10ರಂದು ಬೆಳಗ್ಗೆ 6ರಿಂದ ಸುಪ್ರಭಾತ, ಗಂಗಾಪೂಜೆ, ಮಹಾತಿರುಮಂಜನಂ, ಅಲಂಕಾರಾಸನ, ಮಂತ್ರಪುಷ್ಪ, ಮಧ್ಯಾಹ್ನ 12ರಿಂದ ಮಹಾಮಂಗಳಾರತಿ, ಶಾತ್ತುಮುರೈ ಹಾಗೂ ತೀರ್ಥಪ್ರಸಾದ ವಿನಿಯೋಗವಿರುತ್ತದೆ. ಮಧ್ಯಾಹ್ನ 4 ಗಂಟೆಗೆ ಕಾಶೀಯಾತ್ರೆ ಮತ್ತು ಕಲ್ಯಾಣೋತ್ಸವ, ರಾತ್ರಿ 8.30ಕ್ಕೆ ತಿರುವೀದಿ ಉತ್ಸವಂ ನಂತರ ಶಾತ್ತುಮುರೈ ಮತ್ತು ತೀರ್ಥಪ್ರಸಾದ ವಿನಿಯೋಗ.

ಏ.11ರಂದು ಬೆಳಗ್ಗೆ 6ರಿಂದ ಸುಪ್ರಭಾತ, ಸ್ವಸ್ತಿವಾಚನ, ವಿಶ್ವಕ್ಸೇನಾರಾಧನ, ಭಗವದ್ ವಾಸುದೇವ ಪುಣ್ಯಾಹ ವಾಚನ, ಮಹಾಸಂಕಲ್ಪ, ನವಕುಂಭಾರಾಧನೆ, ರಾಮತಾರಕ ಹೋಮ, ಪಂಚಸೂಕ್ತ ಹೋಮ, ಪರಿವಾರ ಹೋಮ, ಮಹಾಪೂರ್ಣಾಹುತಿ, ಉತ್ಸವ ಮೂರ್ತಿಗೆ ಸ್ನಪನ ತಿರು ಮಂಜನಂ, ವಿಷ್ಣು ಸಹಸ್ರನಾಮ ಪಾರಾಯಣ, ವೇದ ಪಾರಾಯಣ, ದಿವ್ಯ ಪ್ರಬಂಧ ಪಾರಾಯಣ, ಶ್ರೀ ರಾಮಪಟ್ಟಾಭಿಷೇಕ, ಮಹಾಮಂಗಳಾರತಿ ಹಾಗೂ ತೀರ್ಥಪ್ರಸಾದ ವಿನಿಯೋಗ.

ಏ.12ರಂದು ಬೆಳಗ್ಗೆ 6.30ಕ್ಕೆ ಸುಪ್ರಭಾತ, 8 ಗಂಟೆಗೆ ವಿಶ್ವಕ್ಸೇನ ಪೂಜಾ, ಭಗವದ್ ವಾಸುದೇವ ಪುಣ್ಯಾಹ ವಾಚನಂ, ವಸಂತ ಮಾಧವಿ ಪೂಜೆ, ವಸಂತೋತ್ಸವ, ಮಹಾಮಂಗಳಾರತಿ, ಶಾತ್ತುಮುರೈ, ರಾಷ್ಟ್ರಾಶೀರ್ವಾದ ಹಾಗೂ ತೀರ್ಥಪ್ರಸಾದ ವಿನಿಯೋಗವಿರುತ್ತದೆ. ಅಂದು ರಾತ್ರಿ 7.30ಕ್ಕೆ ಶಯನೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಶ್ರೀ ಸೀತಾರಾಮ ಸೇವಾ ಟ್ರಸ್ಟ್ ಸಮಿತಿ ಪ್ರಕಟಣೆ ತಿಳಿಸಿದೆ.

ಮಳವಳ್ಳಿ ಬಳಿ ತೋಟದ ಮನೆ ದರೋಡೆಗೆ ಯತ್ನ ಬಾಗಿಲು ತೆರೆಯದ ಮನೆ ಮೇಲೆ ಗುಂಡಿನ ದಾಳಿ

- ಬೊಗಳಿದ ನಾಯಿಗೂ ಗುಂಡು ಹಾರಿಸಿ ಹತ್ಯೆ
- ಎರಡೆರಡು ಬಾರಿ ದರೋಡೆಗೆ ಯತ್ನ

ಮಳವಳ್ಳಿ, ಏ.6– ಮುಖ ಕಾಣದಂತೆ ಹೆಲ್ಮೆಟ್ ಧರಿಸಿ ಬಂದಿದ್ದ ದರೋಡೆಕೋರರ ಗುಂಪೊಂದು ಮನೆಯೊಂದರ ಮೇಲೆ ದಾಳಿ ನಡೆಸಿ ದರೋಡೆಗೆ ಯತ್ನಿಸಿದ್ದಲ್ಲದೆ, ಬಾಗಿಲು ತೆಗೆಯದ ಮನೆ ಮತ್ತು ಬೊಗಳಿದ ನಾಯಿ ಮೇಲೆ ಗುಂಡು ಹಾರಿಸಿರುವ ಘಟನೆ ತಾಲೂಕಿನ ಶೆಟ್ಟಹಳ್ಳಿಯಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದೆ.

ಗ್ರಾಮದ ನಿವಾಸಿ ರಾಚಯ್ಯ ಅವರ ಪುತ್ರ ಶಿವಕುಮಾರ್ ಎಂಬುವರ ಮನೆ ಮೇಲೆ ಈ ದರೋಡೆ ಯತ್ನ ನಡೆದಿದ್ದು, ಗುಂಡೇಟಿನಿಂದ ಸಾಕು ನಾಯಿ ಸಾವನ್ನಪ್ಪಿದೆ.

ಶಿವಕುಮಾರ್ ಶೆಟ್ಟಹಳ್ಳಿ ಗ್ರಾಮದ ಹೊರವಲಯದ ತೋಟದಲ್ಲಿ ಮನೆ ಯೊಂದನ್ನು ಕಟ್ಟಿಕೊಂಡು ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದರು. ಜೊತೆಗೆ ನಾಯಿಯೊಂದನ್ನು ಸಹ ತಮ್ಮ ರಕ್ಷಣೆಗೆ ಸಾಕಿಕೊಂಡಿದ್ದರು.

ಭಾನುವಾರ ತಡರಾತ್ರಿ ಸುಮಾರು ಎರಡು ಗಂಟೆ ವೇಳೆಗೆ ಮನೆಯ ಬಾಗಿಲನ್ನು ಯಾರೋ ಡಬಡಬ ಎಂದು ಗುದ್ದಿ ಶಬ್ದ ಮಾಡಲಾರಂಭಿಸಿದರು. ಇದರಿಂದ ಮಲಗಿದ್ದ ಮನೆಯವರು ಎಚ್ಚರಗೊಂಡು ಇಷ್ಟು ತಡರಾತ್ರಿಯಲ್ಲಿ ಮನೆಗೆ ಯಾರೂ ಬಂದಿರಬಹುದು ಎಂದು ಅನುಮಾನಗೊಂಡು ಬಾಗಿಲು ತೆರೆಯಲಿಲ್ಲ. ಇದನ್ನೆಲ್ಲ ನೋಡುತ್ತಿದ್ದ ಸಾಕು ನಾಯಿ ಜೋರಾಗಿ ಬೊಗಳಲು ಆರಂಭಿಸಿತು.

ಬಾಗಿಲು ಎಷ್ಟು ಬಡಿದರೂ ಬಾಗಿಲು ತೆರೆಯದಿದ್ದರಿಂದ ಮನೆಯ ಮೇಲೆ ಗುಂಡು ಹಾರಿಸಿದ್ದಾರೆ. ಜೊತೆಗೆ ನಾಯಿ ಒಂದೇ ಸಮನೆ ಬೊಗಳುತ್ತಿದ್ದ ನಾಯಿ ಮೇಲೂ ಗುಂಡು ಹಾರಿಸಿ ಅಲ್ಲಿಂದ ಜಾಗ ಖಾಲಿ ಮಾಡಿದ್ದಾರೆ. ನಾಲ್ಕೈದು ಮಂದಿ ಓಡಾಡುವ ಶಬ್ದ ಮತ್ತು ಬಾಗಿಲು ಬಡಿಯುತ್ತಿದ್ದ ಶಬ್ದ ಹಾಗೂ ನಾಯಿ ಬೊಗಳುವ ಶಬ್ದ ನಿಂತ ಸುಮಾರು ಸಮಯದ ಬಳಿಕ ಮನೆಯವರು ಧೈರ್ಯದಿಂದ ಬಾಗಿಲು ತೆರೆದು ನೋಡಿದಾಗ ದರೋಡೆಕೋರರು ಅಲ್ಲೆಲ್ಲ ಓಡಾಡಿದ ಕುರುಹುಗಳು ಕಂಡು ಬಂದಿತ್ತು. ಜೊತೆಗೆ ಸಾಕು ನಾಯಿ ಸಾವನ್ನಪ್ಪಿತ್ತು.

ಇದೇ ವೇಳೆ ದುಷ್ಕರ್ಮಿಗಳು ಮತ್ತೆ ಬೈಕ್‌ನಲ್ಲಿ ಮನೆಯತ್ತ ವಾಪಸಾಗುತ್ತಿರುವುದನ್ನು ಕಂಡ ಕುಟುಂಬಸ್ಥರು ಮತ್ತೆ ಮನೆಯೊಳಗೆ ಓಡಿ ಹೋಗಿ ಬಾಗಿಲು ಹಾಕಿಕೊಂಡಿದ್ದಾರೆ. ಪುನಃ ಮನೆಯ ಬಳಿ ಆಗಮಿಸಿದ ಆಗಂತುಕರು, ಬಾಗಿಲು ತೆರೆಯುವಂತೆ ಬೆದರಿಕೆ ಹಾಕಿದ್ದಾರೆ. ಬಾಗಿಲು ತೆರೆಯದಿದ್ದಾಗ ಕಿಟಕಿಯ ಮೂಲಕ ಎರಡು ಸುತ್ತು ಗುಂಡು ಹಾರಿಸಿದ್ದಾರೆ. ಪರಿಣಾಮ ಕಿಟಕಿಯ ಗಾಜುಗಳು ಪುಡಿಪುಡಿಯಾಗಿದೆ. ಕುಟುಂಬಸ್ಥರು ಭಯದಿಂದ ಕೂಗಲಾರಂಭಿಸಿದಾಗ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ.

ದರೋಡೆಕೋರರು ಸುಮಾರು 25ರಿಂದ 30 ವರ್ಷದೊಳಗಿನ ಮೂವರು ದುಷ್ಕರ್ಮಿಗಳು ಒಂದೇ ಬೈಕ್‌ನಲ್ಲಿ ಬಂದಿದ್ದು, ತಲೆ ಮತ್ತು ಮುಖಗಳು ಮುಚ್ಚಿರುವಂತೆ ಹೆಲ್ಮೆಟ್ ಧರಿಸಿದ್ದರು. ಸ್ಥಳೀಯ ಶೈಲಿ ಕನ್ನಡ ಭಾಷೆಯಲ್ಲೇ ಮಾತನಾಡುತ್ತಿದ್ದರು ಎಂದು ಮನೆಯ ಮಾಲೀಕ ಶಿವಕುಮಾರ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಘಟನೆಯಿಂದ ಗ್ರಾಮದಲ್ಲಿ ಆತಂಕ ನಿರ್ಮಾಣವಾಗಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸ್‌ಪಿ ಭೇಟಿ: 112 ಮೂಲಕ ಮಾಹಿತಿ ತಿಳಿದ ಪೊಲೀಸರು ಕೂಡಲೇ ಘಟನಾ ಸ್ಥಳಕ್ಕೆ ಆಗಮಿಸಿದ್ದಾರೆ. ವಿಷಯ ತಿಳಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭ ರಾಣಿ ಮತ್ತು ಡಿವೈಎಸ್ಪಿ ಯಶವಂತ ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬೆರಳಚ್ಚು ಮತ್ತು ಶ್ವಾನದಳ ಸಹ ಸ್ಥಳಕ್ಕೆ ಭೇಟಿ ನೀಡಿತ್ತು.

ಇಂದು ಮೈಸೂರಲ್ಲಿ ವಿಶೇಷ ಉಪನ್ಯಾಸ

ಮೈಸೂರು: ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ಮತ್ತು ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (ಕಾಸ್ಮೋಸ್–ಮೈಸೂರು), ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ ವತಿಯಿಂದ ಏ.7ರಂದು ಸಂಜೆ 5:30 ಗಂಟೆಗೆ ಡಾ.ಶೈಲಜಾ ಅವರಿಂದ ದೇವಾಲಯಗಳಲ್ಲಿ ಖಗೋಳ ವಿಜ್ಞಾನ–ವಾಸ್ತುಶಿಲ್ಪ, ಕಲೆ ಮತ್ತು ಕಾಲಗಣನೆ ಕುರಿತು ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿದೆ. ಈ ಉಪನ್ಯಾಸವು ಚಾಮರಾಜ ಮೊಹಲ್ಲಾ, ಬೌಲೇವಾರ್ಡ್, ಮೈಸೂರಿನ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನ ಲೆಕ್ಚರ್ ಹಾಲ್–1, 2ರಲ್ಲಿ ನಡೆಯಲಿದೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತ.

ನಿಧನ



ಶ್ರೀನಿವಾಸರಾವ್ ಎಸ್.ಕೆ.

ಮೈಸೂರು,ಏ.6–ಕುವೆಂಪುನಗರ ನಿವಾಸಿ ಹಾಗೂ ನಿವೃತ್ತ ಅರೋಗ್ಯ ನಿರೀಕ್ಷಕರಾದ ಶ್ರೀನಿವಾಸರಾವ್ ಎಸ್.ಕೆ. (86) ಏ.1ರ ಸಂಜೆ ನಿಧನರಾದರು. ಮೃತರು ಪತ್ನಿ ಶ್ರೀಮತಿ ಮಧುರ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಏ.2ರಂದು ಚಾಮುಂಡಿ ಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಅಬ್ಬಾಸ್ ಷರೀಫ್ ಸಾಹೇಬ್



ಮೈಸೂರಿನ ಕಲ್ಯಾಣಗಿರಿ ನಿವಾಸಿ ಅಬ್ಬಾಸ್ ಷರೀಫ್ ಸಾಹೇಬ್ (84) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು 6 ಜನ ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಅಪಾರ ಬಂಧುಗಳು, ಸ್ನೇಹಿತರನ್ನು ಅಗಲಿದ್ದಾರೆ. ಈ ಸಂಬಂಧ ಏ. 5 (ಭಾನುವಾರ) ಮಧ್ಯಾಹ್ನ 1.30 ಗಂಟೆಗೆ ಝೊಹರ್ ಪ್ರಾರ್ಥನೆಯ ನಂತರ ದರ್ಗಾಹಿ ಮಸೀದಿ, ಸಾಡೇ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು ಇಲ್ಲಿ ನವಾಜ್–ಎ–ಜನಾಜಾ (ಅಂತ್ಯಕ್ರಿಯೆಯ ಪ್ರಾರ್ಥನೆ) ನೆರವೇರಿದ ನಂತರ ಮೈಸೂರಿನ ಮಂಡಿ ಮೊಹಲ್ಲಾ, ಜೈಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿಯಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಿಸ್ವಾಮಿ



ಮೈಸೂರಿನ ಕೆ.ಸಿ.ಬಡಾವಣೆ ನಿವಾಸಿ ಮರಿಸ್ವಾಮಿ (82) ಸೋಮವಾರ ಬೆಳಗ್ಗೆ ನಿಧನರಾದರು. ಇವರು ಶಾಸಕರು ಮತ್ತು ಸಂಸದರಿಗೆ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ ಲಕ್ಷ್ಮಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೊಹಮ್ಮದ್ ಝಹೀರುಲ್ಲಾ

ಮೈಸೂರಿನ ರಾಜೀವ್‌ನಗರ ನಿವಾಸಿ ಮೊಹಮ್ಮದ್ ಝಹೀರುಲ್ಲಾ (67) ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ, ಸಹೋದರ ಮೊಹಮ್ಮದ್ ನಜೀಬುಲ್ಲಾ, ಸಿವಿಲ್ ಕಂಟ್ರಾಕ್ಟರ್, ಎಂಸಿಸಿ, ಮತ್ತು ಜಂಟಿ ಕಾರ್ಯದರ್ಶಿ, ಮಸೀದಿ ಕ್ಯೂಬಾ ವ್ಯವಸ್ಥಾಪಕ ಸಮಿತಿ, ಉದಯಗಿರಿ, ಮೈಸೂರು ಹಾಗೂ ಹಿತೈಷಿಗಳು, ಸಂಬಂಧಿಕರು ಮತ್ತು ಅಪಾರ ಬಂಧುಗಳು, ಸ್ನೇಹಿತರನ್ನು ಅಗಲಿದ್ದಾರೆ. ಈ ಸಂಬಂಧ ಸೋಮವಾರ ಸಂಜೆ 5.15 ಗಂಟೆಗೆ ಕೂಬಾ ಮಸೀದಿ, ಸೈಯದ್ ಅಬ್ದುಲ್ ರೆಹಮಾನ್ ರಸ್ತೆ, ಉದಯಗಿರಿ, ಮೈಸೂರು ಇಲ್ಲಿ ನಮಾಜ್–ಎ–ಜನಾಜಾ (ಅಂತ್ಯಕ್ರಿಯೆ ಪ್ರಾರ್ಥನೆ) ಬಳಿಕ ಮೈಸೂರಿನ ಮಂಡಿ ಮೊಹಲ್ಲಾ, ಜೈಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿಯಲ್ಲಿ ಮೃತರ ಅಂತ್ಯ ಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಏ.11, ಸೃಜನಾತ್ಮಕ ಬರವಣಿಗೆ, ಕಥನ ಕಾರ್ಯಾಗಾರ

ಮೈಸೂರು: ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಂಗ ಸಂಸ್ಥೆಯಾದ ಮೈಸೂರಿನ ವಿವೇಕಾನಂದ ಭಾರತೀಯ ಅಧ್ಯಯನ ಸಂಸ್ಥೆ ವತಿಯಿಂದ ಯುವ ಕಲಿಕಾರ್ಥಿಗಳ ಕಲ್ಪನಾ ಶಕ್ತಿ, ಸಂವಹನ ಕೌಶಲ್ಯಗಳನ್ನು ವೃದ್ಧಿಸುವ ಉದ್ದೇಶದಿಂದ ಸೃಜನಾತ್ಮಕ ಬರವಣಿಗೆ ಮತ್ತು ಕಥನ ಕಾರ್ಯಾಗಾರವನ್ನು ಏ.11ರಂದು ರಿಂಗ್‌ರೋಡ್, ಹೆಬ್ಬಾಳ್‌ನಲ್ಲಿರುವ ವಿವೇಕಾನಂದ ಭಾರತೀಯ ಅಧ್ಯಯನ ಸಂಸ್ಥೆಯಲ್ಲಿ ಬೆಳಗ್ಗೆ 9.30 ರಿಂದ ಸಂಜೆ 4ರವರೆಗೆ ಆಯೋಜಿಸಲಾಗಿದೆ.

ಕಾರ್ಯಾಗಾರದಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಏ.9ರ ಸಂಜೆ 5 ಗಂಟೆಯೊಳಗೆ ತಮ್ಮ ಹೆಸರನ್ನು ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗೆ ಮೊ: 86601 41467 ಮೂಲಕ ಸಂಪರ್ಕಿಸಬಹುದು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಜಿ.ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಅರುಣ್ ಕುಮಾರ್ ಕೆ.ಎಸ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಶಾಸನಗಳ ಹಿನ್ನೆಲೆಯಲ್ಲಿ ತಿರುಮಕೂಡಲು ನರಸೀಪುರ ತಾಲೂಕು: ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಏ.20ಕ್ಕೆ ಮೈಸೂರಲ್ಲಿ ಬಸವ ಜಯಂತಿ

ಬಸವಣ್ಣನವರ ತತ್ವ ಸಿದ್ಧಾಂತ ಪ್ರಸಾರದೊಂದಿಗೆ ಅರ್ಥಪೂರ್ಣ ಆಚರಣೆಗೆ ಸಿದ್ದತೆ; ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆ ನಡೆಯಿತು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಎಡಿಸಿ ಡಾ.ಪಿ.ಶಿವರಾಜು, ಜಿಪಂ ಸಿಇಓ ಯುಕೇಶ್‌ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಇತರರಿದ್ದರು.

ಮೈಸೂರು, ಏ.6(ಎಂಕೆ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಪಾಲಿಕೆ ವತಿಯಿಂದ ಏ.20ರಂದು ಮೈಸೂರಲ್ಲಿ ರಾಜ್ಯಮಟ್ಟದ ಬಸವ ಜಯಂತಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್‌ರೆಡ್ಡಿ ತಿಳಿಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆ ನಡೆಸಿದ ಅವರು, ಬಸವಣ್ಣನವರ ತತ್ವ ಹಾಗೂ ಆದರ್ಶಗಳನ್ನು ತಿಳಿಸುವ ನಿಟ್ಟಿನಲ್ಲಿ ವಿಜೃಂಭಣೆ ಜೊತೆಗೆ ಅರ್ಥಪೂರ್ಣವಾಗಿ ಬಸವ ಜಯಂತಿ ಆಚರಿಸಲಾಗುವುದು ಎಂದರು.

ಅಂದು ಬೆಳಗ್ಗೆ 10 ಗಂಟೆಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಮೀಪದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು. ನಂತರ ಕಲಾಮಂದಿರದಲ್ಲಿ ಬಸವಣ್ಣನವರ ವಿಚಾರಗಳನ್ನು ತಿಳಿಸುವ ನಿಟ್ಟಿನಲ್ಲಿ ವಚನ ಗಾಯನ, ಉಪನ್ಯಾಸ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಬಸವ ಜಯಂತಿ ಕಾರ್ಯಕ್ರಮದಲ್ಲಿ ಯಾವುದೇ ಲೋಪ ಉಂಟಾಗದಂತೆ ಶಿಷ್ಟಾಚಾರದ ಪ್ರಕಾರ ಎಲ್ಲರನ್ನೂ ಆಹ್ವಾನಿಸಿ ಅರ್ಥಪೂರ್ಣ ಮತ್ತು ಅದ್ಧೂರಿಯಾಗಿ ಆಚರಿಸಲು ವಿವಿಧ ಸಮಿತಿಗಳನ್ನು ರಚಿಸಲಾಗುವುದು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಮಾತನಾಡಿ, ಬಸವ ಜಯಂತಿ ಆಚರಣೆಗೆ ಸಂಘ–ಸಂಸ್ಥೆಗಳ ಸಹಯೋಗ ಮುಖ್ಯವಾಗಿದ್ದು, ಬಸವ ಬಳಗದ ಒಕ್ಕೂಟ ಸೇರಿದಂತೆ ವಿವಿಧ ಸಂಸ್ಥೆಗಳು ನೀಡಿರುವ ಸಲಹೆಗಳ ಸ್ವೀಕರಿಸಿ, ಸಂಘ–ಸಂಸ್ಥೆಗಳ ಸದಸ್ಯರು ಹಾಗೂ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗುವುದು. ಸಮಿತಿವಾರು ಸಭೆಗಳನ್ನು ನಡೆಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಚರಿಸಲಾಗುವುದು ಎಂದು ಹೇಳಿದರು.

ಶಂಕುಸ್ಥಾಪನೆಯಾಗಬೇಕು: ಬಸವ ಬಳಗ ಒಕ್ಕೂಟದ ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್ ಮಾತನಾಡಿ, ಬಸವ ಜಯಂತಿಯ ದಿನದಂದೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಬಸವಣ್ಣನವರ ಪುತ್ಥಳಿ ಸ್ಥಾಪನೆಗೆ ಶಂಕುಸ್ಥಾಪನೆ ಮಾಡುವುದು ಉತ್ತಮ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಪ್ರಯತ್ನಿಸುವಂತೆ ಮನವಿ ಮಾಡಿದರು. ಜಿಪಂ ಸಿಇಓ ಯುಕೇಶ್‌ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಎಎಸ್‌ಪಿ ಮಲ್ಲಿಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಉಪಸ್ಥಿತರಿದ್ದರು.

ಏ.19ರಂದು ಸಂಘ–ಸಂಸ್ಥೆಗಳಿಂದ ಮೆರವಣಿಗೆ...

“ಮೈಸೂರು ಜಿಲ್ಲಾಡಳಿತದ ಸಹಯೋಗದೊಂದಿಗೆ ಬಸವ ಬಳಗಗಳ ಒಕ್ಕೂಟದ ವತಿಯಿಂದ ಏ.19ರಂದು ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಅದೇ ದಿನ ಸಂಜೆ ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ ಪ್ರದರ್ಶನ ಇರಲಿದ್ದು, ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಗುವುದು. ಏ.20ರಂದು ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ.

–ಎಂ.ಚಂದ್ರಶೇಖರ್, ಅಧ್ಯಕ್ಷ, ಮೈಸೂರು ಬಸವ ಬಳಗಗಳ ಒಕ್ಕೂಟ.

ಇಂದಿನಿಂದ ಉಚಿತ ಹೃದ್ರೋಗ ತಪಾಸಣಾ ಶಿಬಿರ

ಮೈಸೂರು,ಏ.6–ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಏ.7 ರಿಂದ 11ರವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರವನ್ನು ಆಯೋಜಿಸಿದೆ. ಹೃದಯ ಶಸ್ತ್ರಚಿಕಿತ್ಸಾ ತಜ್ಞವೈದ್ಯ ಡಾ. ಜಯಕುಮಾರ್ ಪಿ. ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಇಸಿಜಿ., ಲಿಪಿಡ್ ಪ್ರೊಫೈಲ್, ಆರ್‌ಬಿಎಸ್, ಎಕೋ ಸ್ಕ್ರೀನಿಂಗ್, ಟಿಎಂಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಮಾಹಿತಿಗೆ 0821–2533600, 9986399862 ಸಂಪರ್ಕಿಸಿ.

ಬಿಜೆಪಿ ಮುಖಂಡರಿಂದ ಮೈಸೂರಲ್ಲಿ ಧುರಂಧರ್–2 ಸಿನಿಮಾ ವೀಕ್ಷಣೆ...



ಮೈಸೂರು ಜಯಲಕ್ಷ್ಮಿಪುರಂನ ಡಿಆರ್‌ಸಿ ಚಿತ್ರಮಂದಿರದಲ್ಲಿ ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಚಾಮರಾಜ ಕ್ಷೇತ್ರದ ಕಾರ್ಯಕರ್ತರೊಂದಿಗೆ ದುರಂಧರ್–2 ಸಿನಿಮಾ ವೀಕ್ಷಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯರಾದ ರಂಗಸ್ವಾಮಿ, ಎಂ.ಚಿಕ್ಕವೆಂಕಟು, ರವೀಂದ್ರ, ಎಂ.ಎಸ್.ಪುನೀತ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಡಿ.ಕುಮಾರ್, ಗೋಕುಲಂ ವಿ.ಮಧು, ಎನ್.ಯೋಗಾನಂದ್, ಸಂತೋಷ, ರಾಘವ್‌ಗೌಡ ಇನ್ನಿತರರು ಉಪಸ್ಥಿತರಿದ್ದರು.

ಏ.9ಕ್ಕೆ ಪ್ರೌಢಶಾಲೆ, ಏ.10 ಪ್ರಾಥಮಿಕ ಶಾಲೆಗಳಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮ

ಮೈಸೂರು,ಏ.6(ಎಸ್‌ಪಿಎನ್)–ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ 2025–26ನೇ ಸಾಲಿನ ಎರಡನೇ ಸಮುದಾಯ ದತ್ತ ಶಾಲಾ ಕಾರ್ಯಕ್ರಮವನ್ನು ಏ.9ರಂದು ಪ್ರೌಢಶಾಲೆ, ಏ.10 ಪ್ರಾಥಮಿಕ ಶಾಲೆಗಳಲ್ಲಿ ಹಮ್ಮಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ, ರಾಜ್ಯದ ಎಲ್ಲಾ ಡಿಡಿಪಿಐಗಳಿಗೆ ಸೂಚಿಸಿದೆ.

ಎಸ್‌ಡಿಎಂಸಿ ಸದಸ್ಯರಿಗೆ, ವಿದ್ಯಾರ್ಥಿಗಳ ಪೋಷಕರಿಗೆ ಸಮುದಾಯದತ್ತ ಶಾಲೆ ಕುರಿತು ಮಾಹಿತಿ ನೀಡುವುದು. ಏ.8ರಿಂದ ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಕಾರ್ಯ ಆರಂಭವಾಗುವುದರಿಂದ ಮೌಲ್ಯ ಮಾಪನಕ್ಕೆ ನಿಯೋಜನೆಗೊಳ್ಳದ ಪ್ರೌಢಶಾಲಾ ಸಹಶಿಕ್ಷಕರು ಏ.9ರಂದು ಸಮುದಾಯದತ್ತ ಶಾಲೆ ಕಾರ್ಯಕ್ರಮ ಆಯೋಜಿಸಬೇಕು. 6ರಿಂದ 18ರ ವಯೋಮಾನದ ಮಕ್ಕಳನ್ನು ಪುನಃ ಶಾಲಾ–ಕಾಲೇಜಿಗೆ ಕರೆ ತರಲು ಹಾಗೂ 2026–27ನೇ ಸಾಲಿನ ದಾಖಲಾತಿಗೆ ಸಂಬಂಧಿಸಿದಂತೆ ಜನವಸತಿ ಪ್ರದೇಶದ ಅರ್ಹ ವಯೋಮಾನದ ಮಕ್ಕಳನ್ನು ಗುರುತಿಸಿ ಶಾಲೆಗೆ ದಾಖಲಿಸಲು ದಾಖಲಾತಿ ಜಾಗೃತಿ ಅಭಿಯಾನ ಆರಂಭಿಸಬೇಕು. ಈ ಕಾರ್ಯಕ್ರಮವು ನವೆಂಬರ್–2025ರಿಂದ ಜೂನ್–2026 ರವರೆಗೆ ಜಾರಿಯಲ್ಲಿರುತ್ತದೆ. ಈ ಕುರಿತು ಪೋಷಕರು ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸಿ ದಾಖಲಾತಿ ಅಭಿಯಾನ ಪ್ರಾರಂಭಿಸುವಂತೆ ಇಲಾಖೆ ಆದೇಶಿಸಿದೆ.

ಮೌಲ್ಯಮಾಪನ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಮೈಸೂರು: ಮೈಸೂರು ನಗರದಲ್ಲಿ 2025–26ರ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕಾರ್ಯವು 6 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುತ್ತದೆ. ಮೌಲ್ಯಮಾಪನದ ಪಾವಿತ್ರ್ಯತೆಯನ್ನು ಕಾಪಾಡುವ ಸಲುವಾಗಿ, ಮೌಲ್ಯಮಾಪನ ಕೇಂದ್ರಗಳಿಗೆ ಅನಗತ್ಯ ವ್ಯಕ್ತಿಗಳು ಮತ್ತು ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಬೇಕಾಗಿರುವುದರಿಂದ ಮೌಲ್ಯಮಾಪನ ಕಾರ್ಯ ಮುಗಿಯುವವರೆಗೂ 6 ಮೌಲ್ಯಮಾಪನ ಕೇಂದ್ರಗಳ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶ ಹೊರಡಿಸಲಾಗಿದೆ.

ಗೋಪಾಲಸ್ವಾಮಿ ಶಿಶುವಿಹಾರ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಲಕ್ಷ್ಮೀಪುರಂ, ಚಿನ್ಮಯ ವಿದ್ಯಾಲಯ, ಜಯಲಕ್ಷ್ಮೀಪುರಂ, ಜ್ಞಾನಗಂಗಾ ಪ್ರೌಢಶಾಲೆ ಕುವೆಂಪುನಗರ, ಗುಡ್ ಶೆಫರ್ಡ್ ಕಾನ್ವೆಂಟ್ ಪ್ರೌಢಶಾಲೆ, ಲಷ್ಕರ್ ಮೊಹಲ್ಲಾ, ಸೇಂಟ್ ಫಿಲೋಮಿನಾ ಪ್ರೌಢಶಾಲೆ ಎನ್.ಆರ್. ಮೊಹಲ್ಲಾ, ನಿರ್ಮಲ ಪ್ರೌಢಶಾಲೆ, ವಿ.ವಿ. ಮೊಹಲ್ಲಾ ಪರೀಕ್ಷಾ ಕೇಂದ್ರಗಳಾಗಿವೆ.

ಈ ಕೇಂದ್ರಗಳಿಗೆ ಮೌಲ್ಯಮಾಪನಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ

ನಾಳೆ ಕರ್ನಾಟಕ ಲೋಕಾಯುಕ್ತರಿಂದ ದೂರು ಸ್ವೀಕಾರ

ಮೈಸೂರು,ಏ.6–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಏ.8ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲೂಕು, ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ..

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.4.2026 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026 ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಮೈಸೂರು ಅರಿವು ಸಂಸ್ಥೆ, ಸುಯೋಗ ಆಸ್ಪತ್ರೆ :** ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ವಾಯು ವಿಹಾರಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆಯ ಡಾ. ಎಸ್.ಪಿ. ಯೋಗಣ್ಣ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್ ಗೌಡ, ಕೆಎಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸ್ಥಳ: ಕುಕ್ಕರಹಳ್ಳಿ ಕೆರೆ (ರೈಲ್ವೆ ಗೇಟ್) ಬಳಿ, ಬೆಳಗ್ಗೆ 8 ರಿಂದ.
- **ಮೈಸೂರು ನಗರ ಪೊಲೀಸ್, ತಾತ್ಕಾಲಿಕ ತರಬೇತಿ ಶಾಲೆ, ಸಿಎಆರ್, ಮೈಸೂರು ನಗರ :** 8ನೇ ತಂಡದ ಸಶಸ್ತ್ರ ಪೊಲೀಸ್ ಪರೀಕ್ಷಾರ್ಥಿಗಳ ನಿರ್ಗಮನ ಪಥ ಸಂಚಲನ, ಕವಾಯತು ಪರಿವೀಕ್ಷಣೆ ಹಾಗೂ ಬಹುಮಾನ ವಿತರಣೆ : ಐಜಿಪಿ ದಕ್ಷಿಣ ವಲಯ ಡಾ. ಎ.ಬಿ. ಬೋರಲಿಂಗಯ್ಯ, ಮುಖ್ಯ ಅತಿಥಿಗಳು : ನಗರ ಪೊಲೀಸ್ ಆಯುಕ್ತೆ ಶ್ರೀಮತಿ ಸೀಮಾ ಲಾಟ್ಕರ್, ಉಪ ಪೊಲೀಸ್ ಆಯುಕ್ತರಾದ ಕೆ.ಎಸ್. ಸುಂದರ್‌ರಾಜು, ಡಾ. ಹರ್ಷಾ ಪ್ರಿಯಂವದಾ, ಸ್ಥಳ: ಸಿಎಆರ್ ಕವಾಯತು ಮೈದಾನ, ಬೆಳಗ್ಗೆ 8ಕ್ಕೆ.
- **ದಕ್ಷ ಕಾಲೇಜು :** ದಕ್ಷ ದ್ವಿತೀಯ ವಾರ್ಷಿಕ ಹಬ್ಬ, ಪದವಿ ವಿದ್ಯಾರ್ಥಿಗಳಿಗಾಗಿ ವೃತ್ತಿಪರ ಕೌಶಲ್ಯಾಭಿವೃದ್ಧಿ ಕಾರ್ಯಾಗಾರ, ರಾಂಪ್ ವಾಕ್, ಸಮೂಹ ನೃತ್ಯ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಖ್ಯ ಅತಿಥಿಗಳು : ಬಿಗ್‌ಬಾಸ್–10ರ ವಿಜೇತ ಕಾರ್ತಿಕ್ ಮಹೇಶ್, ಯಶಸ್ವಿನಿ, ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಡಿ. ಸುರೇಶ್‌ಕುಮಾರ್, ಸ್ಥಳ: ಕಲ್ಚರಲ್ ಹಾಲ್, ದಕ್ಷ ಕಾಲೇಜು, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ :** ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಶ್ರೀರಾಮ ಸೇವಾ ಮಂಡಳಿ :** 73ನೇ ವರ್ಷದ ಶ್ರೀರಾಮೋತ್ಸವ, ಶ್ರೀ ಹನುಮಂತೋತ್ಸವ, ಸಂಜೆ 7ಕ್ಕೆ ವಿವೇಕಾನಂದನಗರದ ದತ್ತ ಭಜನಾ ಮಂಡಳಿಯಿಂದ ಭಜನೆ, ಶ್ರೀ ರಾಮಚಂದ್ರಸ್ವಾಮಿಗೆ ಶಯನೋತ್ಸವದ ಅಲಂಕಾರ, ಸ್ಥಳ: ಶ್ರೀ ಅವನಿ ಶಂಕರ ಮಠ, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ ವಿದ್ಯಾರಣ್ಯಪುರಂ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ :** ಶ್ರೀಮತಿ ಕಮಲಮ್ಮ ಮತ್ತು ಪ್ರೊ. ಜಿ.ಎ. ಶಿವಲಿಂಗಯ್ಯ ಶರಣ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ ಹಾಗೂ ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪ್ರದಾನ : ಹಿರಿಯ ಸಾಹಿತಿ ಪ್ರೊ. ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಬಿ. ಜಯಪ್ರಕಾಶ್‌ಗೌಡ, ಪ್ರಶಸ್ತಿ ಪುರಸ್ಕೃತರು : ಡಾ.ಬಿ.ವಿ.ವಸಂತಕುಮಾರ, ಪ್ರೊ. ಕಲ್ಯಾಣರಾವ್ ಜಿ. ಪಾಟೀಲ, ಡಾ.ಎಸ್.ದೇವಿಕ, ಡಾ.ಕಾಂತೇಶರೆಡ್ಡಿ ಗೋಡಿಹಾಳ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ, ದತ್ತಿ ದಾಸೋಹಿ : ನಿವೃತ್ತ ಅಧ್ಯಾಪಕ ಪ್ರೊ. ಜಿ.ಎ. ಶಿವಲಿಂಗಯ್ಯ, ನೀಲಗಂಗಾ ಮಹಿಳಾ ಬಳಗದಿಂದ ವಚನ ಗಾಯನ, ಸ್ಥಳ:ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.
- **ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್ ಮತ್ತು ಕಾಸ್ಮಾಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (ಕಾಸ್ಮೋಸ್–ಮೈಸೂರು), ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ :** ಡಾ. ಬಿ. ಎಸ್. ಶೈಲಜಾ ಅವರಿಂದ ದೇವಾಲಯಗಳಲ್ಲಿ ಖಗೋಳ ವಿಜ್ಞಾನ – ವಾಸ್ತುಶಿಲ್ಪ, ಕಲೆ ಮತ್ತು ಕಾಲಗಣನೆ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಚಾಮರಾಜ ಮೊಹಲ್ಲಾ, ಬೌಲೇವಾರ್ಡ್, ಮೈಸೂರಿನ ಒಡೆಯರ್ ಸೆಂಟರ್ ಫಾರ್ ಆರ್ಕಿಟೆಕ್ಚರ್‌ನ ಲೆಕ್ಚರ್ ಹಾಲ್, ಸಂಜೆ 5.30ಕ್ಕೆ
- **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ವಿದುಷಿ ಶ್ರೀಪ್ರದ ಅವರಿಂದ ವೀಣಾವಾದನ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.
- **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ಶ್ರೀರಾಮಚಂದ್ರನಿಗೆ ಶಯನೋತ್ಸವ. ಶಿವರಾಂಪೇಟೆಯ ಶ್ರೀ ಹರಿವಾಯು ಭಜನಾ ಮಂಡಳಿಯಿಂದ ಭಜನೆ. ಸ್ಥಳ: ದೇವಸ್ಥಾನದ ಆವರಣ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎ.ಎನ್.ಶೀಲಾ ಹಾಗೂ ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ: ಡಾ.ಮ.ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ, ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ನಂದೀಶ್ ಕೆ.ಸಿ. ಅವರೊಂದಿಗೆ ಸಂದರ್ಶನ, ಸಂದರ್ಶಕರು: ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಶ್ರೀರಾಮ್ ಭಟ್ –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ ಬಿ.ಜಿ. ಕವಿತಾ ಹಾಗೂ ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ–ಭಾರತೀಯ ಚಿಂತನಾ ಪ್ರಸ್ಥಾನದಲ್ಲಿ ತಂತ್ರಸಾಹಿತ್ಯ ಈ ಕುರಿತು ಮಾತನಾಡುತ್ತಾರೆ ವಿಶ್ರಾಂತ ಪ್ರಾಂಶುಪಾಲರು ಹಾಗೂ ಲೇಖಕರೂ ಆದ ಮಹೇಶ್ ಹರವೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ನಯನಾ ನಾಗರಾಜ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಪದ್ಮಶಂಕರ್–ವಯೋಲಿನ್ ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ, 5.00 ಪ್ರಾಯೋಜಿತ ಕಾರ್ಯಕ್ರಮ, ನಿರಾಮಯ–ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು–ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು, ಭಾಗವಹಿಸುತ್ತಾರೆ ಮೂಳೆ ಹಾಗೂ ಕೀಲುರೋಗ ತಜ್ಞರಾದ ಡಾ. ಅಮೃತ್, ವಿಷಯ–Osteoarthritis ಅಂದರೆ ಮೊಣಕಾಲಿನ ಅಸ್ಥಿ ಸಂಧಿವಾತ ಲಕ್ಷಣಗಳು ಮತ್ತು ಚಿಕಿತ್ಸೆ, ಪ್ರಸ್ತುತಿ–ಡಾ.ಕುಲದೀಪ್ ಹಾಗೂ ತೇಜಸ್ವಿನಿ ಗಿರೀಶ್, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಗೊಣ್ಣೆ ಹುಳುವಿನ ಸಮಗ್ರ ನಿರ್ವಹಣಾ ಕ್ರಮಗಳು ಈ ಕುರಿತು ಚಾಮರಾಜನಗರ ತಾಲ್ಲೂಕು ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಶಿವರಾಯ್ ನಾವಿ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್ –ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ .ಬಿ, 8.00 ನಾಟಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಲಿತಾ ಹರಿಪ್ರಿಯಾ–ಹಾಡುಗಾರಿಕೆ, 10.00 ಚೈತ್ರವನ– ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ.ಎಸ್. ಶಂಕರನಾರಾಯಣ

ವಿಶ್ವಕ್ಕೆ ಸಾಮಾಜಿಕ ನ್ಯಾಯ ಕೊಟ್ಟಿದ್ದು ವೀರಶೈವ–ಲಿಂಗಾಯತ ಸಮುದಾಯ


- ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಭಿಮತ
- ಬಸವ ತತ್ವಗಳ ಪ್ರಸಾರ ಈಗ ಅನಿವಾರ್ಯ

ಬೆಂಗಳೂರು, ಏ.6(ಕೆಎಂಶಿ)– ಸಮ ಸಮಾಜ ನಿರ್ಮಾಣಕ್ಕೆ ಕ್ರಾಂತಿ ಮಾಡಿದ ಬಸವಣ್ಣನ ತತ್ವಾದರ್ಶಗಳು ಸಾರ್ವಕಾಲಿಕ. ಬಸವ ತತ್ವಗಳ ಪ್ರಚಾರ, ಪ್ರಸಾರ ಇಂದಿನ ಅಗತ್ಯವಾಗಿದೆ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ದೇವನಹಳ್ಳಿಯ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವಿಶ್ವಗುರು ಬಸವೇಶ್ವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು, ಹೊನ್ನು, ಮಣ್ಣಿಗಾಗಿ ಜಗತ್ತಿನಲ್ಲಿ ಕ್ರಾಂತಿ ಆಗಿದೆ. ಆದರೆ, ಸರ್ವರ ಸಮಾನತೆಗೆ ಕ್ರಾಂತಿ ನಡೆದಿದ್ದರೆ ಅದು ಕಲ್ಯಾಣದ ಕ್ರಾಂತಿ ಮಾತ್ರ ಎಂದರು.

12ನೇ ಶತಮಾನದಲ್ಲಿ ಮನುಷ್ಯರನ್ನು ಮನುಷ್ಯರಂತೆ ಕಾಣುತ್ತಿರಲಿಲ್ಲ. ಮೌಢ್ಯ, ಅನಕ್ಷರತೆ ಇತ್ತು, ಹೆಣ್ಣಿಗೆ ಸಮಾನತೆ ಇರಲಿಲ್ಲ. ಅಂತಹ ಕಾಲದಲ್ಲಿ ಸ್ವಾತಂತ್ರ್ಯ, ಸಮಾನತೆ, ಕಾಯಕ, ದಾಸೋಹ, ಸಹೋದರತ್ವ, ಸಹಬಾಳ್ವೆ ತಳಹದಿ ಮೇಲೆ ಬಲಿಷ್ಠ ಸುಂದರ ಸಮಾಜ ನಿರ್ಮಾಣಕ್ಕೆ ವಿಶ್ವಗುರು ಬಸವಣ್ಣನ ನೇತೃತ್ವದಲ್ಲಿ ವೈಚಾರಿಕ ಮತ್ತು ವೈಜ್ಞಾನಿಕತೆ ಕ್ರಾಂತಿ ನಡೆಯಿತು.

ಶ್ರೇಣಿರಹಿತ, ವರ್ಗರಹಿತ, ಲಿಂಗಭೇದ ರಹಿತ ಸಮಸಮಾಜ ನಿರ್ಮಾಣಕ್ಕೆ ಬಸವಣ್ಣ ಶ್ರಮಿಸಿದರು. ಜಗತ್ತಿಗೆ ಸಾಮಾಜಿಕ ನ್ಯಾಯ ಕೊಟ್ಟಿದ್ದು ವೀರಶೈವ–ಲಿಂಗಾಯತ ಸಮುದಾಯ ಎಂದು ಪ್ರತಿಪಾದಿಸಿದರು.



ಈಶ್ವರ ಬಿ. ಖಂಡ್ರೆ

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳಿನ ಕಲ್ಪನೆ ನೀಡಿದ ಬಸವಣ್ಣ ವಿಶ್ವದ ಪ್ರಥಮ ಸಂಸತ್‌ಗೆ ಕಾರಣಕರ್ತರು ಎಂಬ ಕೀರ್ತಿ ಹೊಂದಿರುವ ಅನುಭವ ಮಂಟಪ ಸ್ಥಾಪಿಸಿದರು, 770 ವಿವಿಧ ವೃತ್ತಿ, ಸಮುದಾಯದ ಮಹನೀಯರು ಇದರಲ್ಲಿ ಪಾಲ್ಗೊಳ್ಳುತ್ತಿದ್ದರು, ಇವರೆಲ್ಲರೂ ವಚನಗಳ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆ ತಿಳಿಸಿದರು.

2015ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಧುನಿಕ ಅನುಭವ ಮಂಟಪ ನಿರ್ಮಾಣಕ್ಕೆ ಅನುಮೋದನೆ ನೀಡಿ ಬಜೆಟ್‌ನಲ್ಲಿ ಘೋಷಿಸಿ, ಇದುವರೆಗೆ 280 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಕಾಮಗಾರಿ ಭರದಿಂದ ಸಾಗಿದ್ದು, ಮುಂದಿನ ವರ್ಷದೊಳಗೆ ಲೋಕಾರ್ಪಣೆ ಮಾಡಲಾಗುವುದು ಎಂದರು.

ಜೀವಾಮೃತ ಇರುವ ವಚನಗಳ ಸಾರ ಅರಿತು ನಡೆದರೆ ಬಾಳು ಹಸನಾಗುತ್ತದೆ, ಬಸವಾದಿ ಶರಣರ ವಚನಗಳನ್ನು ಅರಿತು ನಡೆದರೆ ಜನ್ಮ ಸಾರ್ಥಕವಾಗುತ್ತದೆ, ಇಂತಹ ಮಹನೀಯರ ಪುತ್ಥಳಿ, ಪ್ರತಿಮೆಗಳ ಸ್ಥಾಪನೆ ಮಹಾಪುರುಷರ ಆದರ್ಶ ಪಾಲನೆಗೆ ಪ್ರೇರಣೆ ನೀಡುತ್ತದೆ.

ಯುವಶಕ್ತಿ, ಅಣುಶಕ್ತಿಗಿಂತ ಮಿಗಿಲಾದ ಸಮಾಜದ ಆಧಾರಸ್ತಂಭ ಯುವಶಕ್ತಿ ಮುಖ್ಯವಾಹಿನಿಗೆ ಬರಬೇಕು, ಯುವಜನತೆ ದುಶ್ಚಟ, ದುರ್ಗುಣಗಳಿಗೆ ಬಲಿಯಾಗಬಾರದು, ಸಮಾಜದ ಆಸ್ತಿಯಾಗಬೇಕು, ಹರ, ಚರ ಗುರುಗಳು ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಬೇಕು ಎಂದರು.

ಮೈಸೂರಲ್ಲಿ ಏ.19 ರಿಂದ 27ರವರೆಗೆ ಅಗ್ನಿವೀರ್ ರ್‍ಯಾಲಿ

ಬೆಂಗಳೂರಿನ ಭಾರತೀಯ ಸೇನೆ ನೇಮಕಾತಿ ಅಧಿಕಾರಿ ಕರ್ನಲ್ ವಿವೇಕ್ ಜಮಾದರ್ ಮಾಹಿತಿ

- 6,043 ಪುರುಷರು, 192 ಮಹಿಳಾ ಅಭ್ಯರ್ಥಿಗಳು ಭಾಗಿ
- ಪ್ರತಿದಿನ 800 ಅಭ್ಯರ್ಥಿಗಳಿಗೆ ದೈಹಿಕ ಸಾಮರ್ಥ್ಯ ಪರೀಕ್ಷೆ
- ಆಯ್ಕೆಯಾದವರು ವೈದ್ಯಕೀಯ ಪರೀಕ್ಷೆಗೆ

ಮೈಸೂರು, ಏ.6(ಬಿಎಲ್‌ಯು)– ಮೈಸೂರಿನಲ್ಲಿ ಏಪ್ರಿಲ್ 19 ರಿಂದ 27ರ ವರೆಗೆ 'ಅಗ್ನಿವೀರ್ ನೇಮಕಾತಿ ರ್‍ಯಾಲಿ' ನಡೆಯಲಿದೆ ಎಂದು ಬೆಂಗಳೂರಿನ ಭಾರತೀಯ ಸೇನೆ ನೇಮಕಾತಿ ಅಧಿಕಾರಿ ಕರ್ನಲ್ ವಿವೇಕ್ ಜಮಾದರ್ ತಿಳಿಸಿದ್ದಾರೆ.

ಮೈಸೂರಿನ ಯುವ ಜನ ಸೇವಾ ಮತ್ತು ಕ್ರೀಡಾ ಇಲಾಖೆ ಕಚೇರಿ ಸಭಾಂಗಣದಲ್ಲಿ ಸೋಮವಾರ ರ್‍ಯಾಲಿ ಹಿನ್ನೆಲೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯುವ ನೇಮಕಾತಿ ರ್‍ಯಾಲಿಯ ಎರಡನೇ ಹಂತದ ಪರೀಕ್ಷೆಯಲ್ಲಿ ಒಟ್ಟು 6,235 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ ಎಂದರು. ಅಗ್ನಿವೀರ್ ನೇಮಕಾತಿ ರ್‍ಯಾಲಿಯ ಮೊದಲ ಹಂತವಾಗಿ ಕಳೆದ ಜೂನ್‌ನಲ್ಲಿ ಲಿಖಿತ ಪರೀಕ್ಷೆ ನಡೆಸಲಾಗಿತ್ತು. ಅದರಲ್ಲಿ ಆಯ್ಕೆಯಾದ 192 ಮಹಿಳೆಯರು ಸೇರಿದಂತೆ ಒಟ್ಟು 6,235 ಅಭ್ಯರ್ಥಿಗಳ ಎರಡನೇ ಹಂತದ ಸ್ಕ್ರೀನಿಂಗ್ ಪರೀಕ್ಷೆಯನ್ನು ಮೈಸೂರಿನಲ್ಲಿ ನಡೆಸಲಾಗುತ್ತಿದೆ. ಪ್ರತಿದಿನ 800 ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಸಿದ ನಂತರ ಆಯ್ಕೆಯಾದವರನ್ನು ಮಾತ್ರ ಅಂತಿಮ ಹಂತದ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಡಲಾಗುವುದು. ಏ.27ರಂದು ಮಹಿಳಾ ಅಭ್ಯರ್ಥಿಗಳ ಪರೀಕ್ಷೆ ನಡೆಯಲಿದೆ ಎಂದು ಹೇಳಿದರು.



ಬೆಂಗಳೂರಿನ ಭಾರತೀಯ ಸೇನೆ ನೇಮಕಾತಿ ಅಧಿಕಾರಿ ಕರ್ನಲ್ ವಿವೇಕ್ ಜಮಾದರ್ ಅವರು ಸೋಮವಾರ ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು.

ರ್‍ಯಾಲಿಯಲ್ಲಿ ಭಾಗವಹಿಸುವ ಅಭ್ಯರ್ಥಿಗಳ ವಾಸ್ತವ್ಯಕ್ಕೆ ವಿನೋಬಾ ರಸ್ತೆಯ ನಂಜರಾಜ ಬಹದ್ದೂರ್ ಛತ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ. ರ್‍ಯಾಲಿ ನಡೆಯುವ ಸಂದರ್ಭದಲ್ಲಿ ಆರೋಗ್ಯ ಇಲಾಖೆ ವತಿಯಿಂದ ವೈದ್ಯರು, ಸಿಬ್ಬಂದಿ, ಅಗತ್ಯ ಔಷಧಿ ಜೊತೆಗೆ ಆಂಬುಲೆನ್ಸ್, ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಸ್ವಚ್ಛತಾ ವ್ಯವಸ್ಥೆ ಪೊಲೀಸ್ ಇಲಾಖೆಯಿಂದ ಬಂದೋಬಸ್ತ್, ನಿರ್ಮಿತಿ ಕೇಂದ್ರದ ವತಿಯಿಂದ ಅಗತ್ಯ ಟೆಂಟ್‌ಗಳು ಹಾಗೂ ಸಿಸಿಟಿವಿ ವ್ಯವಸ್ಥೆ ಕಲ್ಪಿಸಿಕೊಡುವಂತೆ ತಿಳಿಸಿದರು.

ಭಾರತೀಯ ಸೇನೆಯಲ್ಲಿ 2030 ರವರೆಗೆ ಹೆಚ್ಚಿನ ನೇಮಕಾತಿ ನಡೆಯಲಿದ್ದು, ಯುವ ಜನತೆ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಬಗ್ಗೆ ಪ್ರೌಢಶಾಲೆಯ ವಿದ್ಯಾರ್ಥಿಗಳು, ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಅಗ್ನಿವೀರ್ ರ್‍ಯಾಲಿ ವೀಕ್ಷಿಸಲು ಶಾಲಾ ಶಿಕ್ಷಣ ಇಲಾಖೆ ಕ್ರಮ ವಹಿಸಬೇಕು ಎಂದು ಕರ್ನಲ್ ವಿವೇಕ್ ಜಮಾದರ್ ಹೇಳಿದರು.

ಸಭೆಯಲ್ಲಿ ಬೆಂಗಳೂರಿನ ಭಾರತೀಯ ಸೇನೆಯ ನೇಮಕಾತಿ ವಿಭಾಗದ ವೈದ್ಯಕೀಯ ಅಧಿಕಾರಿ ಮೇಜರ್ ಕಪಿಲ್ ಕುಮಾರ್ ಶರ್ಮಾ, ಉಪ ನೇಮಕಾತಿ ಅಧಿಕಾರಿ ಸುಬೇದಾರ್ ಶ್ಯಾಮ್ ಸಿಂಗ್, ಸೈನಿಕ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ರೆಡ್ಡಿ, ಆರೋಗ್ಯ ಇಲಾಖೆಯ ಪ್ರತಿನಿಧಿ ಡಾ.ಗೋಪಿನಾಥ್, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ಇನ್ನಿತರರು ಉಪಸ್ಥಿತರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ತಪಾಸಣಾ ಶಿಬಿರ ; 600ಕ್ಕೂ ಹೆಚ್ಚು ಮಂದಿ ಭಾಗಿ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಭಾನುವಾರ ಮೂತ್ರಪಿಂಡ ಆರೋಗ್ಯದ ಉಚಿತ ತಪಾಸಣಾ ಶಿಬಿರ ನಡೆಯಿತು.

ಮೈಸೂರು,ಏ.6(ಪಿಎಂ)– ಸಿಗ್ಮಾ ಆಸ್ಪತ್ರೆಯಲ್ಲಿ ಭಾನುವಾರ ಮೂತ್ರಪಿಂಡ ಆರೋಗ್ಯದ ಉಚಿತ ತಪಾಸಣಾ ಶಿಬಿರ ನಡೆಯಿತು. ಶಿಬಿರದಲ್ಲಿ 600ಕ್ಕೂ ಹೆಚ್ಚು ಮಂದಿ ಪ್ರಯೋಜನ ಪಡೆದರು.

ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಹಿರಿಯ ಮೂತ್ರಪಿಂಡ ಕಸಿ ತಜ್ಞ ಡಾ. ಕೆ.ಎಂ.ಮಾದಪ್ಪ, ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ಹೊಂದಿರುವವರಿಗೆ ಮೂತ್ರಪಿಂಡ, ಹೃದಯ, ಕಣ್ಣುಗಳು ಮತ್ತು ಇತರ ಅಂಗಗಳ ಅನಾರೋಗ್ಯ ಸಾಧ್ಯತೆ ಹೆಚ್ಚು. ಮೂತ್ರಪಿಂಡ ಕಾಯಿಲೆಯ ಆರಂಭಿಕ ಪತ್ತೆ ಪರಿಣಾಮಕಾರಿ ಚಿಕಿತ್ಸೆಗೆ ಪೂರಕ. ಸಿಗ್ಮಾ ಆಸ್ಪತ್ರೆಯು ಸಮಗ್ರ ಸೌಲಭ್ಯ ಮತ್ತು ಮೂತ್ರಪಿಂಡ ಆರೈಕೆಗಾಗಿ ಮೀಸಲಾದ ತಂಡವನ್ನು ಹೊಂದಿದೆ ಎಂದು ತಿಳಿಸಿದರು.

ಮೂತ್ರಪಿಂಡ ತಜ್ಞ ಡಾ.ಅನಿಕೇತ್ ಪ್ರಭಾಕರ್ ಮಾತನಾಡಿ, ಮಧುಮೇಹ ಹೊಂದಿರುವ ವ್ಯಕ್ತಿಗಳು ನಿಯಮಿತವಾಗಿ ಮೂತ್ರಪಿಂಡ ತಪಾಸಣೆಗೆ ಒಳಗಾಗಬೇಕು. ಮೂತ್ರ ಪರೀಕ್ಷೆಗಳು ಮತ್ತು ಮೂತ್ರಪಿಂಡ ಸ್ಕ್ಯಾನ್‌ಗಳ ಮೂಲಕ ಮೂತ್ರಪಿಂಡ ಕಾಯಿಲೆಗಳನ್ನು ಪತ್ತೆಹಚ್ಚಬಹುದು ಎಂದು ಹೇಳಿದರು.

ಆಸ್ಪತ್ರೆ ನಿರ್ದೇಶಕಿ ಡಾ.ರಾಜೇಶ್ವರಿ ಮಾದಪ್ಪ ಮಾತನಾಡಿ, ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಜನರ ಪ್ರೋತ್ಸಾಹದಿಂದ ಆಸ್ಪತ್ರೆ ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿದೆ. ಮೂತ್ರಪಿಂಡ ಶಾಸ್ತ್ರ ವಿಭಾಗದ ಡಾ.ಅನಿಕೇತ್ ಪ್ರಭಾಕರ್ ತಮ್ಮ ಅಧ್ಯಯನದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಶ್ರೇಣಿ ಪಡೆದಿದ್ದಾರೆ. ಅದೇ ರೀತಿ ಡಾ.ಕೆ.ಎಂ.ಮಾದಪ್ಪ ತಮ್ಮ ಅವಧಿಯಲ್ಲಿ ಡಿಎನ್‌ಬಿಯಲ್ಲಿ ಉನ್ನತ ಶ್ರೇಣಿ ಪಡೆದಿದ್ದು, ಜೆಎಸ್‌ಎಸ್ ಆಸ್ಪತ್ರೆಯಲ್ಲಿ 27 ವರ್ಷಗಳು ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ ಎಂದು ತಿಳಿಸಿದರು.

ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್ ಮಾತನಾಡಿ, ಚಿಕಿತ್ಸೆಗಿಂತ ತಡೆಗಟ್ಟುವಿಕೆ ಉತ್ತಮ. ನಮ್ಮ ಆಸ್ಪತ್ರೆಯಲ್ಲಿ ಅನುಭವಿ ವೈದ್ಯರು ಲಭ್ಯವಿದ್ದು, ಮೈಸೂರಿನಲ್ಲಿ ಮೂತ್ರಪಿಂಡ ಕಾಯಿಲೆಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡುತ್ತಿದೆ ಎಂದರು.

ಸಿಲಿಂಡರ್ ಪೂರೈಕೆಯಲ್ಲೂ ಕೇಂದ್ರ ತಾರತಮ್ಯ ಮಾಡುತ್ತಿದೆ

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಆರೋಪ



ಬೆಂಗಳೂರು, ಏ.6(ಕೆಎಂಶಿ)– ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡಬೇಕಾದ ಕನಿಷ್ಠ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ಪೂರೈಕೆ ಮಾಡದೇ ಇರುವುದರಿಂದ ಇಲ್ಲದ ಸಮಸ್ಯೆ ಎದುರಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಳಸಂತೆಯಲ್ಲಿ ಸಿಲಿಂಡರ್‌ಗಳನ್ನು ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಪೊಲೀಸರಿಗೆ ಸೂಚಿಸಲಾಗಿದೆ ಎಂದರು.

ನಗರ ಪ್ರದೇಶಗಳಲ್ಲಿ ಕಾಳಸಂತೆ ಮಾರಾಟ ತಪ್ಪಿಸಲು ಪೊಲೀಸರ ವಿಶೇಷ ತಂಡ ರಚಿಸಲಾಗಿದೆ, ಕೆಲವರ ವಿರುದ್ಧ ಪ್ರಕರಣಗಳನ್ನೂ ದಾಖಲಿಸಲಾಗಿದೆ.

ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲೂ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ. ಬೇರೆ ರಾಜ್ಯಗಳಿಗೆ ಸಮರ್ಪಕ ತೈಲ ಪೂರೈಕೆ ಮಾಡುತ್ತಿದ್ದು, ಕರ್ನಾಟಕಕ್ಕೆ ಏಕೆ ಕೊಡುತ್ತಿಲ್ಲ.

ಯುದ್ಧದಿಂದ ಎಲ್ಲರಿಗೂ ತೊಂದರೆ ಆಗಿದೆ ಎಂಬುದನ್ನು ಒಪ್ಪೋಣ. ಆದರೆ, ರಾಜ್ಯಕ್ಕೆ ತಾರತಮ್ಯ ಏಕೆ ಎಂದರು.



ನಕ್ಕರೆ ಅದೇ ಸ್ವರ್ಗ

ಟೀಚರ್ : ಒಂದರಿಂದ ಹತ್ತರವರೆಗೆ ಸಂಖ್ಯೆ ಹೇಳೋ ಗುಂಡ?
ಗುಂಡ : 1, 2, 4, 5, 6, 7, 8, 9, 10 ಆಯ್ತು ಟೀಚರ್.
ಟೀಚರ್ : ಮೂರು ಎಲ್ಲೋ?
ಗುಂಡ : ಮೂರು ಸತ್ತೋಗಿದೆ.
ಟೀಚರ್ : ಯಾರೋ ಹೇಳಿದ್ದು!
ಗುಂಡ : ನಿನ್ನೆ ಪೇಪರ್‌ನಲ್ಲಿ ಬಂದಿತ್ತು ಟೀಚರ್. ರಸ್ತೆ ಅಪಘಾತದಲ್ಲಿ ಮೂರು ಸಾವು ಅಂತ.

ಮೈಸೂರು ಮಿತ್ರ

ಮಂಗಳವಾರ, ಏಪ್ರಿಲ್ 7, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಈ ಜಗದಲ್ಲಿ ಮನದ ಮೇಲೆ ನಿಂತಿರುವ ಸಂಬಂಧಗಳಿಗಿಂತ ಧನದ ಮೇಲೆ ನಿಂತಿರುವ ಸಂಬಂಧಗಳೇ ಅತೀ ಹೆಚ್ಚು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಓದಿ ಓದಿ ಮರುಳಾದ ಕೂಚು ಭಟ್ಟ

ನಿಮ್ಮ ಪತ್ರಗಳು

ಅನ್ಯಾಯದ ಅಟ್ಟಹಾಸಕ್ಕೆ ಕೊನೆ ಎಂದು?

ಮಾನ್ಯರೆ,



ಮೈಸೂರಿನ ಹೆಬ್ಬಾಳು ಸೂರ್ಯ ಬೇಕರಿ ಬಳಿಯಲ್ಲಿರುವ ಎರಡನೇ ಅಡ್ಡ ರಸ್ತೆಯಲ್ಲಿ ಇದ್ದಕ್ಕಿದ್ದಂತೆ ಭಾನುವಾರ (ಏ.5) ಚರಂಡಿಯನ್ನು ದುರಸ್ತಿಗೊಳಿಸಬೇಕೆಂಬ ಕಾರಣವೊಡ್ಡಿ ಕೆಲವು ಮನೆಗಳ ಮುಂದೆ ಹಾಕಲಾಗಿದ್ದ ಚಪ್ಪಡಿ ಕಲ್ಲುಗಳನ್ನು ಜೆ.ಸಿ.ಬಿ ಮುಖಾಂತರ ತೆರವುಗೊಳಸಿರುವುದಲ್ಲದೇ, ನೀರಿನ ಪೈಪ್‌ಲೈನ್ ಅನ್ನು ಲೆಕ್ಕಿಸದೇ ನಿರ್ದಾಕ್ಷಿಣ್ಯದಿಂದ ಒಡೆದು ಹಾಕಿದ್ದಾರೆ. ಅದಲ್ಲದೇ ಈ ದುರಸ್ತಿ ಕೆಲಸವು ಕೇವಲ ಒಂದು ನೆಪಮಾತ್ರ ಎಂಬಂತೆ ಅಡ್ಡರಸ್ತೆಯಲ್ಲಿನ ಮೇಲ್ಭಾಗದಲ್ಲಿರುವ ನಾಲ್ಕೈದು ಮನೆಗಳನ್ನು ಬಿಟ್ಟು ಕೆಳಭಾಗದಲ್ಲಿರುವ ಮನೆಗಳ ಮುಂದೆ ದಿಢೀರನೆ ಚಪ್ಪಡಿ ಕಲ್ಲುಗಳನ್ನು ತಮ್ಮ ಮನಬಂದಂತೆ ತೆರವುಗೊಳಿಸಿದ್ದಾರೆ.

ಕೆಲ ಸಾರ್ವಜನಿಕರು ಕೆಲಸಗಾರರನ್ನು ಪ್ರಶ್ನಿಸಿದಾಗ ಕೆಲಸವನ್ನು ನೇಮಿಸಿದ ಇಂಜಿನಿಯರ್ ಅಥವಾ ಕಂಟ್ರಾಕ್ಟರ್ ಹೆಸರು ಅಥವಾ ದೂರವಾಣಿ ಸಂಖ್ಯೆಯನ್ನು ನೀಡಲು ಹಿಂಜರಿಯುವ ಜೊತೆಗೆ ಅಸಡ್ಡೆತನದಿಂದ ಜನರ ಮೇಲೆಯೇ ಕುಪಿತಗೊಂಡು ರೇಗಿರುವ ಪ್ರಸಂಗ ಎದುರಾಗಿದೆ. ಈ ಘಟನೆಯಿಂದ ಕಾಡುವ ಪ್ರಶ್ನೆ ಏನೆಂದರೆ ಇಂಜಿನಿಯರ್ ಹೆಸರು ಕೂಡ ಬಹಿರಂಗ ಪಡಿಸದಿರುವ ನಿಗೂಢ ಸರ್ಕಾರಿ ಕೆಲಸ ಯಾವುದಾಗಿರುತ್ತದೆ ಎಂದು. ಅತ್ತ ನಗರದ ಸಿಕ್ಕ-ಸಿಕ್ಕ ರಸ್ತೆಗಳಲ್ಲಿ ಗುಂಡಿ ಅಗೆದು ಅನಾಹುತಕ್ಕೆ ದಾರಿಯಾದರೆ, ಇತ್ತ ಇಂತಹ ಅನ್ಯಾಯವನ್ನು ಕೇಳುವವರು ಯಾರು ಇಲ್ಲದೇ ನಿವಾಸಿಗಳು ಮೂಕರಾಗಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. 'ಯಾರದೋ ದುಡ್ಡು ಯಲ್ಲಮನ ಜಾತ್ರೆ' ಎಂಬಂತೆ ತೆರಿಗೆ ಪಾವತಿದಾರರ ಹಣವನ್ನು ಇಷ್ಟ ಬಂದಂತೆ ಪೋಲು ಮಾಡುತ್ತಿರುವ ಪಾಲಿಕೆ ಅಧಿಕಾರಿಗಳೇ ಇದಕ್ಕೆ ಸೂಕ್ತ ಉತ್ತರ ನೀಡಬೇಕು.

–ಯಶಸ್. ಆರ್, ಲೇಖಕ ಹಾಗೂ ಸಾಮಾಜಿಕ ಕಾರ್ಯಕರ್ತ, ಮೈಸೂರು.

ತೆಲಂಗಾಣ ಸರ್ಕಾರದ ಮಾದರಿ ನಡೆ

ಮಾನ್ಯರೆ,

ವಯಸ್ಸಾದ ತಂದೆ ತಾಯಿಗಳನ್ನು ನೋಡಿಕೊಳ್ಳಲು ವಿಫಲರಾಗುವ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ನೌಕರರ ಮಾಸಿಕ ವೇತನದಲ್ಲಿ ಶೇಕಡಾ 15 ರಷ್ಟು ಕಡಿತಗೊಳಿಸಲು ಉದ್ದೇಶಿಸಿರುವ ಮಸೂದೆಗೆ ತೆಲಂಗಾಣದ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ನೇತೃತ್ವದ ಸಚಿವ ಸಂಪುಟ ಇತ್ತೀಚೆಗೆ ಅನುಮತಿ ನೀಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಉದ್ದೇಶಿತ ಮಸೂದೆಯಲ್ಲಿ ಯಾವುದೇ ಸಾರ್ವಜನಿಕ ಪ್ರತಿನಿಧಿ (ಸರ್ಕಾರಿ ಅಥವಾ ಖಾಸಗಿ) ತಮ್ಮ ತಂದೆ ತಾಯಿಗಳನ್ನು ನೋಡಿಕೊಳ್ಳಲು ವಿಫಲರಾಗಿದ್ದಾರೆ ಎಂದು ಕಂಡು ಬಂದರೆ, ಅವರ ಸಂಬಳದಲ್ಲಿ ಶೇ.15 ರಷ್ಟು ಅಥವಾ ರೂ.10,000 (ಇವುಗಳಲ್ಲಿ ಯಾವುದು ಕಡಿಮೆಯೋ ಅದು) ಗಳನ್ನು ಕಡಿತಗೊಳಿಸಿ, ಅವರ ನಿರ್ಲಕ್ಷಿತ ತಂದೆ ತಾಯಿಗಳಿಗೆ ನೀಡಲಾಗುತ್ತದೆ ಎಂಬುದು ಮಸೂದೆಯಲ್ಲಿರುವ ಗಮನಾರ್ಹವಾದ ಅಂಶವಾಗಿದೆ.

ದೇಶದ ವಿವಿಧ ರಾಜ್ಯಗಳಲ್ಲಿ ವಯಸ್ಸಾದ ತಂದೆ ತಾಯಿಗಳನ್ನು ನಿರ್ಲಕ್ಷಿಸುತ್ತಿರುವ ಹಲವಾರು ಪ್ರಕರಣಗಳು ಎಲೆಕ್ಟ್ರಾನಿಕ್ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ಆಗಿಂದಾಗ್ಗೆ ವರದಿಯಾಗುತ್ತಿದೆ. ವಯಸ್ಸಿಗೆ ಬಂದ ಮಕ್ಕಳು ತಮ್ಮ ವಿಲಾಸಿ ಜೀವನಕ್ಕೆ ಅಡ್ಡಿಯಾಗುತ್ತಾರೆ ಎಂಬ ಕಾರಣದಿಂದ ತಮ್ಮನ್ನು ಹೊತ್ತು ಹೆತ್ತು ಸಾಕಿದ ದೈವ ಸ್ವರೂಪರಾದ ತಂದೆ-ತಾಯಿಗಳನ್ನು ಕಾಡುಪಾಲು ಮಾಡುತ್ತಿರುವ ಹಲವಾರು ಉದಾಹರಣೆಗಳು ನಮ್ಮ ಮುಂದಿದೆ. ವಯಸ್ಸಾದ ತಂದೆ-ತಾಯಿಗಳನ್ನು ಈ ರೀತಿ ಕಾಡು ಪಾಲು ಮಾಡಿದರೆ ಅವರು ಎಲ್ಲಿಗೆ ಹೋಗಬೇಕು? ಇಂತಹ ನಾಚಿಕೆಗೆಟ್ಟ ಮಕ್ಕಳ ವಿರುದ್ದ ವೇತನ ಕಡಿತದ ಜೊತೆಗೆ ಸೂಕ್ತ ಕಾನೂನು ಕ್ರಮ ಕೂಡ ಜರುಗಿಸುವಂತಹ ಕಾಯ್ದೆ ಜಾರಿಗೆ ತರಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು.

ಅಂಚೆ ಇಲಾಖೆಗೆ ಧನ್ಯವಾದಗಳು

ಮಾನ್ಯರೆ,

'ಅಂಚೆಯ ಅಣ್ಣ ಬಂದಿಹ ಚಿಣ್ಣ ಅಂಚೆಯ ಹಂಚಲು ಮನೆ ಮನೆಗೆ' ಎಂಬ ಪದ್ಯ ಓದಿದ್ದು ಜ್ಞಾಪಕ ಆಯ್ತು. ಅದೇ ರೀತಿಯಲ್ಲಿ ನಾನು ಅಂಚೆ ಇಲಾಖೆಗೆ ತುಂಬಾ ಹತ್ತಿರ ಕಾರಣ ಪತ್ರ ಬರೆಯುವ ಕಾರಣದಿಂದ. ಪತ್ರಗಳ ಮೂಲಕವೇ ನೂರಾರು ಮಿತ್ರರು ಇದ್ದಾರೆ ಎಂದರೆ ಕೆಲವರಿಗೆ ಆಶ್ಚರ್ಯ ಆಗಬಹುದು. ನಿಜ ಹಿಂದೆಲ್ಲ ಅದೇ ಗ್ರೇಟ್. ಅಂದು ಪತ್ರಕ್ಕಾಗಿ ಕಾಯ್ದು ಕುಳಿತಿದ್ದ ಕ್ಷಣಗಳು ಅದೆಷ್ಟೋ, ಅದೇನೋ ಒಂದು ಕುತೂಹಲ.

ನಮ್ಮ ಸ್ನೇಹಿತರೊಬ್ಬರು ದಾವಣಗೆರೆ ಜಿಲ್ಲೆ ಹಳೇ ಬಾತಿ ಗ್ರಾಮದಿಂದ ಸುಮಾರು ನಾಲ್ಕೈದು ಪತ್ರ ಬರೆದಿದ್ದರು ಅವು ಒಂದು ತಲುಪಿರಲಿಲ್ಲ. ಅವರು ಕರೆ ಮಾಡಿದಾಗಲೆಲ್ಲ ಪತ್ರ ಬಂದಿವೆಯ ಸರ್ ಎನ್ನುತ್ತಿದ್ದರು ಇಲ್ಲಾ ಎಂದು ನಾನು ಹೇಳುತ್ತಿದ್ದೆ. ಕೊನೆಗೆ 23/3/26ರಂದು ಡಾಕ್ ಅದಾಲತ್ ದಾವಣಗೆರೆಯಲ್ಲಿ ಇದೆ ಎಂಬ ವಿಚಾರ ತಿಳಿದು ಅಲ್ಲಿಗೆ ಒಂದು ಪತ್ರ ಬರೆದಿದ್ದೆ. ಆ ದಿನ ಅಂಚೆ ಅಧೀಕ್ಷಕರು ಕರೆ ಮಾಡಿ ಕೇಳಿದರು ನಿಮ್ಮ ಪತ್ರ ಬಂದಿದೆ. ಎಲ್ಲಾ ವಿಚಾರ ತಿಳಿಸಿದೆ. ಕೊನೆಗೆ ದಿನಾಂಕ 4/4/26ರಂದು ಮಂಡ್ಯದ ಅಂಚೆ ಅಧೀಕ್ಷಕ ಅವರಿಂದ ಒಂದು ಪತ್ರ ಸಹ ಬಂತು ಅವರು ಚೆಕಿಂಗ್ ಮಾಡಲು ಒಳಗಡೆ ಒಂದು ಕವರ್ ಇಟ್ಟು ಕಳಿಸಿದ್ದರು. ಅಂತು ಎರಡು ಜಿಲ್ಲೆಗಳ ಅಂಚೆ ಅಧೀಕ್ಷಕರು ಇದರ ಬಗ್ಗೆ ತುಂಬಾ ಗಮನವಿಟ್ಟು ನಮ್ಮ ಅಹವಾಲನ್ನು ಸ್ವೀಕರಿಸಿ ಉತ್ತರ ನೀಡಿದ ಅವರಿಗೆ ತುಂಬು ಹೃದಯದ ಧನ್ಯವಾದಗಳು. ಎಲ್ಲರೂ ಸಹ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಿದರೆ ದೂರು ನೀಡುವ ಅಗತ್ಯವಿಲ್ಲ.

–ಮೃತ್ಯುಂಜಯ ಎ., ಶಾಂತಿನಗರ, ಪಾಂಡವಪುರ



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಯುದ್ಧ ನಿಲ್ಲಬೇಕು, ಬುದ್ಧ ನಗಬೇಕು..!





ಇರಾನ್ ಮತ್ತು ಇಸ್ರೇಲ್ ಅಮೇರಿಕ ಯುದ್ಧದಿಂದ ಜಗತ್ತಿನಾದ್ಯಂತ ನಷ್ಟ ಎಷ್ಟು, ಯಾವುದು, ಯಾರಿಗೆ, ಎಲ್ಲಿ, ಎಂಬುದೆಲ್ಲಾ ಇಂದು ಅಯೋಮಯವಾಗಿ ಕಾಡುತ್ತಿದೆ. ಈ ಯುದ್ಧವು ತೈಲ ಬೆಲೆ ಏರಿಕೆ, ಜಾಗತಿಕ ಆರ್ಥಿಕ ಅಸ್ಥಿರತೆ ಮತ್ತು ಮಧ್ಯಪ್ರಾಚ್ಯದಲ್ಲಿ ಘನಘೋರ ಜೀವ ಹಾನಿಯನ್ನು ಆರ್ಥಿಕ ಅಸ್ಥಿರತೆಯನ್ನು ಉಂಟು ಮಾಡಿದೆ. ಕಾರಣ ಇಷ್ಟೆ!

ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದ ಕಾರಣಗಳು ಇಂದು ನೆನ್ನೆಯವಲ್ಲ. ಅಮೆರಿಕಾ ಕೂಡ ಈ ಹಿಂದೆಯೇ ಇರಾನ್ ಮೇಲೆ ಸೆಣೆಸಾಡಿದೆ. ಇಷ್ಟೆಲ್ಲಾ ಪೀಠಿಕೆ ಏಕೆ? ಎಂದು ಯೋಚಿಸುತ್ತಿದ್ದರೆ ವರ್ತಮಾನದ ಪ್ರಪಂಚಕ್ಕೆ ಸಲಹೆ-ಸೂಚನೆ, ಮಾರ್ಗದರ್ಶನ, ಹಿತನುಡಿ, ಶುಭನುಡಿ ಎಂಬೆಲ್ಲಾ ಮಾತುಗಳು ಹಿಡಿಸುತ್ತಿಲ್ಲ. ಎಚ್ಚರಿಕೆ, ಗದರಿಕೆ, ಅಸಮಾಧಾನ, ದಳ್ಳುರಿ, ವಾರ್ನಿಂಗು, ಕಮಾಂಡಿಂಗು, ಫೈರಿಂಗು ಇಂಥದೇ ಪದಗಳ ಗುಂಗಿನಲ್ಲಿ ಪ್ರಪಂಚ ಓಡುತ್ತಿದೆ. ಓದುಗನಿಗೆ ಅರ್ಥವಾಗದ್ದು ಏನಿದೆ? ಇವತ್ತು ಜಗತ್ತಿನ ತುಂಬೆಲ್ಲಾ ಯುದ್ಧದ ಕಾರ್ಮೋಡ ಕವಿಯುತ್ತಿದೆ. ಎಲ್ಲೆಲ್ಲೂ ಯುದ್ಧದ ಬಗೆಗಿನ ಮಾತೇ ಮಾತು. ಯುದ್ಧ ಯುದ್ಧ ಯುದ್ಧ! ಇರಾನ್ ಮತ್ತು ಅಮೆರಿಕಗಳ ನಡುವೆ ಯುದ್ಧದ ಮೂರನೇ ವಿಶ್ವಯುದ್ಧದ ಮುನ್ಸೂಚನೆ ಗೋಚರಿಸುತ್ತಿದೆ.

ಇರಾನ್ ಪರಮಾಣು ಅಸ್ತ್ರವನ್ನು ಹೊಂದುವುದು, ಇಸ್ರೇಲ್-ಇರಾಕ್ ನಡುವಿನ ಸಂಘರ್ಷ, ಪ್ರಾದೇಶಿಕ ಪ್ರಭಾವ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಇರಾಕ್ ಪ್ರಾದೇಶಿಕ ಪ್ರಭಾವಕ್ಕಾಗಿ ಸ್ಪರ್ಧಿಸುತ್ತಿವೆ. ಇದು ಯುದ್ಧಕ್ಕೆ ಕಾರಣವಾಗಿದೆ. ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಇರಾಕ್‌ಗಳು ತಮ್ಮ ಸಾಮರ್ಥ್ಯದ ಬಾಹುಳ್ಯವನ್ನು ಹೆಚ್ಚಿಸಿಕೊಳ್ಳಲು ಹವಣಿಸುತ್ತಿವೆ.

ಯಾರು ಯಾರ ಮೇಲೆ ಏಕೆ ಯಾವಾಗ ಯುದ್ಧ ಮಾಡುತ್ತಾರೆ ಅಂತ exact ಆಗಿ ಗೊತ್ತಿಲ್ಲದಿದ್ದರೂ ವಿಶ್ವ ಸಮಾಜಕ್ಕೆ ಆತಂಕವಂತೂ ಶುರುವಾಗಿದೆ. ಕಾರಣವಿಷ್ಟೆ, ಬಹಿರಂಗವಾಗಿ ಮಿಸೈಲು, ಗನ್ನು, ರಾಕೆಟ್‌ಗಳು ಹಾಗೂ ಇನ್ನಿತರೆ ಯುದ್ಧ ಸಾಮಗ್ರಿಗಳನ್ನು ಬಳಸಿ ಮಾಡುವ ಬಹಿರಂಗ ಯುದ್ಧಕ್ಕಿಂತ ಅತ್ಯಂತ ಅಪಾಯಕಾರಿ ಯುದ್ಧವೆಂದರೆ ಅದೇ ಅಂತರ್ಯುದ್ಧ. ಅಂತರ್ಯುದ್ಧ ದೇಶದೇಶಗಳ ನಡುವೆ ನಡೆಯುವುದಿಲ್ಲ. ಮನಸ್ಸು ಮನಸ್ಸುಗಳ ನಡುವೆ ನಡೆಯುತ್ತಿರುತ್ತದೆ. ಪ್ರಪಂಚದ ಭವಿತವ್ಯದ ಚರಿತ್ರೆಗೆ ಸಾವಿರಾರು ಪುಟಗಳ ದಾಖಲೆಯಿದೆ. ಮನಸ್ಸೆಂಬ ಮುಚ್ಚಿಟ್ಟ ಪುಟಗಳ ಮೇಲೆ ನಾನೇ ಎಲ್ಲ? ಎಂಬ Ego ಚಕ್ಕಂಬಳಕ ಹಾಕಿ ಕೂತುಬಿಟ್ಟಿರುತ್ತದೆ. Ego ಜಾಗೃತವಾದ ಮನಸ್ಥಿತಿಗಳು ಅದು ಯಾವುದೇ ವಿಷಯಗಳಿರಲಿ ಅವುಗಳನ್ನು ವಿಪರೀತದ ಮಟ್ಟಕ್ಕೆ ತಂದು ನಿಲ್ಲಿಸಿಬಿಡುತ್ತದೆ. ಯುದ್ದ ಇಂದು ಕೇವಲ ಎರಡು ಮೂರು ದೇಶಗಳಿಗೆ ಮಾತ್ರ ಹೊಡೆತ ಕೊಡುತ್ತಿಲ್ಲ. ಯುದ್ಧ ಬಯಸದ ತಮ್ಮ ಪಾಡಿಗೆ ತಾವಿರುವ ದೇಶ ವಾಸಿಗಳ ನಿದ್ದೆ ಕೆಡಿಸಿದೆ. ಕಾರಣ ರಾಜ ಮಹಾರಾಜರ ಐತಿಹಾಸಿಕ ಯುದ್ದಗಳಿಂದ ಹಿಡಿದು ವಿಶ್ವದ ಮಹಾ ಯುದ್ಧಗಳವರೆಗೆ ಯುದ್ಧ ತಂತ್ರಗಳೆಂದರೆ ಒಂದು ಸೇನೆ ಇನ್ನೊಂದು ಸೇನೆಯನ್ನು ಕೊಲ್ಲುವುದರ ಮೇಲೆ ಕೇಂದ್ರೀಕೃತವಾಗಿದ್ದವು. ಹಾಗೆ ಸಂಭವಿಸಿದ ಸಾವು-ನೋವುಗಳು ಯುದ್ಧದ ಸೋಲು ಗೆಲುವುಗಳನ್ನು ನಿರ್ಧರಿಸುತ್ತಿತ್ತು. ಆದರೆ ಇವತ್ತಿನ ಯುದ್ಧಗಳ ಸ್ವರೂಪವೇ ಬದಲಾಗಿ ಹೋಗಿದೆ. ಅಂದರೆ ಇವತ್ತು ಯುದ್ಧಗಳು ಪರಸ್ಪರ ಶತ್ರು ರಾಷ್ಟ್ರಗಳ ಆರ್ಥಿಕತೆಯ ಮೇಲೆ ಹೊಡೆತ ಕೊಡುವುದರ ಮೇಲೆ ಕೇಂದ್ರೀಕೃತವಾಗಿವೆ. ಆ ಮೂಲಕ ಶತ್ರು ರಾಷ್ಟ್ರಗಳ ಜೀವ ಹಾನಿಗಿಂತ ಆ ದೇಶಗಳ ಆರ್ಥಿಕ ಭದ್ರತೆಗಳು ದಿವಾಳಿಯಾದರೆ! ಜನಜೀವನ ತತ್ತರಿಸದರೆ ಆಕ್ರಮಣ ಮಾಡಿದ್ದ ದೇಶಕ್ಕೆ ಯುದ್ದ ಗೆದ್ದಂತೆ. ಹಾಗೆ ನೋಡಿದರೆ ಅತಿಯಾದ ವಿಜ್ಞಾನದ ಬೆಳವಣಿಗೆ ನಾಗರೀಕರ ಮೇಲಿನ ಧಾಳಿಗಳನ್ನು ತಡೆಯುತ್ತದೆ ಎಂಬುದಾಗಿ ಭಾವಿಸಲಾಗಿತ್ತು. ಆದರೆ ನಾಗರೀಕರು ಇವತ್ತಿನ ಯುದ್ಧದ ಸಾಮಗ್ರಿಗಳಾಗಿ, ದಾಳಿಕೋರರ ಹತ್ಯಾಕಾಂಡಕ್ಕೆ ಬಲಿಯಾಗುತ್ತಿದ್ದಾರೆ.

> "ಇವತ್ತಿನ ಯುದ್ಧಗಳ ಸ್ವರೂಪವೇ ಬದಲಾಗಿ ಹೋಗಿದೆ. ಅಂದರೆ ಇವತ್ತು ಯುದ್ಧಗಳು ಪರಸ್ಪರ ಶತ್ರು ರಾಷ್ಟ್ರಗಳ ಆರ್ಥಿಕತೆಯ ಮೇಲೆ ಹೊಡೆತ ಕೊಡುವುದರ ಮೇಲೆ ಕೇಂದ್ರೀಕೃತವಾಗಿವೆ. ಆ ಮೂಲಕ ಶತ್ರು ರಾಷ್ಟ್ರಗಳ ಜೀವ ಹಾನಿಗಿಂತ ಆ ದೇಶಗಳ ಆರ್ಥಿಕ ಭದ್ರತೆಗಳು ದಿವಾಳಿ ಯಾದರೆ! ಜನಜೀವನ ತತ್ತರಿಸದರೆ ಆಕ್ರಮಣ ಮಾಡಿದ್ದ ದೇಶಕ್ಕೆ ಯುದ್ದ ಗೆದ್ದಂತೆ. ಹಾಗೆ ನೋಡಿದರೆ ಅತಿಯಾದ ವಿಜ್ಞಾನದ ಬೆಳವಣಿಗೆ ನಾಗರೀಕರ ಮೇಲಿನ ದಾಳಿಗಳನ್ನು ತಡೆಯುತ್ತದೆ ಎಂಬುದಾಗಿ ಭಾವಿಸಲಾಗಿತ್ತು. ಆದರೆ ನಾಗರೀಕರು ಇವತ್ತಿನ ಯುದ್ದದ ಸಾಮಗ್ರಿಗಳಾಗಿ, ದಾಳಿಕೋರರ ಹತ್ಯಾಕಾಂಡಕ್ಕೆ ಬಲಿಯಾಗುತ್ತಿದ್ದಾರೆ.

ಇವತ್ತಿನ ಯುದ್ಧದ ತಂತ್ರಗಾರಿಕೆಯು ಬದಲಾಗಿದೆ. ಇದರಲ್ಲಿ ಆರ್ಥಿಕ ನಿರ್ಬಂಧಗಳು ಆರ್ಥಿಕ ನಿರ್ಬಂಧಗಳನ್ನು ಹೇರಿ ಒಂದು ದೇಶದ ಆರ್ಥಿಕತೆಯನ್ನು ನಾಶಗೊಳಿಸಲು ಪ್ರಯತ್ನಿಸಲಾಗುತ್ತಿದೆ. ವ್ಯಾಪಾರ ಯುದ್ದವನ್ನು ಬಳಸಿ ಒಂದು ದೇಶ ಬಲಾಢ್ಯ ದೇಶಗಳು ಹೇಳಿದ ದೇಶಗಳ ಜೊತೆಗೆ ಖರೀದಿ ವ್ಯಾಪಾರ ವಹಿವಾಟುಗಳನ್ನು ನಡೆಸಬೇಕೆಂಬ ಹಠ ಮತ್ತು ನಿಬಂಧನೆಗಳು ಕೂಡ ಯುದ್ದದ ಹೊಸ ತಂತ್ರಗಾರಿಕೆಯ ರೂಪದಲ್ಲಿ ಬಳಸಿ ಹೇರಲಾಗುತ್ತಿದೆ. ಅಂದರೆ ಹೊಸ ಯುದ್ದ ನೀತಿಯಂದರೆ ಅದು ಆರ್ಥಿಕ ಯುದ್ದ. ಆರ್ಥಿಕ ಯುದ್ಧವು ಒಂದು ದೇಶದ ಆರ್ಥಿಕತೆಯನ್ನು ನಾಶಗೊಳಿಸಲು ಮತ್ತುಅದರ ಶಕ್ತಿಯನ್ನು ಕುಗ್ಗಿಸಲು ಬಳಸುವ ಒಂದು ತಂತ್ರಗಾರಿಕೆಯಾಗಿ ಪ್ರಸ್ತುತದಲ್ಲಿ ರೂಪುಗೊಂಡಿದೆ. ಹೀಗೆ ಒಂದು ದೇಶದ ಆರ್ಥಿಕತೆ ಮತ್ತು ರಾಜಕೀಯ ವ್ಯವಸ್ಥೆಯನ್ನು ದುರ್ಬಲಗೊಳಿಸಿ ನಾಶಗೊಳಿಸಲು ಬಳಸುವ ಒಂದು ತಂತ್ರಗಾರಿಕೆ.

ಇಂತಹ ತಂತ್ರಗಾರಿಕೆಯ ಯುದ್ದದ ಕಾಲದಲ್ಲೂ ಅಲ್ಲಿ ವಾಗ್ವಾದಗಳು ಸೃಷ್ಟಿಯಾಗಬೇಕು! ಆದರೆ ವಾಗ್ವಾದಗಳ ಬದಲಿಗೆ ವಾಗ್ಯುದ್ಧಗಳು ಸೃಷ್ಟಿಯಾಗುತ್ತಿವೆ. ಸತ್ಯ ಮಾತಾಡಬೇಕಾದ ಜಾಗದಲ್ಲಿ ಸತ್ಯಗಳನ್ನು ತಿರುಚುವ ಮತ್ತು ತಮ್ಮ ಮೂಗಿನ ನೇರಕ್ಕೇ ಅವುಗಳನ್ನು ವ್ಯಾಖ್ಯಾನಿಸಿ ವಿಸ್ತರಿಸುವ ಮಾತುಗಾರಿಕೆಗಳು ಹುಟ್ಟುತ್ತಿವೆ. ಕಡೆಗೆ ತಮ್ಮ ಕಾಳಜಿ ಕ್ಷೇಮಗಳೆಲ್ಲವೂ ನಿಮಗೋಸ್ಕರ ಎಂಬ ಸಾಮೂಹಿಕ ಸುಕ್ಷೇಮದ ಕಡೆಗೆ ಹೊರಳುತ್ತಿವೆ. ಮನುಷ್ಯ ಗೋಡೆ ಕಟ್ಟಿಕೊಳ್ಳುತ್ತಾನೆ. ಬೇಲಿ ಹಾಕಿಕೊಳ್ಳುತ್ತಾನೆ. ಬೇಲಿ ದಾಟಿ ಬಂದವನ ಮೇಲೆರಗುತ್ತಾನೆ. ಸಂಘರ್ಷ ಸಾಮರಸ್ಯವನ್ನು ಕೊಲ್ಲುತ್ತಾನೆ. ದೇಶ, ಭಾಷೆ, ಗಡಿ, ಗುಡಿ, ನಾಡು, ಎಲ್ಲೆ, ನುಡಿಕಿಡಿ- ಹೀಗೆ ಎಲ್ಲೆಂದರಲ್ಲಿ ಹೊತ್ತಿ ಉರಿಯುತ್ತಾನೆ. ಅಲ್ಲೆಲ್ಲೂ ಆತನಿಗೆ ಮನುಷ್ಯ ಕಾಣಿಸುವುದಿಲ್ಲ. ಸಾವು ಹಲ್ಲು ಮಸೆಯುವ ಮಾರಣಾಂತಿಕ ಮಸಕ ಕಾಣಿಸುತ್ತದೆ. ಯುದ್ಧ ಕಾಣಿಸುತ್ತದೆ. ಗೆಲುವಿಗಾಗಿ ಹಂಬಲಿಸುತ್ತಾ ಅದು ಕೈ ಬೀಸಿ ಕರೆಯುತ್ತದೆ. ಪ್ರತೀಕಾರ, ಯುದ್ಧೋನ್ಮಾದಗಳು ತಲೆಯೆತ್ತುತ್ತವೆ. ಲಾಠಿ ಭಾಷೆ ಮಾತಾಡುತ್ತಾನೆ. ದಾಳಿಗಾಗಿ ದಂಗೆಕೋರ ಮನಸ್ಸಿನ ಕೈಗೆ ತುಪಾಕಿ ಕೊಡುತ್ತಾನೆ. ಈಗ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವುದು ಇದೆ! ಲಂಕೇಶ್ ಹೇಳಿದ ಮಾತೊಂದು ನೆನಪಾಗುತ್ತದೆ. ಮನುಷ್ಯ ಕಲ್ಯಾಣಕ್ಕಾಗಿ ತುಪಾಕಿಯ ತುದಿಯಲ್ಲಿ ಗುಬ್ಬಿಗೂಡು ಕಟ್ಟಬೇಕು. ಆದರೆ ಗಿಡುಗಗಳೇ ಗದರಿಸುವ ಈ ಕಾಲಘಟ್ಟದಲ್ಲಿ ಗುಬ್ಬಿಗಳು ಬದುಕುವುದಾದರೂ ಎಲ್ಲಿ. ವಿಶ್ವದ ವೈಶಾಲ್ಯತೆಗೆ ಬೆಂಕಿ ಬಿದ್ದಿರುವಾಗ ಆರಿಸುವ ಕೈಗಳಿಗೆ ಬಲ ಎಲ್ಲಿದೆ. ಇದು ಕೇವಲ ಇರಾನ್ ಇಸ್ರೇಲ್ ಮತ್ತು ಅಮೆರಿಕ ದೇಶಗಳ ನಡುವಿನ ಯುದ್ಧವಾಗಿ ಘಟಿಸಿದ್ದರೆ ಅಲ್ಲೇ ಕೊನೆಯಾಗುತ್ತಿತ್ತು. ಆದರೆ ಅದು ಹಾಗೆ ಉಳಿದಿಲ್ಲ. A spark neglected burns the houseಎಂಬ ಇಂಗ್ಲಿಷ್ ಕತೆಯೊಂದರ ಟೈಟಲ್ಲಿನಂತೆ ಅವುಗಳ ಅಕ್ಕಪಕ್ಕದ ದೇಶಗಳೂ ಕಿಡಿ ಹೊತ್ತಿಸಿಕೊಂಡು ಉರಿಯಬೇಕಾಗುತ್ತದೆ. ಇವತ್ತು ಕೊಲ್ಲಿ ದೇಶಗಳ ಕತೆಯೆ ಇದಕ್ಕೆ ಸಾಕ್ಷಿ. ಹೊರ್ಮುಜ್ ಜಲಸಂಧಿ ವಿವಾದಕ್ಕೆ ಕೊಟ್ಟ ಗಡುವು ಮುಗಿಯುತ್ತಿದೆ. ಕ್ಷಣ ಕ್ಷಣಕ್ಕೂ ಜಗತ್ತಿನಾದ್ಯಂತ ಮುಂದೇನು ಎನ್ನುವ ಬ್ರೇಕಿಂಗ್ ನ್ಯೂಸುಗಳ ಕಾಲದಲ್ಲಿ ನಾವಿದ್ದೇವೆ. ನಾವು ಅವರ ಪರ! ನೀವು ಯಾರ ಪರ? ಈ ಕಾರಣಕ್ಕಾಗಿ ನಾವು ಅವರನ್ನು ಬೆಂಬಲಿಸುತ್ತೇವೆ! ನೀವು? ಎಂಬ ಅನುಕೂಲಸಿಂಧು ಚಟುವಟಿಕೆಗಳು ತಾಳೆ ಹಾಕುವ ಹಂತಕ್ಕೆ ಈ ಯುದ್ದ ಮುಂದೆ ನಮ್ಮನ್ನು ತಂದು ನಿಲ್ಲಿಸಬಹುದು. ಅವರವರ ಬಳಿಯಿರುವ ಆಧುನಿಕ ಶಸ್ತ್ರಾಸ್ತ್ರಗಳು ಕುಣಿದು ಕುಪ್ಪಳಿಸಬಹುದು. ಮನದೊಳಗೇ ಉಳಿದ ಅಣು ಬಾಂಬುಗಳು ಹೆಚ್ಚು ದಿನ ಕಾಯುವುದಿಲ್ಲ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನ ಪ್ರತೀಕಾರದ ಮಾತಿಗೆ ಪ್ರತಿಯಾಗಿ ಆಡಿರುವ ಮಾತುಗಳಲ್ಲಿ ಅದು ವ್ಯಕ್ತವಾಗಿದೆ.

ಎಲ್ಲಿಯ ವಿಶ್ವಸಂಸ್ಥೆ! ಎಲ್ಲಿಯ ಪ್ರಜಾಸತ್ತೆ. ವಕಾಲತ್ತು ಸಂಸ್ಕೃತಿಯ ಸ್ವಭಾವ ಮತ್ತು ದಂಗೆಕೋರ ಮನಸ್ಥಿತಿಯ ಬಲಹೀನತೆಗಳು ನಮ್ಮನ್ನು ಆಳುತ್ತಿವೆ. ಸರ್ವೇಜನ ಸುಖಿನೋ ಭವಂತು ಎಂಬ ಭಾರತದ ನೆಲದಲ್ಲಿ ಹುಟ್ಟಿದ ಮಾತು ಹರಳುಗಟ್ಟುತ್ತಿಲ್ಲ. ವಿಶ್ವ ಸಮಾಜದ ಸಾರಥ್ಯ ವಹಿಸಿರುವ ಸಾರಥಿಗಳು ಸಮರಾಭ್ಯಾಸದಲ್ಲಿದ್ದಾರೆ. ಸೋದರತ್ವ, ಮನುಷ್ಯತ್ವ, ಸಹಬಾಳ್ವೆ, ಕುವೆಂಪು ಅವರ ಪೂರ್ಣದೃಷ್ಟಿ, ಸಮನ್ವಯ, ಮನುಜಮತ ವಿಶ್ವಪಥಗಳು ಜಗತ್ತಿಗೆ ಸರ್ವಕಾಲಕ್ಕೂ ಮುಲಾಮಿನಂತೆ ಕೆಲಸ ಮಾಡಬೇಕು. ಆದರೆ ಈಗ ಅದೆಲ್ಲಾ ಮುಗಿದ ಅಧ್ಯಾಯ. ಶತ್ರು ದೇಶಗಳಿಗೆ ಬೇಕಾಗಿರುವುದು ಯಂತ್ರಚಾಲಿತ ಜಾಯಮಾನಗಳ ಮಹಾವಿಕಾರಗಳ ಗೆಲುವು. ಅದಕ್ಕಾಗಿ ಏನು ಬೇಕಾದರೂ ನಡೆಯಬಹುದು. ಇರಾನ್‌ನ ತಂತ್ರಕ್ಕೆ ಅಮೆರಿಕ ಕೂಡ ಪ್ರತಿತಂತ್ರ ಹೆಣೆಯಬಹುದು. ಅದು ತನ್ನ ಮಿತ್ರ ದೇಶಗಳಾದ ಇಸ್ರೇಲ್, ಸೌದಿ ಅರೇಬಿಯಾ, ಯು.ಎ.ಇ. ಕತಾರ್‌ಗಳೊಂದಿಗೆ ಸೇರಿ ಇರಾನ್ ಮೇಲೆ ಪ್ರತಿ ದಾಳಿ ನಡೆಸಬಹುದು. ಕಾರಣ ಈ ಎಲ್ಲ ದೇಶಗಳು ಅಮೆರಿಕದೊಂದಿಗೆ ಇಟ್ಟುಕೊಂಡಿರುವ ಸಖ್ಯವನ್ನು ಸಹಿಸದೆ ಇರಾನ್ ಆ ದೇಶಗಳ ತೈಲ ಬಾವಿಗಳನ್ನು ನಾಡಪಡಿಸಲು ಹೊರಟಿದೆ. ಹಾಗೊಮ್ಮೆ ಇರಾನ್ ಆ ಪ್ರಯತ್ನ ಮಾಡಿದರೆ, ದುಬೈ ಮತ್ತು ಕತಾರ್‌ನಲ್ಲಿರುವ ಅಮೆರಿಕದ ವಾಯುನೆಲೆಗಳು ಮತ್ತು ಸೇನಾ ನೆಲೆಗಳ ಮೇಲೆ ಇರಾನ್ ಕಣ್ಣಿಟ್ಟಿದೆ. ಕತಾರ್ ಮತ್ತು ದುಬೈನ ವಾಯುನೆಲೆಯಿಂದ ಅಮೆರಿಕ ಇರಾನ್ ಮೇಲೆ ದಾಳಿ ಮಾಡಬಹುದು ಎಂಬ ಯುದ್ಧ ಗ್ರಹಿಕೆ ಈ ತಂತ್ರಗಾರಿಕೆಯನ್ನು ರೂಪಿಸಿದೆ. ಈಗಾಗಲೇ ವಿಶ್ವದ 13ನೇ ಅತಿದೊಡ್ಡ ಸೇನೆ ಹೊಂದಿರುವ ಇರಾನ್ ಅಮೆರಿಕವನ್ನು ಮುಚ್ಚುಮರೆ ಇಲ್ಲದೆ ಕತ್ತಿ ಮಸೆಯುತ್ತಿರುವ ಚೀನಾ, ರಷ್ಯಾ, ಸಹಕಾರ ಪಡೆದು ತೊಡೆ ತಟ್ಟಬಹುದು. ಹಾಗೊಂದು ವೇಳೆ ಯುದ್ಧ ಕ್ಷಿಪಣಿಗಳು ಹಾರಾಡುವಾಗ ಚಿಕ್ಕ ಪ್ರಮಾದಗಳು ನಡೆದರೂ ಅದನ್ನೇ ದೊಡ್ಡದು ಮಾಡಿಕೊಂಡು ಚೀನಾ ಇರಾನ್‌ನನ್ನು ಬೆಂಬಲಿಸಬಹುದು. ಕಾರಣ ಇರಾನ್‌ಗೆ ಸೇರಿದ ಒಮಾನ್ ಕೊಲ್ಲಿಯಲ್ಲಿ ಚೀನಾ ತನ್ನ ಯುದ್ಧ ನೌಕೆಗಳನ್ನು ನಿಲ್ಲಿಸಿಕೊಂಡಿದ್ದು, ರಷ್ಯಾ ಸಿರಿಯಾದಲ್ಲಿ ತನ್ನ ಸೇನಾ ನೆಲೆಗಳನ್ನೇ ಹೊಂದಿದೆ. ಹೀಗೆ ಜಗತ್ತು ಈ ವಿಪ್ಲವಕಾರಿ ಯುದ್ಧೋನ್ಮಾದದಲ್ಲಿ ತೊಡಗಿರುವಾಗ ವಿಶ್ವದ ಮೂರನೇ ಮಹಾಯುದ್ಧಕ್ಕೆ ಕ್ಷಣಗಣನೆ ಶುರುವಾಗಿರುವಾಗ, ಜಾಗತಿಕ ಮಟ್ಟದಲ್ಲಿ ಈ ಇಬ್ಬರಿಗೂ ಶಾಂತಿಮಂತ್ರ ಬೋಧಿಸುವವರು ಯಾರು? ಅಂತರಾಷ್ಟ್ರೀಯ ಸಮುದಾಯವು ಯುದ್ಧದ ಬಗ್ಗೆ ಮೌನ ವಹಿಸಿಲ್ಲ ಸದ್ಯದ ಪರಿಸ್ಥಿತಿಯಲ್ಲಿ ಪ್ರತಿಕ್ರಿಯಿಸಿದೆ ಅಂತರಾಷ್ಟ್ರೀಯ ಸಮುದಾಯವು ಶಾಂತಿ ಮಾತುಕತೆಗಳನ್ನು ಪ್ರಾರಂಭಿಸಿದೆ, ಇದರಿಂದ ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸಲಾಗುತ್ತಿದೆ.

ಯುದ್ಧದಿಂದ ಬಾಧಿತವಾದ ಪ್ರದೇಶಗಳನ್ನು ಪುನರ್ನಿರ್ಮಿಸಲು ಮತ್ತು ಅಭಿವೃದ್ಧಿಪಡಿಸಲು ಪುನರ್ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಅಂತರಾಷ್ಟ್ರೀಯ ಸಮುದಾಯವು ಸಹಾಯ ಮಾಡುವುದು ಯುದ್ದದ ನಂತರದ ದಿನಗಳ ವಾಡಿಕೆ. ಆದರೆ ರಾಜಿ ಸಂಧಾನದ ಸಂದರ್ಭದಲ್ಲಿಯೇ ಆಗಿರುವ ನಷ್ಟವನ್ನು ತುಂಬಿ ಕೊಡುವ ಷರತ್ತುಬದ್ಧ ಮಾತುಕತೆಗಳು ಇಂದಿನ ಮಾತುಕತೆಗಳ ತಂತ್ರಗಾರಿಕೆ. ಇವುಗಳೆ ಬದಲಾದ ಕಾಲಘಟ್ಟದ ಹೊಸ ರೀತಿ ನೀತಿಗಳು!

ವಿಶ್ವಸಂಸ್ಥೆಯ ಇಂದಿನ ದಯನೀಯ ಸ್ಥಿತಿ ಜಗತ್ತಿನ ಶಾಂತಿಗೆ ಮಾರಕ ಅಲ್ಲವೇ! ವಿಶ್ವಸಂಸ್ಥೆಯು ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗುತ್ತಿಲ್ಲ. ಇದಕ್ಕೆ ಕಾರಣ ಪ್ರಮುಖ ರಾಷ್ಟ್ರಗಳ ಹಿತಾಸಕ್ತಿಗಳು, ಅಂತರರಾಷ್ಟ್ರೀಯ ಸಂಬಂಧಗಳ ಸಂಕೀರ್ಣತೆ, ಮತ್ತು ವಿಶ್ವಸಂಸ್ಥೆಯ ಸೀಮಿತ ಅಧಿಕಾರಗಳು ಇದಕ್ಕೆಕಾರಣ. ವಿಶ್ವಸಂಸ್ಥೆಯು ತನ್ನ ಸದಸ್ಯ ರಾಷ್ಟ್ರಗಳ ಮೇಲೆ ಅಧಿಕಾರವನ್ನು ಹೊಂದಿಲ್ಲ, ಮತ್ತು ಅಂತರರಾಷ್ಟ್ರೀಯ ಕಾನೂನು ರೂಪಿಸುವಲ್ಲಿ ವೈಫಲ್ಯ ಕಾಣುತ್ತಿದೆ. ವಿಶ್ವಸಂಸ್ಥೆಯು ತನ್ನ ಪ್ರಮುಖ ಅಂಗಸಂಸ್ಥೆಗಳಾದ ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಮತ್ತು ಅಂತರ ರಾಷ್ಟ್ರೀಯ ನ್ಯಾಯಾಲಯದ ಮೂಲಕ ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಪ್ರಯತ್ನಿಸುತ್ತಿದೆ. ಆದರೆ ಯಶಸ್ವಿಯಾಗುತ್ತಿಲ್ಲ. ಇದೇ ರೀತಿ ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ದವನ್ನು ನಿಲ್ಲಿಸಲು ವಿಶ್ವಸಂಸ್ಥೆಗೆ ಸಾಧ್ಯವಾಗಲಿಲ್ಲ. ಹಾಗಾಗಿ ಪ್ರಸ್ತುತ ವರ್ತಮಾನ ಈ ಯುದ್ಧ ನೀತಿಗಳ ನಡುವೆ ಶಾಂತಿ ಸ್ಥಾಪನೆಗಾಗಿ ವಿಶ್ವಸಂಸ್ಥೆಯ ಸುಧಾರಣೆಯ ಅಗತ್ಯವಿದೆ. ಮತ್ತು ಅದರ ಪ್ರಮುಖ ಅಂಗಸಂಸ್ಥೆಗಳ ಪಾತ್ರ ಮತ್ತು ಅಧಿಕಾರಗಳನ್ನು ಹೆಚ್ಚಿಸಬೇಕಾಗಿದೆ. ವಿಶ್ವಸಂಸ್ಥೆಯು ತನ್ನ ಸದಸ್ಯರಾಷ್ಟ್ರಗಳ ಹಿತಾಸಕ್ತಿಗಳನ್ನು ಸಮತೋಲನಗೊಳಿಸಲು ಮತ್ತು ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಪ್ರಯತ್ನಿಸಬೇಕಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲವೇ ಕೆಲವು ದೇಶಗಳು ಬಲಿಷ್ಠಗೊಂಡರೆ ಜಗತ್ತಿನ ಇತರೆ ದೇಶಗಳ ಪರಿಸ್ಥಿತಿ ಅಭದ್ರವಾಗಬಹುದು. ಇದರಿಂದಾಗಿ ಕೆಲವೇ ಕೆಲವು ದೇಶಗಳು ಬಲಿಷ್ಠಗೊಂಡರೆ, ಅದು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಅಸಮತೋಲನವನ್ನು ಸೃಷ್ಟಿಸಬಹುದು. ಬಲಿಷ್ಠ ದೇಶಗಳು ಇತರ ದೇಶಗಳ ಮೇಲೆ ಪ್ರಾಬಲ್ಯ ಸಾಧಿಸಬಹುದು, ಇದರಿಂದಾಗಿ ಇತರದೇಶಗಳ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯಕ್ಕೆ ಅಪಾಯವಾಗಬಹುದು. ಬಲಿಷ್ಠ ದೇಶಗಳ ನಡುವಿನ ಸಂಘರ್ಷವು ಇತರ ದೇಶಗಳಿಗೆ ಹಾನಿಯುಂಟು ಮಾಡಬಹುದು. ಅಂತರ ರಾಷ್ಟ್ರೀಯ ಸಂಸ್ಥೆಗಳು ಮತ್ತು ಒಪ್ಪಂದಗಳು ಬಲಿಷ್ಠ ದೇಶಗಳ ಪ್ರಾಬಲ್ಯವನ್ನು ತಡೆಯಲು ಪ್ರಯತ್ನಿಸಬೇಕು. ಅಂತರರಾಷ್ಟ್ರೀಯ ಕಾನೂನು ಮತ್ತು ನಿಯಮಗಳನ್ನು ರೂಪಿಸಿ ಮತ್ತು ಅನುಸರಿಸಿ, ಎಲ್ಲಾ ದೇಶಗಳ ಹಿತಾಸಕ್ತಿಗಳನ್ನು ಸಮತೋಲನಗೊಳಿಸಲು ಪ್ರಯತ್ನಿಸಬೇಕು. ಇದು ಈ ಹೊತ್ತಿನ ಅತ್ಯಂತ ಜರೂರು. ಆದರೆ ಇದು ಕಷ್ಟಸಾಧ್ಯ. ಜಗತ್ತು ಯುದ್ದ ನಿಲ್ಲಲಿ ಎಂಬ ಸದಾಶಯದೊಂದಿಗೆ ಕಾಯುತ್ತಿದೆ. ದೊಡ್ಡವರ ಹಗೆತನಕ್ಕೆ ಸಾಮಾನ್ಯರ ನಿತ್ಯದ ಬದುಕು ಹೈರಾಣಾಗುತ್ತಿದೆ. ಇದು ಹತ್ತಿರದಲ್ಲೆ ಕೊನೆಗಾಣಬೇಕು. ಯುದ್ಧ ನಿಲ್ಲಬೇಕು, ಬುದ್ಧ ನಗಬೇಕು. ಏನಂತೀರಿ?

ಆರೋಗ್ಯಕ್ಕಾಗಿ ಒಂದಾಗೋಣ...

ಪ್ರತೀ ವರ್ಷ ಏಪ್ರಿಲ್ 7ರಂದು ಆಚರಿಸಲಾಗುವ ವಿಶ್ವ ಆರೋಗ್ಯ ದಿನವು, ವಿಶ್ವ ಆರೋಗ್ಯ ಸಂಸ್ಥೆ (WHO) ನೇತೃತ್ವದ ಜಾಗತಿಕ ಉಪಕ್ರಮವಾಗಿದ್ದು, ವಿಶ್ವದಾದ್ಯಂತ ಸಮುದಾಯಗಳ ಮೇಲೆ ಪರಿಣಾಮ ಬೀರುವ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರಾರಂಭವಾಯಿತು. ಈ ದಿನವು ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಮಹತ್ವವನ್ನು ನೆನಪಿಸುತ್ತದೆ. ಪ್ರತೀ ವರ್ಷ ವಿಶ್ವ ಆರೋಗ್ಯ ದಿನವು ಒಂದು ನಿರ್ದಿಷ್ಟ ಆರೋಗ್ಯದ ವಿಷಯದ ಮೇಲೆ ಕೇಂದ್ರೀಕರಿಸುತ್ತದೆ. ಉದಯೋನ್ಮುಖ ಸವಾಲುಗಳು, ಅವುಗಳನ್ನು ಪರಿಹರಿಸಲು ಸಾಮೂಹಿಕ ಕ್ರಮದ ಅಗತ್ಯವಿರುವ ಸಮಸ್ಯೆಗಳನ್ನು ಎತ್ತಿ ತೋರಿಸುತ್ತದೆ. ವಿಶ್ವ ಆರೋಗ್ಯ ದಿನದ ಪ್ರಮುಖ ಸಂದೇಶವೇನೆಂದರೆ, ಉತ್ತಮ ಆರೋಗ್ಯವು ಎಲ್ಲರ ಮೂಲಭೂತ ಹಕ್ಕು ಮತ್ತು ವ್ಯಕ್ತಿಗಳು ಮತ್ತು ಸಮುದಾಯಗಳ ಅಭಿವೃದ್ಧಿ ಮತ್ತು ಸಮೃದ್ಧಿಗೆ ಅತ್ಯಗತ್ಯ, ಇದು ಎಲ್ಲರಿಗೂ ಕೈಗೆಟುಕುವ ಆರೋಗ್ಯ ಸೇವೆಯ ಅಗತ್ಯವನ್ನು ಒತ್ತಿ ಹೇಳುತ್ತದೆ. ವಿಶೇಷವಾಗಿ ಸಂಪನ್ಮೂಲಗಳು ಸೀಮಿತವಾಗಿರುವ ಅಥವಾ ಆರೋಗ್ಯ ವ್ಯವಸ್ಥೆಗಳು ದುರ್ಬಲವಾಗಿರುವ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳ ವಿರುದ್ಧ ಹೋರಾಡುವುದು, ಮಾನಸಿಕ ಆರೋಗ್ಯ ರಕ್ಷಣೆಯನ್ನು ಸುಧಾರಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ಉತ್ತೇಜಿಸುವುದು ಅಥವಾ ಆರೋಗ್ಯ ಅಸಮಾನತೆಗಳನ್ನು ನಿಭಾಯಿಸುವುದು, ಹೀಗೆ ಈ ಆಚರಣೆಯು ಹೆಚ್ಚು ಸಮಾನ ಮತ್ತು ಆರೋಗ್ಯಕರ ಜಗತ್ತನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಇತ್ತೀಚಿನ ವರ್ಷಗಳನ್ನು ನಾವು ನೋಡುತ್ತಿರುವಂತೆ ಮಾನಸಿಕ ಆರೋಗ್ಯ, ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ ಮತ್ತು ಆರೋಗ್ಯದ ಮೇಲೆ ಹವಾಮಾನ ಬದಲಾವಣೆ ಪ್ರಭಾವದಂತಹ ವಿಷಯಗಳ ಮೇಲೆಯೂ ವಿಶ್ವ ಆರೋಗ್ಯ ಸಂಸ್ಥೆಯು ಈ ದಿನಾಚರಣೆಯಂದು ಮರು ಪರಿಶೀಲಿಸುವಂತೆ ಎತ್ತಿ ತೋರಿಸುತ್ತದೆ. ಈ ವಿಷಯಗಳು ಜಾಗತಿಕ ಆರೋಗ್ಯದ ಪರ ಸಂಬಂಧ ಮತ್ತು ಯೋಗಕ್ಷೇಮವನ್ನು ಸುಧಾರಿಸಲು ಬೇಕಾಗುವ ಸಮಗ್ರ ವಿಧಾನಗಳ ಅಗತ್ಯತೆಯ ಬಗ್ಗೆ ಗಮನವನ್ನು ಸೆಳೆಯುತ್ತದೆ. ಇದು ಅನಾರೋಗ್ಯಕ್ಕೆ ಚಿಕಿತ್ಸೆ ನೀಡುವುದರ ಬಗ್ಗೆ ಮಾತ್ರವಲ್ಲ, ತಡೆಗಟ್ಟುವುದು, ಶಿಕ್ಷಣ ಮತ್ತು ಆರೋಗ್ಯಕರ ಆಯ್ಕೆಗಳು ಎಲ್ಲರಿಗೂ ನಿಲುಕುವಂತಹ ವಾತಾವರಣವನ್ನು ಸೃಷ್ಟಿಸುವ ಬಗ್ಗೆಯೂ ಆಗಿದೆ.

ವಿಶ್ವ ಆರೋಗ್ಯ ದಿನವು ವ್ಯಕ್ತಿಯು ತನ್ನ ಆರೋಗ್ಯವನ್ನು ಸುಧಾರಿಸಿಕೊಳ್ಳುವಲ್ಲಿ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪ್ರೋತ್ಸಾಯಿಸುವುದಲ್ಲದೆ, ದೈಹಿಕ ಚಟುವಟಿಕೆಯ ಅಗತ್ಯತೆ, ಸಮತೋಲನ ಆಹಾರದ ಮಹತ್ವ, ಮಾನಸಿಕ, ಸಾಮಾಜಿಕ ಒತ್ತಡವನ್ನು, ಹೇಗೆ ನಿರ್ವಹಿಸಿಕೊಳ್ಳುವುದು ಮತ್ತು ಸತ್ಕಾಲಿಕ ವೈದ್ಯಕೀಯ ಚಿಕಿತ್ಸೆ ಮತ್ತು ಸಲಹೆಯನ್ನು ಹೇಗೆ ಪಡೆಯುವುದು ಎಲ್ಲದರ ಬಗ್ಗೆಯೂ ಜನಸಾಮಾನ್ಯರಲ್ಲಿ ಜಾಗೃತಿಯುಂಟು ಮಾಡುವತ್ತ ಸಹಕಾರಿಯಾಗುತ್ತದೆ. ಈ ವಿಶ್ವ ಆರೋಗ್ಯ ದಿನವನ್ನು ಬೆಂಬಲಿಸಿ ಆಚರಿಸುವ ಮೂಲಕ ವಿವಿಧ ವೈದ್ಯಕೀಯ ವಿಭಾಗದ ವೈದ್ಯರು, ಸರ್ಕಾರಿ-ಖಾಸಗಿ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು, ಸಂಘಸಂಸ್ಥೆಗಳು, ವಿವಿಧ ವೈದ್ಯಕೀಯ ಪದ್ಧತಿಗಳು ಉದಾ: ಆಯುರ್ವೇದ, ಅಲೋಪತಿ, ಹೋಮಿಯೋಪತಿ, ಯೋಗ, ಸಿದ್ಧ, ವೈದ್ಯಕೀಯ ಪದ್ಧತಿಯಲ್ಲಿಯ ನಿರತ ತಜ್ಞ ವೈದ್ಯರು ಜನಸಾಮಾನ್ಯರಿಗೆ ಬೇಕಾದ ಆರೋಗ್ಯದ ಮೂಲಭೂತ ಹಕ್ಕನ್ನು ಸಾರುವಲ್ಲಿ ಶ್ರಮಿಸುತ್ತಿವೆ.

ಆರೋಗ್ಯಕ್ಕಾಗಿ ಒಂದಾಗೋಣ, ವಿಜ್ಞಾನದೊಂದಿಗೆ ನಿಲ್ಲೋಣ Together for health, Stand with Science ಇವು ಈ ಬಾರಿ 2026ರ ಘೋಷಣಾ ವಾಕ್ಯ. ನನ್ನಂತಹ ದಿನನಿತ್ಯ ರೋಗಿಗಳೊಂದಿಗೆ ವ್ಯವಹರಿಸುತ್ತಿರುವ ಸಾವಿರಾರು ವೈದ್ಯರ ಮುಂದಿರುವ ಜ್ವಲಂತ ಸವಾಲು ಮತ್ತು ಸಮಸ್ಯೆ ಎಂದರೆ, ಪ್ರಸ್ತುತ ಅಂತರ್ಜಾಲ ಅಂದರೆ ಇಂಟರ್‌ನೆಟ್, ವಾಟ್ಸಪ್, ಯೂಟ್ಯೂಬ್, ಇನ್ಸ್ಟಾಗ್ರಾಂನಲ್ಲಿ ಸಿಕ್ಕುತ್ತಿರುವ ಆರೋಗ್ಯ ಸಲಹೆಗಳನ್ನು ನೋಡಿ ಹಲವಾರು ಗೊಂದಲಗಳಿಂದ ಬರುವ ರೋಗಿಗಳನ್ನು ಚಿಕಿತ್ಸಿಸುವುದು ! ಎಂದರೆ ಅತಿಶಯೋಕ್ತಿಯೇನಲ್ಲ ! ಪುರಾವೆ ಇಲ್ಲದ, ವಿಚಾರಗಳನ್ನು ಆಕರ್ಷಕವಾಗಿ ಈ ಜಾಲತಾಣಗಳಲ್ಲಿ ಪ್ರಚಾರಪಡಿಸಿ ಜನಸಾಮಾನ್ಯರಿಂದ ಹಣ ಸುಲಿಗೆ ಮಾಡಿ, ಅವರ ಆರೋಗ್ಯವನ್ನು ಹದಗೆಡಿಸಿ ಕೊನೆಗೆ ನಮ್ಮಂತಹ ವೈದ್ಯರಲ್ಲಿಗೆ ಬರುವವರ ಸಂಖ್ಯೆಯೇ ಹೆಚ್ಚಾಗಿದೆ. ಇದು ಕಳವಳಕಾರಿಯೂ ಹೌದು! ಹಾಗೆಯೇ ವಿಪರೀತ ಶಾಲಾ-ಕಾಲೇಜುಗಳ ಮಕ್ಕಳು, ಯುವಜನರಲ್ಲೂ ಈ ಗೀಳು ಅಂಟಿದ್ದು, ಮುಕ್ತ ಲೈಂಗಿಕ ಸ್ವಾತಂತ್ರ್ಯ, ವಿಕೃತಿ ಮನಸ್ಸು, ಒತ್ತಡದತ್ತ ಹಾಗೆಯೇ ಲೈಂಗಿಕ ಶಕ್ತಿಯನ್ನು ಹೆಚ್ಚಿಸುವ ಸುಳ್ಳು ಔಷಧಗಳ ಸೇವನೆಯತ್ತ ಹಾಗೆಯೇ ಗರ್ಭಧಾರಣೆಯನ್ನು ತಡೆಯುವ ಔಷಧಿಗಳ ಸ್ವಯಂ ಉಪಯೋಗ ಮುಂತಾದ ವಿಕೃತಿಗಳಿಗೂ ನಮ್ಮ ಯುವಕ-ಯುವತಿಯರು ವಾಲುತ್ತಿದ್ದಾರೆ! ಇವೆಲ್ಲ ಪ್ರಶ್ನೆಗಳಿಗೂ ಯಾವುದೇ ನಿರ್ದಿಷ್ಟ ಕಾನೂನು ಮತ್ತು ಅಂಕುಶವಿಲ್ಲದಿರುವುದೂ ಖೇದಕರ !

ಆರೋಗ್ಯ ಎಂದರೆ ಬರೀ ವೈದ್ಯರು ಮತ್ತು ಆಸ್ಪತ್ರೆಗಳ ಜವಾಬ್ದಾರಿಯಲ್ಲ ಅಲ್ಲವೇ? ನಮ್ಮ ನಿಮ್ಮೆಲ್ಲರ ಆಸ್ತಿ ಅಲ್ಲವೆ ವೈದ್ಯರೊಂದಿಗಿನ ಸಮಾಜದಲ್ಲಿರುವ ಪ್ರತಿಯೊಬ್ಬ ಜನಸಾಮಾನ್ಯನೂ ಪರಸ್ಪರ ಸಹಕರಿಸಬೇಕಲ್ಲವೇ? ನಾವಿಂದು ವೈಜ್ಞಾನಿಕ ಸಂಶೋಧನೆಗಳಿಂದ ಸಿದ್ಧಪಡಿಸಿದ ಲಸಿಕೆಗಳಿಂದ, ಪೋಲಿಯೋ, ಸಿಡುಬು, ಧನುರ್ವಾತ, ಮುಂತಾದ ಮಾರಣಾಂತಿಕ ತೊಂದರೆಗಳನ್ನು ತಡೆಗಟ್ಟಿದ್ದೇವೆ. ಈಗ ನಮ್ಮ ಭಾರತದಲ್ಲಿಯೇ HPV ಲಸಿಕೆಯನ್ನು ಉಚಿತವಾಗಿ ಹೆಣ್ಣುಮಕ್ಕಳಿಗೆ ಹಾಕುವ ಮೂಲಕ ಗರ್ಭಕಂಠದ ಕ್ಯಾನ್ಸರನ್ನು ತಡೆಗಟ್ಟಿ, ಎಲ್ಲಾ ವಿಜ್ಞಾನಿಗಳು, ವೈದ್ಯರು, ಸಂಘ ಸಂಸ್ಥೆಗಳೊಂದಿಗೆ ಸರ್ಕಾರವು ಸೆಣಸುತ್ತಿವೆ, ಇವೆಲ್ಲವನ್ನು ಜನಸಾಮಾನ್ಯರು ಅರ್ಥಮಾಡಿಕೊಳ್ಳಬೇಕಾಗಿದೆ ಅಲ್ಲವೆ ಜನಸಾಮಾನ್ಯರಿಗೆ ಆರೋಗ್ಯ ನೀಡುವುದು ಬರೀ ಸರ್ಕಾರ ಅಥವಾ ಆಸ್ಪತ್ರೆಯಲ್ಲಿಯ ವೈದ್ಯರ ಕರ್ತವ್ಯ ಮತ್ತು ಜವಾಬ್ದಾರಿ ಮಾತ್ರವಲ್ಲ, ಅದು ನನ್ನ ಜವಾಬ್ದಾರಿಯೂ ಹೌದು ಎಂಬ ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಆರೋಗ್ಯಕರ ಜೀವನ ಶೈಲಿಯ ಬಗ್ಗೆ, ಸಾಕ್ಷರತೆ ಬಗ್ಗೆ ವೈದ್ಯರಲ್ಲಿ ಸಮಾಲೋಚಿಸಿ ಉತ್ತಮ ಜ್ಞಾನ ಪಡೆದುಕೊಂಡು ಅಳವಡಿಸಿಕೊಳ್ಳಬೇಕು. ಸಮತೋಲಿತ ಆಹಾರ, ವಿಹಾರ ವ್ಯಾಯಾಮ, ಮನಸ್ಸು, ಆಧ್ಯಾತ್ಮಿಕತೆಯನ್ನು ಕಾಪಾಡಿಕೊಳ್ಳಬೇಕು, ನಮ್ಮ ಸುತ್ತಮುತ್ತಲಿನ ಸಮಾಜದ ಆರೋಗ್ಯಕರ ಪರಿಸರದ ಬಗ್ಗೆ ಜಾಗೃತಿಯನ್ನು ಹೊಂದಬೇಕು. ಹೀಗಾದಲ್ಲಿ ಮಾತ್ರ ಆರೋಗ್ಯಕ್ಕಾಗಿ ಒಂದಾಗೋಣ ಎಂಬ ಮಾತಿನಂತೆ ನಾವೆಲ್ಲರೂ ಪರಸ್ಪರ ಸಹಕರಿಸಿ, ವಿಜ್ಞಾನದೊಂದಿಗೆ ನಿಲ್ಲೋಣ ಎಂಬ ಘೋಷಣೆಯೊಂದಿಗೆ ವೈಜ್ಞಾನಿಕವಾಗಿ ಜೀವನ ನಡೆಸಿದಲ್ಲಿ ಮಾತ್ರ ಆರೋಗ್ಯವಂತ ನಾಗರೀಕ ಸಮಾಜ, ದೇಶವನ್ನು ಕಟ್ಟಲು ಸಾಧ್ಯ!

ಇಂದು ವಿಶ್ವ ಆರೋಗ್ಯ ದಿನಾಚರಣೆ





ಡಾ॥ ಸುಧಾ .ಎಂ.ಎನ್
ಆಯುರ್ವೇದ ಮತ್ತು ಯೋಗ ತಜ್ಞರು
ಮೊ.: 9448071933.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

8.70 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ

● ಪಾದಯಾತ್ರೆ ನಡೆಸಿ, ಸಾರ್ವಜನಿಕ ಸಮಸ್ಯೆ ಆಲಿಸಿದ ಜಿಟಿಡಿ ● ಸ್ಥಳದಲ್ಲೇ ಜನರ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚನೆ





ಕೂರ್ಗಳ್ಳಿ ಪ್ರದೇಶದ ವಿವಿಧ ಬೀದಿಗಳ ಅಭಿವೃದ್ಧಿಗೆ 8.70 ಕೋಟಿ ರೂ ವೆಚ್ಚದ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಬಲಚಿತ್ರದಲ್ಲಿ ಜನರ ಸಮಸ್ಯೆ ಆಲಿಸುತ್ತಿರುವ ಶಾಸಕರು.

ಮೈಸೂರು, ಏ.6(ಜಿಎ)–ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಕೂರ್ಗಳ್ಳಿ ಪ್ರದೇಶದ ವಿವಿಧ ಬೀದಿಗಳ ಅಭಿವೃದ್ಧಿಗೆ 8.70 ಕೋಟಿ ರೂ ವೆಚ್ಚದ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿ, ಪಾದಯಾತ್ರೆಯ ಮೂಲಕ ಸಾರ್ವಜನಿಕರ ಸಮಸ್ಯೆ ಆಲಿಸಿದರು.

ಕೂರ್ಗಳ್ಳಿಯಲ್ಲಿ ಸೋಮವಾರ ನಡೆದ ಸರಳ ಕಾರ್ಯಕ್ರಮದಲ್ಲಿ 8.70 ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿ, ಮಾತನಾಡಿದ ಅವರು, ಹಲವು ದಿನಗಳ ಬೇಡಿಕೆಯಂತೆ ಹೂಟಗಳ್ಳಿ ನಗರಸಭೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿಸಲಾಗಿದೆ. ನಿಗದಿತ ಅವಧಿಯೊಳಗೆ ಕಾಮಗಾರಿ ಮುಗಿಸಬೇಕು. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದು ಸೂಚಿಸಿದರು.

ಸ್ಥಳೀಯ ಜನರು ಒಳಚರಂಡಿ, ಕುಡಿಯುವ ನೀರು, ಸಿಸಿ ಚರಂಡಿ, ರಸ್ತೆ, ಬೀದಿ ದೀಪಗಳು ಹಾಗೂ ಇತರೆ ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ಬೇಡಿಕೆ ಇಟ್ಟಿದ್ದರು. ಹಾಗೇ ಬಡಾವಣೆಗೆ ಬಂದಾಗ ಅನೇಕ ಸಮಸ್ಯೆಗಳನ್ನು ನೋಡಿದ್ದೆ, ಈಗ ಎಲ್ಲಾ ಬೀದಿಗಳಿಗೂ ಚರಂಡಿ, ಸಿಸಿ ರಸ್ತೆ, ಒಳಚರಂಡಿ ಕಾಮಗಾರಿ ಮಾಡಲಾಗುವುದು ಎಂದು ವಿವರಿಸಿದರು.

ಹೂಟಗಳ್ಳಿ ನಗರಸಭೆ ವತಿಯಿಂದ ಕೂರ್ಗಳ್ಳಿ ಮುಖ್ಯರಸ್ತೆ, ಕೂರ್ಗಳ್ಳಿ ಅರಳಿ ಮರದ ವೃತ್ತದಿಂದ ಕೆಐಎಡಿಬಿ ಡಬಲ್ ರಸ್ತೆಯವರೆಗೆ ರಸ್ತೆ ಮತ್ತು ಚರಂಡಿ ನಿರ್ಮಾಣ, ಕೂರ್ಗಳ್ಳಿ ಮುಖ್ಯರಸ್ತೆ ಹಾಲಿನ ಡೈರಿ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ರಸ್ತೆ, ಚರಂಡಿ ನಿರ್ಮಾಣ, ಹಳೆ ಅರಣ್ಯ ಭವನ ವೃತ್ತದಿಂದ ಕೂರ್ಗಳ್ಳಿ ಕೊಪ್ಪಲು ಶ್ರೀರಾಮಮಂದಿರ ವೃತ್ತದವರೆಗೆ ಮುಖ್ಯ ರಸ್ತೆ, ನಂಜುಂಡೇಗೌಡ ಅವರ ಮನೆಯ ಮುಂಭಾಗ ಹಾಗೂ ಹಿಂಭಾಗದ ಅಡ್ಡ ರಸ್ತೆಗಳಲ್ಲಿ ರಸ್ತೆ, ಚರಂಡಿ ಹಾಗೂ ಒಳ ಚರಂಡಿ ನಿರ್ಮಾಣ ಕಾಮಗಾರಿ, ಕೆಇಬಿ ರಾಮಕೃಷ್ಣ ಮನೆ ಹಾಗೂ ಮಹೇಶ್ ಅವರ ಮನೆ ರಸ್ತೆಗಳು, ಸೀಮೆಎಣ್ಣೆ ಕೃಷ್ಣಪ್ಪ ಮತ್ತು ಕಿರುಗಾವಲು ಸಿದ್ದೇಗೌಡರ ಮನೆ ರಸ್ತೆ, ಕೂರ್ಗಳ್ಳಿ ಮೇಗಳಕೊಪ್ಪಲು ದೇವೇಗೌಡರ ಮನೆಯಿಂದ ಅಮ್ಮಣ್ಣಿ ಚಿಕ್ಕಣ್ಣ ಮನೆವರೆಗೆ, ರಾಣಿ ಮದ್ರಾಸ್ ಕೃಷ್ಣ ಮನೆಯಿಂದ ವೆಂಕಟೇಶ್ ಮನೆವರೆಗೆ, ಶಿವನಗರ ಮುಖ್ಯರಸ್ತೆ ಅಭಿವೃದ್ಧಿ, ಬೆಳವಾಡಿ ಮುಖ್ಯರಸ್ತೆಯಿಂದ ಆಟೋ ಲೋಕೇಶ್ ಮನೆವರೆಗೆ, ಮೇಗಳಕೊಪ್ಪಲು ಸೋಮಶೇಖರ್ ಮನೆಯಿಂದ ಚಿಕ್ಕ ಬೋರಯ್ಯನ ಜಯರಾಮರವರ ಮನೆವರೆಗೆ, ಗಣೇಶ ದೇವಸ್ಥಾನದ ರಸ್ತೆ, ಕೂರ್ಗಳ್ಳಿ ಮೇಗಳಕೊಪ್ಪಲು ಸರಸ್ವತಿ ಪ್ರಾವಿಷನ್ ಸ್ಟೋರ್‌ನಿಂದ ಗಾರ್ಮೆಂಟ್ಸ್ ರಸ್ತೆವರೆಗೆ ವಿವಿಧ ಕಾಮಗಾರಿಗಳು ನಡೆಯಲಿವೆ. ಅದೇ ರೀತಿ ಕೂರ್ಗಳ್ಳಿ ಕೆಆರ್‌ಎಸ್ ರಸ್ತೆಯ ಆಟೋಮೋಟಿವ್ ಆಕ್ಸಲ್ ವೃತ್ತದಿಂದ ಡ್ಯಾಮ್‌ಡನ್ ಅಪಾರ್ಟ್‌ಮೆಂಟ್ ಹತ್ತಿರದ ರಿಂಗ್ ರಸ್ತೆಯವರೆಗೆ ಚರಂಡಿ, ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯಲಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್, ಎಇಇ ಮಧು, ಇಂಜಿನಿಯರ್ ದಿಲೀಪ್, ಜೂನಿಯರ್ ಇಂಜಿನಿಯರ್ ಸದಾಶಿವಪ್ಪ, ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು, ತಾಪಂ ಮಾಜಿ ಸದಸ್ಯ ಸತೀಶ್, ಮುಖಂಡರಾದ ಪಟೇಲ್ ರಾಮಣ್ಣ, ನಂಜುಂಡೇಗೌಡ, ಚನ್ನೇಗೌಡ, ಬೋರೇಗೌಡ, ಮಹೇಶ್ ಮತ್ತಿತರರಿದ್ದರು.

ಸಮಸ್ಯೆ ಆಲಿಸಿದ ಜಿಟಿಡಿ: ಕೂರ್ಗಳ್ಳಿಯಲ್ಲಿ ಪಾದಯಾತ್ರೆ ನಡೆಸಿದ ಜಿ.ಟಿ.ದೇವೇಗೌಡರು ಸಾರ್ವಜನಿಕರ ಸಮಸ್ಯೆ ಆಲಿಸಿದರು. ಕುಡಿಯುವ ನೀರು ಸರಿಯಾಗಿ ಸರಬರಾಜು ಆಗುತ್ತಿಲ್ಲ. ಬೋರ್‌ವೆಲ್ ನೀರು ಬತ್ತಿ ಹೋಗಿರುವ ಕಾರಣ ಟ್ಯಾಂಕರ್ ನೀರು ಪೂರೈಸಬೇಕು. ವಾರದಲ್ಲಿ ಮೂರು ದಿನಗಳು ನೀರು ಪೂರೈಕೆಯಾಗುತ್ತಿದ್ದು, ಎರಡು ದಿನಕ್ಕೊಮ್ಮೆ ನೀರು ಬಿಡುವಂತೆ ಮಾಡಬೇಕು ಎಂದು ಕೋರಿದರು. ಮತ್ತೊಬ್ಬರು ಚರಂಡಿ ನೀರು ಹರಿಯುತ್ತಿದ್ದು, ಇದನ್ನು ಸರಿಪಡಿಸಬೇಕು. ಮುಖ್ಯರಸ್ತೆಯಲ್ಲಿರುವ ಫ್ಯಾಕ್ಟರಿಯಿಂದ ಹೊರ ಬರುವ ಹೊಗೆಯಿಂದ ಉಸಿರಾಟಕ್ಕೆ ತುಂಬಾ ಸಮಸ್ಯೆಯಾಗಿದೆ. ಜಿಲ್ಲಾಧಿಕಾರಿಗಳು, ಪರಿಸರ ಮಂಡಳಿ ಅಧಿಕಾರಿಗಳಿಗೆ ದೂರು ನೀಡಿದ್ದರೂ ಹೊಗೆಯಿಂದ ಆಗುವ ಸಮಸ್ಯೆ ತಪ್ಪಿಸಿಲ್ಲ ಎಂದು ಶಾಸಕರ ಮುಂದೆ ಹೇಳಿಕೊಂಡರು.

ಬೆಳಿಗ್ಗೆ ಮತ್ತು ಸಂಜೆ ನಗರ ಸಾರಿಗೆ ಬಸ್‌ಗಳ ಸಂಚಾರ ಇಲ್ಲದೆ ಮುಖ್ಯರಸ್ತೆಗೆ ನಡೆದುಕೊಂಡು ಹೋಗಬೇಕಾದ ಸನ್ನಿವೇಶ ಇದೆ ಎಂದು ಮಹಿಳೆಯರು ಶಾಸಕರ ಬಳಿ ಅಳಲು ತೋಡಿಕೊಂಡರು. ಕೂಡಲೇ ನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್‌ಗೆ ಕರೆ ಮಾಡಿ ಮಾತನಾಡಿ, ಬೆಳಿಗ್ಗೆ 9.30ರವರೆಗೆ ಹಾಗೂ ಸಂಜೆ 4.30ರವರೆಗೆ ಹೆಚ್ಚುವರಿಯಾಗಿ ಎರಡು ಬಸ್‌ಗಳ ರೂಟ್ ಕಲ್ಪಿಸಬೇಕು ಎಂದು ಸೂಚಿಸಿದರು. ಇದಕ್ಕೆ ಒಪ್ಪಿದ ಅಧಿಕಾರಿಗಳು, ಮಂಗಳವಾರದಿಂದಲೇ ಸಂಚಾರ ಮಾಡಲಿವೆ ಎಂದು ಭರವಸೆ ನೀಡಿದರು.

ಹೂಟಗಳ್ಳಿಯನ್ನು ಅಭಿವೃದ್ಧಿ ಮಾಡಲೇಬೇಕೆಂದು ಗ್ರಾಪಂಅನ್ನು ನಗರಸಭೆಯನ್ನಾಗಿ ಮಾಡಿಸಿದ್ದೇನೆ. ಈಗ ಅನುದಾನ ಬಿಡುಗಡೆ ಆಗಿರುವುದರಿಂದ ಕಾಮಗಾರಿಗಳು ಪ್ರಾರಂಭವಾಗಲಿದೆ ಎಂದರು.

> “ಕುಡಿಯುವ ನೀರಿನ ಟ್ಯಾಂಕ್ ದುರಸ್ತಿಗೆ ಸಂಬಂಧಿಸಿದಂತೆ ಕೆಐಎಡಿಬಿ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳು ಶಾಸಕರ ಗಮನಕ್ಕೆ ತಂದರು. ನಾವು ಕಾಮಗಾರಿ ಮಾಡಲು ಶುರು ಮಾಡಲು ರೆಡಿ ಇದ್ದೇವೆ. ಆದರೆ, ಕೆಐಎಡಿಬಿ ಅಧಿಕಾರಿಗಳು ಅವಕಾಶ ನೀಡುತ್ತಿಲ್ಲ ಎಂದು ಬಡಾವಣೆ ನಿವಾಸಿಗಳು ಶಾಸಕರ ಬಳಿ ಅಲವತ್ತುಕೊಂಡರು. ತಕ್ಷಣವೇ ದೂರವಾಣಿ ಮೂಲಕ ಹಿರಿಯ ಅಧಿಕಾರಿಗಳೊಂದಿಗೆ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡರು, ಕುಡಿಯುವ ನೀರಿನ ಕಾಮಗಾರಿಗೂ ಈ ರೀತಿ ಆಕ್ಷೇಪ ವ್ಯಕ್ತಪಡಿಸುವುದು ಸರಿಯಲ್ಲ. ಉಂಡುವಾಡಿ ಯೋಜನೆ ಸಂಪರ್ಕ ಆರಂಭವಾದ ಮೇಲೆ ಕೆಐಎಡಿಬಿ ಟ್ಯಾಂಕ್ ಬಳಸುವುದಿಲ್ಲ. ಅಲ್ಲಿಯ ತನಕ ಬಳಸಲು ಅವಕಾಶ ಕೊಡಿ ಎನ್ನುವಂತೆ ಸೂಚಿಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅವರೊಂದಿಗೆ ಸಮಾಲೋಚಿಸಿ ಕುಡಿಯುವ ನೀರಿನ ವಿಚಾರದಲ್ಲಿ ಆಗುವ ಸಮಸ್ಯೆಗಳನ್ನು ಇತ್ಯರ್ಥಪಡಿಸಬೇಕು. ಬಡಾವಣೆಗೆ ಹೆಚ್ಚುವರಿ ಟ್ಯಾಂಕರ್ ನೀರಿನ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

ನಾಳೆಯಿಂದ ಅತ್ಯಾಧುನಿಕ ಹೊಸ ಬೋಗಿಗಳೊಂದಿಗೆ ಮೈಸೂರು–ತಾಳಗುಪ್ಪ ಡೈಲಿ ಎಕ್ಸ್‌ಪ್ರೆಸ್ ಸಂಚಾರ



ಮೈಸೂರು, ಏ.6(ಬಿಎಲ್‌ಯು)–ಮೈಸೂರು–ತಾಳಗುಪ್ಪ ಡೈಲಿ ಎಕ್ಸ್‌ಪ್ರೆಸ್ ರೈಲಿನ ಹಳೆಯ ಐಸಿಎಫ್ ಬೋಗಿ ಗಳನ್ನು ತೆರವುಗೊಳಿಸಿ ಅತ್ಯಾಧುನಿಕ ಲಿಂಕ್ ಹಾಫ್ಮನ್ ಬುಶ್(ಎಲ್‌ಹೆಚ್‌ಬಿ) ಬೋಗಿಗಳನ್ನು ಅಳವಡಿಸಲಾಗಿದೆ ಎಂದು ಮೈಸೂರಿನ ರೈಲ್ವೆ ವಿಭಾಗೀಯ ವ್ಯವಸ್ಥಾಪಕರ ಕಚೇರಿ ಪ್ರಕಟಣೆ ತಿಳಿಸಿದೆ.


ಹೊಸ ಬೋಗಿಗಳೊಂದಿಗೆ ಏಪ್ರಿಲ್ 8ರಿಂದ ಮೈಸೂರು–ತಾಳಗುಪ್ಪ ರೈಲುಗಳು ಅಧಿಕೃತವಾಗಿ ಸಂಚಾರ ಆರಂಭಿಸಲಿವೆ. ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ನಂತರ ಈ ರೈಲು ಒಟ್ಟು 18 ಎಲ್‌ಹೆಚ್‌ಬಿ ಬೋಗಿಗಳನ್ನು ಒಳಗೊಂಡಿದ್ದು, ಇದರಲ್ಲಿ ಒಂದು ಎಸಿ ಚೇರ್‌ಕಾರ್, ಐದು ದ್ವಿತೀಯ ದರ್ಜೆ ಚೇರ್‌ಕಾರ್ ಹಾಗೂ ಹತ್ತು ಸಾಮಾನ್ಯ ದ್ವಿತೀಯ ದರ್ಜೆ ಬೋಗಿಗಳಿರಲಿವೆ. ಇದರೊಂದಿಗೆ ದಿವ್ಯಾಂಗ ಸ್ನೇಹಿ ಸೌಲಭ್ಯವನ್ನು ಹೊಂದಿರುವ ದ್ವಿತೀಯ ದರ್ಜೆ ಮತ್ತು ಲಗ್ಗೇಜ್ ಬ್ರೇಕ್ ವ್ಯಾನ್ ಹಾಗೂ ಲಗೇಜ್‌ಕಮ್ ಬ್ರೇಕ್ ವ್ಯಾನ್ ಈ ರೈಲಿನ ಸಂಯೋಜನೆಯಲ್ಲಿ ಸೇರಿವೆ ಎಂದು ತಿಳಿಸಲಾಗಿದೆ. ಆಧುನೀಕರಣದಿಂದ ಪ್ರಯಾಣಿಕರು ಇನ್ನು ಮುಂದೆ ಮೈಸೂರು ಮತ್ತು ತಾಳಗುಪ್ಪ ನಡುವೆ ಸುಲಲಿತ, ಸುರಕ್ಷಿತ ಹಾಗೂ ಅತ್ಯಂತ ಆರಾಮದಾಯಕ ಪ್ರಯಾಣ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಳೆ ಅಡ್ಡಿ: ಕೋಲ್ಕತ್ತಾ–ಪಂಜಾಬ್ ಪಂದ್ಯ ರದ್ದು

ಕೋಲ್ಕತ್ತಾ, ಏ.6– ಮಳೆಯಿಂದಾಗಿ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಪಂದ್ಯ ರದ್ದಾಗಿದೆ. ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಸೋಮವಾರ ಟಾಸ್ ಗೆದ್ದು ಕೆಕೆಆರ್ ನಾಯಕ ಅಜಿಂಕ್ಯಾ ರಹಾನೆ ಬ್ಯಾಟಿಂಗ್ ಆಯ್ದುಕೊಂಡಿದ್ದರು. ತಂಡದ ಇಬ್ಬರು ಪ್ರಮುಖ ಬ್ಯಾಟರ್‌ಗಳಾದ ಫಿನ್ ಅಲೆನ್ ಹಾಗೂ ಕ್ಯಾಮರೂನ್ ಗ್ರೀನ್ ಬಹುಬೇಗನೆ ವಿಕೆಟ್ ಒಪ್ಪಿಸಿದರು. ಆದರೆ ಕೆಕೆಆರ್ 3.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 25 ರನ್ ಗಳಿಸಿದ್ದ ವೇಳೆ ಮಳೆ ಸುರಿಯಲಾರಂಭಿಸಿತು. ಇದರಿಂದ ಪಂದ್ಯವನ್ನು ಅರ್ಧಕ್ಕೆ ನಿಲ್ಲಿಸಲಾಯಿತು.

ಸಮಯ ಕಳೆದಂತೆ ಮಳೆ ತೀವ್ರಗೊಂಡ ಕಾರಣ ಪಂದ್ಯ ಆರಂಭಿಸಲು ಸಾಕಷ್ಟು ಸಮಯ ಕಾಯಲಾಯಿತು. ರಾತ್ರಿ 11.15ರ ವೇಳೆಗೆ ತಲಾ 5 ಓವರ್‌ಗಳ ಪಂದ್ಯ ನಡೆಸಲು ಅಂಪೈರ್‌ಗಳು ಮುಂದಾದರು. ಆದರೆ ಮೈದಾನದಲ್ಲಿ ನೀರು ನಿಂತಿದ್ದರಿಂದ ಅಂಪೈರ್‌ಗಳು ಉಭಯ ತಂಡಗಳ ನಾಯಕರೊಂದಿಗೆ ಚರ್ಚಿಸಿ ಪಂದ್ಯವನ್ನು ರದ್ದುಗೊಳಿಸಿದರು. ಹೀಗಾಗಿ ಕೆಕೆಆರ್ ಮತ್ತು ಪಂಜಾಬ್‌ಗೆ ತಲಾ ಒಂದು ಪಾಯಿಂಟ್ ನೀಡಲಾಯಿತು. ಇದರೊಂದಿಗೆ ಕೆಕೆಆರ್ ಅಂಕಪಟ್ಟಿಯಲ್ಲಿ ಖಾತೆ ತೆರೆದರೇ, ಪಂಜಾಬ್ 5 ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿತು.

ಆಟೋ ಎಲ್‌ಪಿಜಿ ಸಮಸ್ಯೆ ಪರಿಹಾರ ಯತ್ನ



ಬೆಂಗಳೂರು, ಏ.6(ಕೆಎಂಶಿ)–ಆಟೋ ಎಲ್‌ಪಿಜಿ ಸಮಸ್ಯೆ ಪರಿಹರಿಸಲು ರಾಜ್ಯ ಸರ್ಕಾರ ಮಧ್ಯಪ್ರವೇಶಿಸಲಿದೆ ಎಂದು ಆಹಾರ–ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿನಿತ್ಯ 6,000 ಆಟೋ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಆಗುತ್ತಿದ್ದು, ಇದು ಸಾಲದಾಗಿದೆ ಎಂದರು. ಆಟೋ ಚಾಲಕರ ಜೀವನವು ಎಲ್‌ಪಿಜಿ ಸರಬರಾಜು ಅವಲಂಬಿಸಿದೆ, ಆದ್ದರಿಂದ ಈ ಸಮಸ್ಯೆ ಬಗೆಹರಿಸಲು ಏ.10ರಂದು ತೈಲ ಕಂಪನಿಗಳು ಹಾಗೂ ಇಲಾಖಾ ಅಧಿಕಾರಿಗಳ ಉನ್ನತಮಟ್ಟದ ಸಭೆ ಕರೆದಿದ್ದೇನೆ. ಸರ್ಕಾರ ಪ್ರತಿನಿತ್ಯ 3,000 ಆಟೋ ಎಲ್‌ಪಿಜಿ ಸಿಲಿಂಡರ್ ಪೂರೈಸಿದರೆ, ಖಾಸಗಿ ಕಂಪನಿಗಳು ಅಷ್ಟೇ ಪ್ರಮಾಣದಲ್ಲಿ ಸಿಲಿಂಡರ್ ಪೂರೈಕೆ ಮಾಡುತ್ತಿವೆ. ಖಾಸಗಿ ಕಂಪನಿಗಳು ಏಕಾಏಕಿ ಬೆಲೆ ಹೆಚ್ಚಿಸಿವೆ. ನಾವು ಪ್ರತಿ ಲೀಟರ್ 89.52 ರೂ.ಗೆ ಮಾರಾಟ ಮಾಡಿದರೆ, ಖಾಸಗಿಯವರು 99ರಿಂದ 105 ರೂ.ವರೆಗೆ ಮಾರಾಟ ಮಾಡುತ್ತಿದ್ದಾರೆ. ಈ ವ್ಯತ್ಯಾಸ ಗ್ರಾಹಕರು, ಆಟೋ ಚಾಲಕರ ಮೇಲೆ ಬೀಳುತ್ತಿದೆ. ಈ ಎಲ್ಲಾ ಸಮಸ್ಯೆ ಪರಿಹರಿಸಲು ಸಭೆ ನಡೆಸಲಾಗುತ್ತಿದೆ ಎಂದರು.

ಹಿಂದುಳಿದವರಿಗೆ ಸವಲತ್ತುಗಳನ್ನು ನೀಡದೇ ವಂಚಿಸಿದ ಕಾಂಗ್ರೆಸ್ ಸರ್ಕಾರ

ಬಿಜೆಪಿ ಮುಖಂಡ ರಘು ಕೌಟಿಲ್ಯ ವಾಗ್ದಾಳಿ



ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ ಮತಯಾಚಿಸಿದರು.

ಮೈಸೂರು,ಏ.6–ಅತೀ ಹಿಂದುಳಿದ ಸಮುದಾಯಗಳು ಸರ್ಕಾರದಿಂದ ಸಿಗಬೇಕಾದ ಸವಲತ್ತು ಮತ್ತು ಸೌಲಭ್ಯಗಳಿಂದ ವಂಚಿತವಾಗಿವೆ ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್. ರಘು ಕೌಟಿಲ್ಯ ದೂರಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡು, ವಾರ್ಡ್ ನಂ.6 ಮತ್ತು 8ರಲ್ಲಿ ಪಾದಯಾತ್ರೆ ನಡೆಸಿದ ಸಂದರ್ಭದಲ್ಲಿ ವಿವಿಧ ಹಿಂದುಳಿದ ಸಮುದಾಯಗಳನ್ನು ಉದ್ದೇಶಿಸಿ ಮಾತನಾಡಿದರು.

ದಾವಣಗೆರೆಯಲ್ಲಿ ಪ್ರವರ್ಗ 2 ಮತ್ತು 1ರ ಅಡಿಯಲ್ಲಿ ಬರುವ ಸಮುದಾಯಗಳು ಗಣನೀಯ ಪ್ರಮಾಣದಲ್ಲಿದ್ದು ಈ ಸಮಾಜಗಳಿಗೆ ಸೇರಿದ ಕೆಲವು ಸಮುದಾಯಗಳಿಗೆ ಶಾಸಕರ ನಿಧಿಯಿಂದ ಬೆರೆಳೆಣಿಕೆಯ ಲಕ್ಷಗಳ ಅನುದಾನ ಬಿಡುಗಡೆ ಮಾಡಿರುವುದು ಹೊರತುಪಡಿಸಿದಂತೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳನ್ನು ಒದಗಿಸಿಕೊಡುವ ಪ್ರಯತ್ನ ಈವರೆಗೂ ನಡೆದಿಲ್ಲ. ಈ ಸಮುದಾಯಗಳಿಗೆ ಸೇರಿದ ನಿಗಮಗಳಿಂದಲೂ ಸಮರ್ಪಕವಾಗಿ ಯೋಜನೆಗಳ ಅನುಷ್ಠಾನ ಆಗಿಲ್ಲ. ನಾವು ಭೇಟಿ ಮಾಡಿದ ಸಂದರ್ಭದಲ್ಲಿ ಈ ವಿಚಾರ ಬೆಳಕಿಗೆ ಬಂದಿದ್ದು, ಕಸುಬು ಆಧಾರಿತ ಸಮುದಾಯಗಳನ್ನು ಉತ್ತೇಜಿಸಲು ಆರ್ಥಿಕ ಚೈತನ್ಯವಾಗಲೀ ಹಿಂದುಳಿದ ಸಮುದಾಯಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ವಸತಿ ನಿಲಯಗಳ ಅವಕಾಶ ಹಾಗೂ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ಸೇರಿದಂತೆ ನಿರುದ್ಯೋಗಿ ಯುವಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲದ ನೆರವು ಸೇರಿದಂತೆ ಯಾವ ಪ್ರಯೋಜನವೂ ಲಭಿಸಿಲ್ಲ.


ಇದರ ಜತೆಗೆ ಈ ಸಮುದಾಯಗಳಲ್ಲಿ ಸೂರಿಲ್ಲದೇ ದಶಕಗಳಿಂದ ಕಷ್ಟ ಅನುಭವಿಸುತ್ತಿರುವ ಕುಟುಂಬಗಳಿಗೆ ಸ್ವಂತ ನಿವೇಶನ ಹಾಗೂ ಸೂರು ಒದಗಿಸುವ ಯೋಜನೆಗಳನ್ನು ಅಗತ್ಯಕ್ಕೆ ತಕ್ಕಂತೆ ಒದಗಿಸುವ ಯಾವ ಪ್ರಯತ್ನವೂ ನಡೆದಿಲ್ಲದಿರುವುದು ದುರ್ದೈವದ ಸಂಗತಿ. ರಾಜಕೀಯವಾಗಿ ಸಾಮಾಜಿಕವಾಗಿ ಈ ಸಮಾಜಗಳು ಜಾಗೃತಗೊಳ್ಳದಂತೆ ಕಾಂಗ್ರೆಸ್ ಪಕ್ಷ ಹಾಗೂ ಈ ಕ್ಷೇತ್ರವನ್ನು ಪ್ರತಿನಿಧಿಸಿದ ಒಂದೇ ಕುಟುಂಬ ತಮ್ಮ ಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದೆ. ಈ ಉಪ ಚುನಾವಣೆಯಲ್ಲಿ ಜಾಗೃತಗೊಂಡಿರುವ ಈ ಸಮುದಾಯಗಳು ಗಟ್ಟಿಯಾಗಿ ನಿಂತು ಈ ಬಾರಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರನ್ನು ಅತ್ಯಂತ ಹೆಚ್ಚಿನ ಓಟುಗಳಿಂದ ಗೆಲ್ಲಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರ ಪ್ರಜಾಪ್ರಭುತ್ವ ಗೆಲ್ಲಲಿದ್ದು, ಸಾಮಾಜಿಕ ನ್ಯಾಯ ಪ್ರತಿನಿಧಿಸುವ ಬಿಜೆಪಿ ಅಭ್ಯರ್ಥಿ 2028ರ ವಿಧಾನ ಸಭಾ ಚುನಾವಣೆಗೆ ಮುನ್ನುಡಿ ಬರೆಯಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಶಿವಕುಮಾರ್, ಅಶ್ವಿನಿ ಶಂಕರ್, ಮಹೇಂದ್ರ ಮೈನಾ ಲೋಕೇಶ್, ಗಿರೀಶ್ ಮಡಿವಾಳ, ರವಿಶಂಕರ್, ರಾಜಶೇಖರ್, ಗುಡ್ಡೇಶ್, ಮೊದಲಾದವರು ಉಪಸ್ಥಿತರಿದ್ದರು.

ಕಾಂಗ್ರೆಸ್ ಮುಖಂಡ ಲೋಕೇಶ್‌ಕುಮಾರ್‌ಗೆ ಹುಟ್ಟುಹಬ್ಬದ ಶುಭಾಶಯ...



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಲೋಕೇಶ್‌ಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿ.ಎಂ.ಸಿದ್ದರಾಮಯ್ಯಗೌಡ, ತಾಲೂಕು ಪಂಚಾಯಿತಿ ಸದಸ್ಯರಾದ ಹೆಬ್ಬಾಳೇಗೌಡ, ಗಡ್ಡ ಬಸಪ್ಪ, ದನಗಳ್ಳೀ ಬಸವರಾಜು, ಕೆ.ಪಿ.ಮಾದೇವ್, ರೇವಣ್ಣ, ಮರಿಗೌಡ, ಜವರೇಗೌಡ, ಬಸವರಾಜು, ರವೀಶ್, ಮಾದೇವ್, ಯುವ ಮುಖಂಡ ಕಡಕೋಳ ಭರತ್, ಮುಖಂಡರಾದ ಕಡಕೋಳ ಶಿವಲಿಂಗ, ಲೋಕೇಶ್, ರವಿ ಇನ್ನಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ...



ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಸಿ.ನರೇಂದ್ರ ಹುಟ್ಟುಹಬ್ಬವನ್ನು ಬೆಂಗಳೂರಲ್ಲಿ ಅವರ ಅಭಿಮಾನಿಗಳು ಆಚರಿಸಿ, ಶುಭಾಶಯ ಕೋರಿದರು. ಈ ವೇಳೆ ಮಾಜಿ ಸಚಿವರು, ಹಾಲಿ ಶಾಸಕ ನರೇಂದ್ರಸ್ವಾಮಿ ಅವರ ಸಹೋದರ ಪರಶಿವಮೂರ್ತಿ, ಕೆಪಿಸಿಸಿ ಸಂಯೋಜಕ ವಿಜಯ್ ಕುಮಾರ್ ಬಂಡಿಪಾಳ್ಯ, ಐಎನ್‌ಯುಟಿಸಿ ರಾಜ್ಯ ಯುವ ಘಟಕದ ಅಧ್ಯಕ್ಷ ನಾಗರಾಜು, ರಾಜ್ಯ ಕಾರಾಗೃಹ ನಿರ್ದೇಶಕ ಪವನ್ ಸಿದ್ದರಾಮು, ರಾಜ್ಯ ಯುವ ಉಪಾಧ್ಯಕ್ಷ ಪುಟ್ಟರಾಜ ಯಾದವ್, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಟ್ಟಿಹುಂಡಿ ಸುನಿಲ್, ಯುವ ಮುಖಂಡ ನಿರಂಜನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬ್ರಹ್ಮಾಕುಮಾರಿ ಸೇವಾ ಕೇಂದ್ರದಲ್ಲಿ ಬೇಸಿಗೆ ಶಿಬಿರ



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸೇವಾ ಕೇಂದ್ರದಲ್ಲಿ ಮೂರು ದಿನಗಳ ಬೇಸಿಗೆ ಶಿಬಿರಕ್ಕೆ ಸಿ.ಎ.ಶ್ರೀನಿವಾಸಮೂರ್ತಿ ಚಾಲನೆ ನೀಡಿದರು.

ಮೈಸೂರು, ಏ.6–ಮೈಸೂರಿನ ಜಯಲಕ್ಷ್ಮಿಪುರಂನ ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸೇವಾ ಕೇಂದ್ರದಲ್ಲಿ ಮೂರು ದಿನಗಳ ಬೇಸಿಗೆ ಶಿಬಿರಕ್ಕೆ ಸಿ.ಎ.ಶ್ರೀನಿವಾಸ್ ಮೂರ್ತಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಮಕ್ಕಳಿಗೆ ಗುರುಕುಲ ಶಿಕ್ಷಣ ಪದ್ಧತಿ ಅವಶ್ಯಕ. ಇಂದಿನ ಶಿಕ್ಷಣವು ಮಕ್ಕಳಿಗೆ ನಾಲ್ಕು ಗೋಡೆಯ ಮಧ್ಯೆ ಕೂಡಿ ಹಾಕಿ ಮಾಘ ಸ್ನಾನ ಮಾಡಿಸಿದಂತೆ ಆಗುತ್ತಿದೆ ಎಂದು ವಿಷಾದಿಸಿದರು. ಬೇಸಿಗೆ ಶಿಬಿರದಲ್ಲಿ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಕರಗತ ಮಾಡಿಕೊಳ್ಳುವಂತೆ ಕರೆ ನೀಡಿದರು.

ರಾಜಯೋಗಿನಿ ಬ್ರಹ್ಮಾಕುಮಾರಿ ರಶ್ಮೀಜೀ ಮಾತನಾಡಿ, ಮನಸ್ಸಿನ ಏಕಾಗ್ರತೆಗಾಗಿ ಧ್ಯಾನ ಬಹಳ ಅವಶ್ಯಕ ಎಂದರು. ಅದಕ್ಕಾಗಿ ಸಕಾರಾತ್ಮಕ ಚಿಂತನೆಗಳ ಅಭ್ಯಾಸವನ್ನು ತಮ್ಮ ಜೀವನದ ಅಂಗವನ್ನಾಗಿ ಮಾಡಿಕೊಳ್ಳಬೇಕೆಂದರು. ಓಂ ಶಾಂತಿ ನ್ಯೂ ಸರ್ವಿಸ್‌ನ ಬಿಕೆ ಆರಾಧ್ಯ ಮಾತನಾಡಿ, ಇಂದಿನ ಮಕ್ಕಳೇ ನಾಳಿನ ಪ್ರಭುಗಳು. ಅದಕ್ಕಾಗಿ ನಾಯಕತ್ವ ಗುಣವನ್ನು ಬೆಳೆಸಿಕೊಳ್ಳಬೇಕೆಂದರು. ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಕೇಶಿಯ, ರೂಪ, ಭಾರತಿ, ಮಂಜುಳ, ಚಂದ್ರಕಲಾ, ಪ್ರಜ್ವಲ್, ಧನುಷ್ ಹಾಜರಿದ್ದರು.

ಆಹಾರ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬಿ

ಕರ್ನಾಟಕ ವಿಜ್ಞಾನ–ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ. ರಾಜಸಾಬ್ ವಿಶ್ವಾಸ



ರಾಷ್ಟ್ರೀಯ ವಿಚಾರ ಸಂಕಿರಣವನ್ನು ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎ.ಹೆಚ್ ರಾಜಸಾಬ್ ಉದ್ಘಾಟಿಸಿದರು.

ಮೈಸೂರು, ಏ.6– ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿತ್ತು. ಅವುಗಳಲ್ಲಿ ಮೂಲ ಆಹಾರ ಉತ್ಪಾದನೆ ಮತ್ತು ಅವುಗಳ ಆಮದು ವಿಚಾರವು ಒಂದಾಗಿತ್ತು. ಇಂದು ಭಾರತ ಮೂಲ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದೆ ಎಂದು ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷ ಪ್ರೊ. ಎ.ಹೆಚ್.ರಾಜಸಾಬ್ ಹೇಳಿದರು.

ಮೈಸೂರು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ವತಿಯಿಂದ ನಡೆದ ಸಸ್ಟೇನಬಲ್ ಪ್ಯಾರಡೈಮ್ಸ್: ಇನ್ನೋವೇಟಿವ್ ಸೊಲ್ಯೂಷನ್ಸ್ ಫಾರ್ ಮಾಡರ್ನ್ ಬೊಟಾನಿಕಲ್ ಚಾಲೆಂಜಸ್–2026 ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಕೆ.ಎನ್.ಅಮೃತೇಶ್ ಮಾತನಾಡಿ, ಬೆಳೆಗಳ ರೋಗ ನಿರ್ಮೂಲನೆಗೆ ಸೂಕ್ಷ್ಮಾಣುಗಳನ್ನು ಬಳಸುವ ಪ್ರವೃತ್ತಿ ಹೆಚ್ಚುತ್ತಿದೆ. ಬೆಳೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಸಂಶೋಧನೆಯನ್ನು ವೇಗಗೊಳಿಸುವುದು ಅತ್ಯವಶ್ಯಕ ಆಧುನಿಕ ಕೃಷಿ ಸೂಕ್ಷ್ಮಾಣು ಆಧಾರಿತ ಪರಿಹಾರ ಗಳತ್ತ ಸಾಗುತ್ತಿದ್ದು, ಭೂಮಿಯ ಸಂಪನ್ಮೂಲಗಳು ನಮ್ಮ ಅಗತ್ಯಗಳನ್ನು ಪೂರೈಸುತ್ತವೆ ಹೊರತು ದುರಾಸೆಗಳನ್ನಲ್ಲ ಎಂದರು.

ಅಧ್ಯಕ್ಷತೆಯನ್ನು ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ ಸಾಂಬಶಿವಯ್ಯ ವಹಿಸಿ ಮಾತನಾಡಿದರು.

ಕಾರ್ಯಕ್ರಮದ ಮೊದಲ ಅವಧಿಯನ್ನು ಭಾರತೀಯ ಸಸ್ಯ ಸಮೀಕ್ಷೆಯ ಮಾಜಿ ನಿರ್ದೇಶಕ ಡಾ.ಎಂ.ಸಂಜಪ್ಪ ನಡೆಸಿದರು. ಭಾರತದ ಸಸ್ಯ ವೈವಿಧ್ಯತೆ: ಒಂದು ಅವಲೋಕ ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಎರಡನೇ ಅವಧಿಯಲ್ಲಿ ಎಥ್ನೊಬಾಟನಿ ಮತ್ತು ಹೊಸ ಔಷಧೀಯ ಸಸ್ಯಗಳ ಹುಡುಕಾಟ–ಪರಂಪರೆಯ ಜ್ಞಾನ ಸಂರಕ್ಷಣೆಯ ಮಹತ್ವ ಕುರಿತು ಡಾ.ರಾಘವೇಂದ್ರರಾವ್ ಎಥ್ನೋಬಾಟನಿಯ ಮಹತ್ವ ಮತ್ತು ಅದರ ಅಧ್ಯಯನದ ವಿಧಾನಗಳನ್ನು ವಿವರಿಸಿದರು.

ರೈತರ ಉತ್ಪನ್ನಕ್ಕೆ ಉತ್ತಮ ಬೆಲೆ; ಸ್ವಯಂ ಉದ್ಯೋಗ ಪ್ರೋತ್ಸಾಹಕ್ಕೆ ಕೇಂದ್ರ ಯೋಜನೆಗಳ ಸಮರ್ಪಕ ಜಾರಿಗೆ ಸೂಚನೆ



ವಿವಿಧ ಬ್ಯಾಂಕ್ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್‌ರೆಡ್ಡಿ ತಮ್ಮ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದರು.

ಮೈಸೂರು,ಏ.6(ಎಂಕೆ)–ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮ ಬೆಲೆ ಹಾಗೂ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದೊಂದಿಗೆ ಜಾರಿಗೆ ತಂದಿರುವ ಪಿಎಂಎಫ್‌ಎಂಇ(ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮ ಬದ್ಧಗೊಳಿಸುವಿಕೆ) ಮತ್ತು ಪಿಎಂಇಜಿಪಿ (ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ) ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಸೋಮವಾರ ವಿವಿಧ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಡವರು ಹಾಗೂ ಆರ್ಥಿಕವಾಗಿ ಹಿಂದುಳಿದವರ ಆರ್ಥಿಕ ಸ್ಥಿತಿ–ಗತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಸರ್ಕಾರ, ವಿವಿಧ ಇಲಾಖೆಗಳ ಮೂಲಕ ಸಬ್ಸಿಡಿ ಸಾಲ–ಸೌಲಭ್ಯ ಯೋಜನೆಗಳನ್ನು ರೂಪಿಸಿದೆ. ಆದ್ದರಿಂದ ಸಬ್ಸಿಡಿ ಸಾಲಕ್ಕೆ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ ಆದ್ಯತೆ ಮೇರೆಗೆ ವಿಲೇವಾರಿ ಮಾಡುವಂತೆ ತಿಳಿಸಿದರು.

ಪಿಎಂಇಜಿಪಿ ಯೋಜನೆಯಡಿ 660 ಅರ್ಜಿಗಳು ಸಲ್ಲಿಕೆಯಾಗಿದ್ದು, ಅವುಗಳಲ್ಲಿ 92 ಅರ್ಜಿಗಳಿಗೆ ಮಾತ್ರವೇ ಸಾಲ ಮಂಜೂರಾಗಿದೆ 376 ಅರ್ಜಿಗಳು ಬ್ಯಾಂಕ್‌ಗಳ ಲಾಗಿನ್‌ನಲ್ಲೇ ಉಳಿದಿದ್ದು, 192 ಅರ್ಜಿಗಳು ತಿರಸ್ಕೃತವಾಗಿವೆ. ಹಾಗಾಗಿ ತಿರಸ್ಕೃತ ಅರ್ಜಿದಾರರನ್ನು ಸಂಪರ್ಕಿಸಿ, ಸೂಕ್ತ ದಾಖಲೆಗಳನ್ನು ಪಡೆದು ಪುನಃ ಪರಿಗಣಿಸಬೇಕು. ಹಾಗೆಯೇ ಬ್ಯಾಂಕ್ ಲಾಗಿನ್‌ನಲ್ಲೇ ಉಳಿದಿರುವ ಅರ್ಜಿಗಳ ವಿಲೇವಾರಿ ಮಾಡಿ ಮುಂದಿನ ಸಭೆಯಲ್ಲಿ ವರದಿ ನೀಡುವಂತೆ ಸೂಚಿಸಿದರು.

ಸಿಬಿಲ್ ಸ್ಕೋರ್ ಪರಿಗಣಿಸದಿರಿ: ಪಿಎಂಎಫ್‌ಎಂಇ ಯೋಜನೆಯಡಿ ಸಲ್ಲಿಕೆಯಾದ ಅರ್ಜಿಗಳಲ್ಲಿ ವಿವಿಧ ಬ್ಯಾಂಕ್‌ಗಳಿಂದ 248 ತಿರಸ್ಕೃತವಾಗಿವೆ. ಈ ಯೋಜನೆಯಡಿ 3 ಲಕ್ಷ ರೂ. ಒಳಗಿನ ಸಾಲಕ್ಕಾಗಿ ಸಲ್ಲಿಕೆಯಾದ ಅರ್ಜಿಗಳನ್ನು ಸಿಬಿಲ್ ಸ್ಕೋರ್ ಇಲ್ಲವೆಂಬ ಕಾರಣಕ್ಕೆ ತಿರಸ್ಕರಿಸಬಾರದು. ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕರು ಈಗಾಗಲೇ ತಿರಸ್ಕೃತಗೊಂಡಿರುವ ಅರ್ಜಿಗಳ ಅರ್ಜಿದಾರರು ಹಾಗೂ ಬ್ಯಾಂಕರ್‌ಗಳ ಸಹಯೋಗದೊಂದಿಗೆ ಸಭೆ ನಡೆಸಿ ಅರ್ಜಿದಾರರಿಗೆ ಮಾಹಿತಿ ನೀಡಿ ಅರ್ಜಿಯೊಂದಿಗೆ ದಾಖಲೆಗಳು ಬಿಟ್ಟು ಹೋಗಿದ್ದಲ್ಲಿ ಸರಿಪಡಿಸಿ ಅರ್ಜಿಯನ್ನು ಪುನಃ ಸಲ್ಲಿಸಿ ಶೇ.100ರಷ್ಟು ಸಾಧನೆ ಮಾಡಿ ಎಂದು ಹೇಳಿದರು.

ಸಭೆಯಲ್ಲಿ ಜಿಪಂ ಸಿಇಓ ಯುಕೇಶ್ ಕುಮಾರ್, ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಲೀಡ್ ಬ್ಯಾಂಕ್ ಮ್ಯಾನೇಜರ್ ಕೃಷ್ಣಮೂರ್ತಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ರವಿ, ಕೈಗಾರಿಕೆ ಇಲಾಖೆ ಉಪ ನಿರ್ದೇಶಕ ಸೈಯದ್ ನಸೀರ್ ಅಹಮದ್ ಮತ್ತಿತರರಿದ್ದರು.

ಮೈಸೂರು ಮಿತ್ರ

ಮಂಗಳವಾರ 7 ಏಪ್ರಿಲ್ 2026

ರೈತರ ಕೃಷಿಗೆ ಕೊರತೆಯಾಗದಂತೆ ನೀರು ಪೂರೈಸಿ

ಗೃಹಬಳಕೆ ಅನಿಲ, ಪೆಟ್ರೋಲ್ ಡೀಸೆಲ್ ಪೂರೈಕೆಯಲ್ಲಿ ಯಾವುದೇ ಕೊರತೆ ಇಲ್ಲ, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ: ಹೆಚ್ಡಿಕೆ

ಮಂಡ್ಯ,ಏ.6– ಜಿಲ್ಲೆಯಲ್ಲಿ ಗೃಹ ಬಳಕೆಗೆ ನಿತ್ಯ 10,800 ಸಿಲಿಂಡರ್ ಅಗತ್ಯವಿದ್ದು, ಬೇಡಿಕೆಗೆ ತಕ್ಕಂತೆ ಅನಿಲ ದಾಸ್ತಾನು ಲಭ್ಯವಿದೆ. ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹಾಗೂ ಮಂಡ್ಯ ಸಂಸದ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 15 ಲಕ್ಷಕ್ಕೂ ಹೆಚ್ಚು ಲೀಟರ್ ಡೀಸೆಲ್ ಮತ್ತು 12 ಲಕ್ಷಕ್ಕೂ ಹೆಚ್ಚಿನ ಪೆಟ್ರೋಲ್ ಲಭ್ಯವಿದೆ. ಸಾರ್ವಜನಿಕರು ಆತಂಕಕ್ಕೊಳಗಾಗಿ ಕ್ಯಾನ್‌ಗಳ ಮೂಲಕ ಪೆಟ್ರೋಲ್ ಡೀಸೆಲ್ ಸಾಗಿಸುವುದರಿಂದ ಅಪಾಯದ ಸಂಭವ ಹೆಚ್ಚು. ಸಾರ್ವಜನಿಕರ ಹಿತದೃಷ್ಟಿಯಿಂದ ಈಗಾಗಲೇ ಜಿಲ್ಲೆಯ ಎಲ್ಲಾ ಪೆಟ್ರೋಲ್ ಬಂಕ್‌ಗಳಿಗೂ ಕ್ಯಾನ್‌ಗಳಿಗೆ ಪೆಟ್ರೋಲ್ ಡೀಸೆಲ್ ತುಂಬಿಸದಂತೆ ಸೂಚನೆ ನೀಡಲಾಗಿದೆ ಎಂದರು.

ಇನ್ನೂ ವಾಣಿಜ್ಯ ಬಳಕೆಯ ಅನಿಲ ಪೂರೈಕೆಯಲ್ಲಿ ದಾಸ್ತಾನು ಕಡಿಮೆ ಇದ್ದು ಶಾಲೆ, ವಸತಿ ಶಾಲೆ, ಆಸ್ಪತ್ರೆಗಳಿಗೆ ಪ್ರಾಮುಖ್ಯತೆ ಆಧಾರದ ಮೇಲೆ ಅನಿಲ ಪೂರೈಕೆ ಮಾಡಲಾಗುತ್ತಿದೆ. ಜಿಲ್ಲೆಯ ರೈತರು ಬೆಳೆದಿರುವ ಬೆಳೆಗಳಿಗೆ ಅಗತ್ಯ ನೀರಿನ ಪೂರೈಕೆ ಮಾಡಿ. ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿಗೆ ಜಿಲ್ಲೆಯ 38,517 ಜನರು ಅರ್ಜಿ ಸಲ್ಲಿಸಿದ್ದು ವೈದ್ಯಕೀಯ ಮಂಡಳಿಯಿಂದ 29,264 ಜನರಿಗೆ ಯು.ಡಿ.ಐ.ಡಿ ಕಾರ್ಡ್ ವಿತರಣೆ ಮಾಡಲಾಗಿದೆ. ತಿರಸ್ಕರಿಸಿದ ಅರ್ಜಿಗಳನ್ನು ಪುನಃ ಕೂಲಂಕಷವಾಗಿ ಪರಿಶೀಲಿಸಿ ಅರ್ಹರಿಗೆ ಯು.ಡಿ.ಐ.ಡಿ ಕಾರ್ಡ್ ವಿತರಣೆ ಮಾಡಿ ಎಂದು ಹೇಳಿದರು.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 17 ಲಕ್ಷದ 20 ಸಾವಿರಕ್ಕೂ ಹೆಚ್ಚು ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ. ಜಿಲ್ಲೆಯ 347 ರೈತ ಉದ್ದಿಮೆದಾರರಿಗೆ ಪಿ.ಎಂ.ಎಫ್.ಎಂ.ಇ ಯೋಜನೆಯಡಿ ಒಟ್ಟು ರೂ 87.65 ಕೋಟಿ ಸಾಲ ನೀಡಲಾಗಿದ್ದು. ರೂ.29.33 ಕೋಟಿ ಸಹಾಯಧನವನ್ನು ವಿತರಿಸಲಾಗಿದೆ ಎಂದು ಹೇಳಿದರು.

ಇ ಶ್ರಮ್ ಯೋಜನೆಯಡಿ ಜಿಲ್ಲೆಯಲ್ಲಿ 5,59,543 ನೋಂದಣಿಯಾಗಿರುತ್ತಾರೆ, ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಶೇಕಡಾ 155.33 ರಷ್ಟು ಪ್ರಗತಿ ಸಾಧಿಸಲಾಗಿದೆ.ಸರ್ಕಾರದ ಯೋಜನೆಗಳನ್ನು ಕುರಿತು ಗ್ರಾಮ ಮತ್ತು ಹೋಬಳಿ ಮಟ್ಟದ ಪ್ರಗತಿ ಪರಿಶೀಲನೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಗ್ರಾಮ ಹೋಬಳಿಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು.



ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಸಂಸದ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಕೇವಲ ಕಚೇರಿಯಲ್ಲಿ ಕುಳಿತು ಕೆಲಸ ಮಾಡಬೇಡಿ. ವಾರದಲ್ಲಿ ಒಂದು ದಿನವಾದರೂ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಆಗ ಮಾತ್ರ ಗ್ರೌಂಡ್ ರಿಯಾಲಿಟಿ ಕುರಿತು ತಿಳಿಯುತ್ತದೆ ಎಂದರು.

ಆರ್ಥಿಕವಾಗಿ ಹಿಂದುಳಿದ ಸಾರ್ವಜನಿಕರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನೇಕ ಯೋಜನೆಗಳನ್ನು ರೂಪಿಸಿದೆ ಆದರೆ ಅದರ ಪ್ರಗತಿಯಲ್ಲಿ ನಾವು ಹಿಂದುಳಿದಿದ್ದೇವೆ. ಸರ್ಕಾರದ ಕಾರ್ಯಕ್ರಮವನ್ನು ಉದ್ದಿಮೆಯಾಗಿ ಪರಿವರ್ತಿಸಿ ಜಿಲ್ಲೆಯ ನಿರುದ್ಯೋಗ ಮಟ್ಟ ಕಡಿಮೆ ಮಾಡಿ. ಸರ್ಕಾರದ ಯೋಜನೆಗಳ ಸಾರ್ವಜನಿಕರಿಗೆ ತಲುಪಬೇಕು. ಜಿಲ್ಲೆಯಲ್ಲಿ ಕೈಗಾರಿಕೆ ತರಲು ಅಪಾರ ಶ್ರಮ ವಹಿಸುತ್ತಿದ್ದೇನೆ ಅಧಿಕಾರಿಗಳು ಇದಕ್ಕೆ ಪೂರಕವಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ. ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ವಹಿಸಿ. ಮಟ್ಕ ಮತ್ತು ಕ್ರಿಕೆಟ್ ಜೂಜುಕೋರರ ವಿರುದ್ಧ ಕ್ರಮ ವಹಿಸಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ. ಕುಮಾರ ಮಾತನಾಡಿದರು. ಸಭೆಯಲ್ಲಿ ಶಾಸಕರಾದ ರವಿಕುಮಾರ್, ಹೆಚ್.ಟಿ.ಮಂಜು, ದಿಶಾ ಸಮಿತಿ ಸದಸ್ಯ ಸಿ.ಎಸ್.ಪುಟ್ಟರಾಜು ಇದ್ದರು.

ಅನ್ನದಾನಿ ವಿರುದ್ಧ ಕುಮಾರಸ್ವಾಮಿಗೆ ದೂರು

ಮಂಡ್ಯ: ಮಳವಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಡಾ.ಕೆ.ಅನ್ನದಾನಿ ವಿರುದ್ಧ ಅಕ್ರಮ ಸಂಬಂಧದ ಆರೋಪ ಕೇಳಿ ಬಂದಿದ್ದು, ಈ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬರು ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ದೂರು ಸಲ್ಲಿಸಿದ್ದಾರೆ. ಸೋಮವಾರ ದಿಶಾ ಸಭೆ ಹಿನ್ನೆಲೆಯಲ್ಲಿ ಮಂಡ್ಯ ನಗರಕ್ಕೆ ಆಗಮಿಸಿದ್ದ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಮಳವಳ್ಳಿ ತಾಲ್ಲೂಕಿನ ಪ್ರಸನ್ನಕುಮಾರ್ ಎಂಬ ವ್ಯಕ್ತಿ ಅನ್ನದಾನಿ ಅವರು ತಮ್ಮ ಪತ್ನಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು, ನನಗೆ ನ್ಯಾಯ ಒದಗಿಸುವಂತೆ ಹೆಚ್ಡಿಕೆ ಕಾಲಿಗೆ ಬಿದ್ದು ಗೋಳಾಡಿದ್ದಾರೆ. ದಿಶಾ ಸಭೆ ಮುಗಿದ ಬಳಿಕ ನಿನ್ನೊಂದಿಗೆ ಮಾತನಾಡುವುದಾಗಿ ಹೇಳಿದ ಹೆಚ್ಡಿಕೆ ನಂತರ ವ್ಯಕ್ತಿಯ ಅಹವಾಲು ವಿಚಾರಿಸಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಸನ್ನಕುಮಾರ್, ತಮ್ಮ ಪತ್ನಿಯೊಂದಿಗೆ ಅನ್ನದಾನಿ ಅಕ್ರಮ ಸಂಬಂಧವಿಟ್ಟುಕೊಂಡಿದ್ದು, ಈ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ಅವರೊಂದಿಗೆ ಮಾಜಿ ಶಾಸಕರು ಗಂಟೆ ಗಟ್ಟಲೇ ದೂರವಾಣಿ ಮೂಲಕ ಮಾತನಾಡಿದ್ದಾರೆ ಎಂದರು.

ಯುವಕರ ನಡುವೆ ಗ್ಯಾಂಗ್‌ವಾರ್: ರೌಡಿಶೀಟರ್ ಕೊಲೆ, ಮತ್ತಿಬ್ಬರು ಗಂಭೀರ





ಗಾಯಾಳುಗಳ ವಿಚಾರಿಸುತ್ತಿರುವ ಎಸ್‌ಪಿ ಶೋಭಾರಾಣಿ. ಕೊಲೆಯಾದ ಯಶವಂತ್‌ನನ್ನು ಬಲಚಿತ್ರದಲ್ಲಿ ಕಾಣಬಹುದು.

ಮದ್ದೂರು,ಏ.6– ಸಿಗರೇಟ್ ವಿಷಯಕ್ಕೆ ಎರಡು ಯುವಕರ ಗುಂಪಿನ ನಡುವೆ ನಡೆದ ಮಾರಾಮಾರಿಯಲ್ಲಿ ರೌಡಿ ಶೀಟರ್ ಹಿನ್ನೆಲೆಯುಳ್ಳ ಯುವಕನೋರ್ವ ಕೊಲೆಯಾಗಿದ್ದು, ಇಬ್ಬರು ಯುವಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಘಟನೆಯಲ್ಲಿ ನಗರದ ಸೋಮೇಗೌಡರ ಬೀದಿಯ ನಿವಾಸಿ ಯಶವಂತ್ ಅಲಿಯಾಸ್ ಕಜ್ಜಿ(21) ಕೊಲೆಯಾದ ಯುವಕನಾಗಿದ್ದು, ಗೊರವನಹಳ್ಳಿಯ ಯುವಕರಾದ ದರ್ಶನ್ ಹಾಗೂ ಸಚಿನ್ ಎಂಬುವರು ತೀವ್ರವಾಗಿ ಗಾಯಗೊಂಡು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಘಟನೆ ವಿವರ: ಕೊಲೆಯಾದ ಯುವಕ ಯಶವಂತ್ ಹಾಗೂ ಗಂಭೀರವಾಗಿ ಗಾಯಗೊಂಡ ದರ್ಶನ್ ಮತ್ತು ಸಚಿನ್ ಎಂಬುವರ ಮಧ್ಯೆ, ಭಾನುವಾರ ಸಂಜೆಯೇ ಸಿಗರೇಟ್ ನೀಡಲಿಲ್ಲ ಎಂಬ ವಿಷಯಕ್ಕೆ ಮೊದಲು ಜಗಳವಾಗಿತ್ತು ಎನ್ನಲಾಗಿದ್ದು, ಆ ಬಳಿಕ ರಾತ್ರಿ ಕೊಲೆಯಾದ ಹಾಗೂ ಗಾಯಗೊಂಡ ಯುವಕರು ಹಾಗೂ ಅವರುಗಳ ಕಡೆಯ ಒಂದಷ್ಟು ಯುವಕರು ನಗರದ ಶ್ರೀ ಹೊಳೆ ಆಂಜನೇಯಸ್ವಾಮಿ ದೇವಸ್ಥಾನದ ರಸ್ತೆಯ ಆರಂಭದಲ್ಲಿರುವ ಸಾಮಿಲ್ ಒಂದರ ಬಳಿ ಜಮಾಯಿಸಿ ಸಂಜೆ ನಡೆದಿದ್ದ ಸಿಗರೇಟ್ ವಿಷಯದ ಜಗಳವನ್ನು ಮತ್ತೆ ಮಾತನಾಡುತ್ತಾ ಮಾತಿಗೆ ಮಾತು ಬೆಳೆದು ಎರಡು ಗುಂಪುಗಳ ನಡುವೆ ಜಗಳ ಆರಂಭವಾಗಿದೆ.

ಬಳಿಕ ಸಾಮಿಲ್ ಬಳಿಯಿದ್ದ ಮರದ ರಿಫೀಸ್ ಪಟ್ಟಿಗಳಿಂದ ಯುವಕರು ಹೊಡೆದಾಡಿಕೊಂಡ ಹಿನ್ನೆಲೆಯಲ್ಲಿ ಯಶವಂತ್ ಎಂಬ ರೌಡಿಶೀಟರ್ ಹಿನ್ನೆಲೆವುಳ್ಳ ಯುವಕ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಗಂಭೀರವಾಗಿ ಗಾಯಗೊಂಡ ದರ್ಶನ್ ಹಾಗೂ ಸಚಿನ್ ಎಂಬುವರನ್ನು ಹೆಚ್ಚಿನ ಚಿಕಿತ್ಸೆಗೆ ಪೊಲೀಸರು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ಎರಡು ಯುವಕರ ಗುಂಪಿನ ಘರ್ಷಣೆಯಲ್ಲಿ ಯಾರು ಯಾರ ಮೇಲೆ ಹಲ್ಲೆ ಮಾಡಿದ್ದಾರೆ ಎಂಬುವುದು ತನಿಖೆಯಿಂದ ತಿಳಿದು ಬರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮದ್ದೂರಿನಲ್ಲಿ ನಡೆದ ಗ್ಯಾಂಗ್ ವಾರ್ ಘಟನೆಯಿಂದ ಜನತೆ ಅತಂಕಕ್ಕೆ ಒಳಗಾಗಿದ್ದು, ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ, ಡಿವೈಎಸ್ಪಿ ಯಶವಂತ್ ಕುಮಾರ್, ಸಿಪಿಐಗಳಾದ ನವೀನ್ ಕುಮಾರ್, ನಾರಾಯಣಿ ಅವರು ಆಗಮಿಸಿ ಸ್ಥಳ ಮಹಜರು ಮಾಡಿದ್ದಾರೆ.

ಕೊಲೆಯಾದ ಯುವಕನ ತಾಯಿ ಪ್ರೇಮಾ ಅವರು ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಮದ್ದೂರು ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಚಿಕ್ಕರಸಿನಕೆರೆಯ ಹೆಬ್ಬಾಳದಲ್ಲಿ ಈಜಲು ಹೋಗಿ ಯುವಕ ಸಾವು



ಭಾರತೀನಗರ, ಏ.6– ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆಯ ಹೆಬ್ಬಾಳ ನಾಲೆಯಲ್ಲಿ ಈಜಲು ಹೋಗಿ ಯುವಕನೊಬ್ಬ ನಾಲೆಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಜರುಗಿದೆ.

ಮಳವಳ್ಳಿ ತಾಲೂಕಿನ ಬಾಣಸಮುದ್ರ ಗ್ರಾಮದ ಚಂದ್ರಶೇಖರ್(25) ಎಂಬ ಯುವಕನೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ದುರ್ದೈವಿ.

ಚಿಕ್ಕರಸಿನಕೆರೆ ಶ್ರೀ ಕಾಲಭೈರವೇಶ್ವರ ದೇವಾಲಯದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಕೊಂಡೋತ್ಸವ ಇದ್ದ ಕಾರಣ ಬಾಣಸಮುದ್ರ ಗ್ರಾಮದ ದೇವರ ಕುಲಬಾಂಧವರು ಪೂಜೆಯಲ್ಲಿ ಪಾಲ್ಗೊಂಡು ಅನ್ನಸಂತರ್ಪಣೆಯನ್ನು ಆಯೋಜಿಸಿದ್ದರು.

ಹಾಗಾಗಿ ಈತನು ಸಹ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದು ನಂತರ ಹೆಬ್ಬಾಳದಲ್ಲಿ ಈಜಲು ಹೋಗಿದ್ದಾನೆ. ಈತ ನೀರಿಗೆ ಮುಳುಗಿದಾಗ ನೀರಿನಲ್ಲಿದ್ದ ಬದಿಗೆ ಕಚ್ಚಿಕೊಂಡಿದ್ದು ಮೇಲೆ ಬರಲು ಸಾಧ್ಯವಾಗದೆ ಸಾವನ್ನಪ್ಪಿದ್ದಾನೆ.

ಈತನ ಮೃತ ದೇಹವನ್ನು ಪತ್ತೆ ಹಚ್ಚಲು ಗ್ರಾಮಸ್ಥರು ಹರಸಹಾಸ ಮಾಡಿದರು ಆದರೂ ಸಹ ಮೃತದೇಹ ಸಿಗದ ಕಾರಣ ಕೆ.ಎಂ.ದೊಡ್ಡಿ ಪೊಲೀಸರಿಗೆ ಹಾಗೂ ಅಗ್ನಿಶಾಮಕ ಸಿಬ್ಬಂದಿಗಳಿಗೆ ಸುದ್ದಿ ಮುಟ್ಟಿಸಿದ ಮೇರೆಗೆ ಸ್ಥಳಕ್ಕೆ ಧಾವಿಸಿ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಮೃತ ದೇಹವನ್ನು ಮೇಲೆತ್ತಿದರು. ನಂತರ ಶವವನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಲಾಗಿದ್ದು ಶವ ಪರೀಕ್ಷೆಯ ನಂತರ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆ.ಆರ್.ಪೇಟೆ ಬಳಿ ಆಸ್ತಿಗಾಗಿ ಗುಂಪು ಘರ್ಷಣೆ

ಮಾರಕಾಸ್ತ್ರಗಳಿಂದ ಹಲ್ಲೆ: ಮೂವರಿಗೆ ಗಾಯ

ಕೆ.ಆರ್.ಪೇಟೆ,ಏ.6– ಆಸ್ತಿ ವಿಚಾರಕ್ಕೆ ದಾಂಯಾದಿಗಳ ನಡುವೆ ಗುಂಪು ಘರ್ಷಣೆಯಲ್ಲಿ ಮಾರಣಾಂತಿಕ ಹಲ್ಲೆ ನಡೆಸಿದ್ದು ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಬೂಕನಕೆರೆ ಹೋಬಳಿಯ ನಾಟನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ನಾಟನಹಳ್ಳಿ ಗ್ರಾಮದ ಸೋಮೇಗೌಡ, ವಸಂತ್, ನಿಶಾಂತ್ ಎಂಬುವವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಮೈಸೂರಿನ ಕೆ.ಆರ್.ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದೇ ನಾಟನಹಳ್ಳಿ ಗ್ರಾಮದ ಉಗ್ರೇಗೌಡ, ವೇಣು, ನೂತನ್, ಪ್ರಕಾಶ್, ಸೋಮೇಶ್ ಹಲ್ಲೆ ನಡೆಸಿದ ಆರೋಪಿಗಳಾಗಿದ್ದಾರೆ.

ಪಿತ್ರಾರ್ಜಿತ ಜಮೀನಿಗೆ ಹೋಗಲು ರಸ್ತೆ ಬಿಡುವ ವಿಚಾರವಾಗಿ ಈ ಎರಡು ಗುಂಪುಗಳ ನಡುವೆ ಪರಸ್ಪರ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗಿದಾಗ ಉಗ್ರೇಗೌಡ, ವೇಣು, ನೂತನ್, ಪ್ರಕಾಶ್,



ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು.

ಸೋಮೇಶ್ ಎಂಬುವವರ ಗುಂಪು ಸೋಮೇಗೌಡ, ವಸಂತ್, ನಿಶಾಂತ್ ಎಂಬುವವರ ಮೇಲೆ ಮಚ್ಚು, ದೊಣ್ಣೆ, ರಾಡುಗಳಿಂದ ಹಲ್ಲೆ ನಡೆಸಿದೆ.

ಇದರಿಂದ ಗಂಭೀರವಾಗಿ ಗಾಯಗೊಂಡಿರುವ ಸೋಮೇಗೌಡ, ವಸಂತ್, ನಿಶಾಂತ್ ಅವರಿಗೆ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆಯ ಮೇರೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ರಕ್ತಸ್ರಾವ ಉಂಟಾಗಿ ತಲೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯಗಳಾಗಿರುವ ಕಾರಣ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ.

ಘಟನೆ ಕುರಿತು ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಲ್ಲೆ ನಡೆಸಿ ತಲೆ ಮರೆಸಿಕೊಂಡಿರುವ ಆರೋಪಿಗಳಾದ ನಾಟನಹಳ್ಳಿ ಗ್ರಾಮದ ಉಗ್ರೇಗೌಡ, ವೇಣು, ನೂತನ್, ಪ್ರಕಾಶ್, ಸೋಮೇಶ್ ಬಂಧನಕ್ಕೆ ಬಲೆ ಬೀಸಿದ್ದಾರೆ.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರ ಸಹೋದರ ನಿಧನ



ಭಾರತೀನಗರ, ಏ.6– ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರ ಸಹೋದರ ಹಾಗೂ ಶ್ರೀಚಾಮುಂಡೇಶ್ವರಿ ಟ್ರೇಡರ್ಸ್ ಮಾಲೀಕ ಡಿ.ಸಿ. ಮಹೇಂದ್ರ(70) ಅವರು ಹೃದಯಾಘಾತದಿಂದ ಭಾನುವಾರ ಬೆಳಿಗ್ಗೆ ನಿಧನ ಹೊಂದಿದ್ದಾರೆ. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ದೊಡ್ಡರಸಿನಕೆರೆ ಗ್ರಾಮದ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು.

ಸಂತಾಪ: ಮನ್ಮುಲ್ ನಿರ್ದೇಶಕರಾದ ಎಸ್.ಪಿ.ಸ್ವಾಮಿ, ರಾಮಚಂದ್ರು, ಸಂತೋಷ್ ತಮ್ಮಣ್ಣ, ಜಿ.ಪಂ ಮಾಜಿ ಅಧ್ಯಕ್ಷ ಭುಜುವಳ್ಳಿ ರಾಮಚಂದ್ರು ಸೇರಿದಂತೆ ಹಲವು ಗಣ್ಯರು ಭಾಗವಹಿಸಿ ಅಂತಿಮ ದರ್ಶನ ಪಡೆದರು.

ಒಂದನೇ ಪುಟದಿಂದ

ಇಡೀ ಇರಾನ್ ನಾಶ ಮಾಡ್ತೇವೆ

ಮೊಜ್ತಾಬಾ ಖಮೇನಿ ವಾಷಿಂಗ್ಟನ್ ಮತ್ತು ಅದರ ಮಿತ್ರರಾಷ್ಟ್ರಗಳ ವಿರುದ್ಧ ವಾಗ್ದಾಳಿ ನಡೆಸಿದರು. ಬೆದರಿಕೆಗಳು, ದಾಳಿಗಳು ಮತ್ತು ಐಆರ್‌ಜಿಸಿ ಕಮಾಂಡರ್‌ಗಳನ್ನು ಗುರಿಯಾಗಿಸಿ ಕೊಂದಾಕ್ಷಣ ಇರಾನಿನ ಸಶಸ್ತ್ರ ಪಡೆಗಳು ದುರ್ಬಲಗೊಳಿಸುವುದಿಲ್ಲ ಎಂದು ಎಚ್ಚರಿಸಿದರು.

ಇರಾನ್‌ನ ರೆವಲ್ಯೂಷನರಿ ಗಾರ್ಡ್‌ನ ಗುಪ್ತಚರ ಮುಖ್ಯಸ್ಥ ಮಜೀದ್ ಖಾಡೆಮಿ ಮತ್ತು ಇರಾನ್‌ನ ಕ್ರಾಂತಿಕಾರಿ ಗಾರ್ಡ್‌ಗಳ ಕುದ್ಸ್ ಫೋರ್ಸ್ ಮುಖ್ಯಸ್ಥ ಅಸ್ಗರ್ ಬೇಕರಿಯನ್ನು ಕೊಂದಿರುವುದಾಗಿ ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿಕೆ ಬೆನ್ನಲ್ಲೇ ಮೊಜ್ತಬಾ ಖಮೇನಿ ಈ ಹೇಳಿಕೆ ನೀಡಿದ್ದಾರೆ. ಟೆಲಿಗ್ರಾಮ್‌ನಲ್ಲಿನ ಹೇಳಿಕೆಯಲ್ಲಿ, ಮೊಜ್ತಬಾ ಖಮೇನಿ ಇರಾನ್ ಅನ್ನು ಶಿಲಾಯುಗಕ್ಕೆ ಕೊಂಡೊಯ್ಯುವ ಅಮೆರಿಕದ ಬೆದರಿಕೆಗಳನ್ನು ಸಹ ಟೀಕಿಸಿದರು. ಅಂತಹ ಮಾತುಗಳು ಅಜಾಗರೂಕ ವಿಧಾನವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ಯುಎಸ್ ಮತ್ತು ಇಸ್ರೇಲ್ ನಾಗರಿಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಸಿದರು. ಹೆಚ್ಚುತ್ತಿರುವ ಒತ್ತಡದ ಹೊರತಾಗಿಯೂ, ಇರಾನ್‌ನ ಮಿಲಿಟರಿ ಬಲವು ಹಾಗೆಯೇ ಉಳಿಯುತ್ತದೆ ಎಂದು ಒತ್ತಾಯಿಸಿದರು.

ಸೇತುವೆಗಳು, ವಿದ್ಯುತ್ ಸ್ಥಾವರಗಳು ಮತ್ತು ಶಾಲೆಗಳು ಸೇರಿದಂತೆ ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸುತ್ತಿವೆ ಎಂದು ಅವರು ಆರೋಪಿಸಿದರು. ಅಂತಹ ಕ್ರಮಗಳನ್ನು ಅಮೆರಿಕ ಸರ್ಕಾರ ಮತ್ತು ಕೊಲೆಗಾರ ಇಸ್ರೇಲ್ ಆಡಳಿತವು ಮಾಡಿದ ಮಾನವೀಯತೆಯ ವಿರುದ್ಧದ ಅಪರಾಧ ಕೃತ್ಯಗಳು ಎಂದು ಕರೆದರು. ಅಂತರರಾಷ್ಟ್ರೀಯ ಸಂಸ್ಥೆಗಳು ಮೌನ ಮತ್ತು ಅಸಡ್ಡೆ ವಹಿಸುತ್ತಿರುವಾಗ ಮತ್ತು ಬಹುಶಃ ಆಕ್ರಮಣದಲ್ಲಿ ಭಾಗಿಯಾಗಿರುವಾಗ ಅವರು ಪ್ರತಿದಿನ ಯುದ್ಧ, ಬೆದರಿಕೆಗಳು ಮತ್ತು ವಿನಾಶದ ಡ್ರಮ್ ಅನ್ನು ಹೆಚ್ಚು ಹೆಚ್ಚು ಬಾರಿಸುತ್ತಿರುವುದು ವಿಷಾದಕರ ಎಂದು ಅವರು ಹೇಳಿದರು.

ಭೀಕರ ದಾಳಿ: ಇರಾನ್‌ನ ರಾಜಧಾನಿ ಟೆಹರಾನ್ ನೈರುತ್ಯ ಭಾಗದ ಎಸ್ಲಾಮ್ ಶಹರ್ ಬಳಿಯ ವಸತಿ ಕಟ್ಟಡವೊಂದರ ಮೇಲೆ ನಡೆದ ವಾಯುದಾಳಿಯಲ್ಲಿ 13 ಜನ ಸಾವನ್ನಪ್ಪಿರುವುದಾಗಿ ಇರಾನ್ ಮಾಧ್ಯಮಗಳು ತಿಳಿಸಿವೆ. ಈವರೆಗೂ ಇಸ್ರೇಲ್ ಅಥವಾ ಅಮೆರಿಕ ಈ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ಆದರೆ ಇರಾನ್ ಹಾರ್ಮುಜ್ ಜಲಸಂಧಿಯನ್ನು ತೆರವುಗೊಳಿಸಬೇಕು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ಬೆನ್ನಲ್ಲೇ ಈ ದಾಳಿ ನಡೆದಿರುವುದು ಗಂಭೀರತೆ ಪಡೆದಿದೆ ಇತ್ತೀಚಿನ ವಾಯುದಾಳಿಗಳು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ಹೊಂದಿಕೊಂಡಂತಿರುವ ನೈಸರ್ಗಿಕ ಅನಿಲ ವಿತರಣಾ ಸ್ಥಳ ಸೇರಿದಂತೆ ಹಲವಾರು ಕಟ್ಟಡಗಳನ್ನು ಹಾನಿಗೊಳಿಸಿವೆ ಎಂದು ಇರಾನ್ ಮಾಧ್ಯಮ ವರದಿ ಮಾಡಿದೆ ಯುದ್ಧದ ಕಾರಣದಿಂದಾಗಿ ಶಾಲೆಗಳು ಆನ್‌ಲೈನ್ ತರಗತಿಗಳು ನಡೆಯುತ್ತಿರುವುದರಿಂದ ಪ್ರಾಣಾಪಾಯ ಸಂಭವಿಸಿಲ್ಲ. ಈ ಮಧ್ಯೆ ದಕ್ಷಿಣ ಟೆಹರಾನ್‌ನ ಕೋಮ್ ವಸತಿ ಪ್ರದೇಶ ದಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ಕನಿಷ್ಠ ಐದು ಜನ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

9 ಪೊಲೀಸರಿಗೆ ಮರಣದಂಡನೆ!

ಎಂದು ಆರೋಪಿಸಿ, ಗುದದ್ವಾರದಿಂದ ರಕ್ತಸ್ರಾವ ಸಂಭವಿಸಿದ್ದೂ ಸೇರಿದಂತೆ ಗಂಭೀರ ದೈಹಿಕ ಹಿಂಸೆಯ ಗುರುತುಗಳನ್ನು ಉಲ್ಲೇಖಿಸಿದ್ದರು. ಮದ್ರಾಸ್ ಹೈಕೋರ್ಟ್ ನಿರ್ದೇಶನದ ಮೇರೆಗೆ, ರಾಜ್ಯದ ಸಿಬಿ–ಸಿಐಡಿಯಿಂದ ತನಿಖೆಯನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ವಶಕ್ಕೆ ಪಡೆದು, ಈ ಪ್ರಕರಣದಲ್ಲಿ 10 ಮಂದಿ ಪೊಲೀಸರನ್ನು ಬಂಧಿಸಿತು. ಬಂಧಿತರಲ್ಲಿ ಒಬ್ಬ ಇನ್ಸ್‌ಪೆಕ್ಟರ್, ಇಬ್ಬರು ಉಪನಿರೀಕ್ಷಕರು ಹಾಗೂ ಹಲವಾರು ಕಾನ್ಸ್‌ಟೇಬಲ್‌ಗಳು ಸೇರಿದ್ದರು. ಅದರಲ್ಲಿಒಬ್ಬರು ವಿಚಾರಣೆ ವೇಳೆ ಅಸುನೀಗಿದ್ದರು.

ನಂತರ ಸಿಬಿಐ ಆರೋಪಿಗಳ ವಿರುದ್ಧ ಕೊಲೆ ಆರೋಪಗಳನ್ನು ದಾಖಲಿಸಿತು. ತನಿಖೆಯ ವೇಳೆ ಮಹಿಳಾ ಕಾನ್ಸ್‌ಟೇಬಲ್ ಒಬ್ಬರ ಹೇಳಿಕೆ ಪ್ರಮುಖ ತಿರುವು ತಂದುಕೊಟ್ಟಿತು. ಅವರು, ತಂದೆ–ಮಗನ ಮೇಲೆ ಇಡೀ ರಾತ್ರಿ ಹಲ್ಲೆ ನಡೆದಿದ್ದು, ಠಾಣೆಯ ಮೇಜುಗಳು ಮತ್ತು ಲಾಠಿಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದವು ಎಂದು ತನಿಖಾಧಿಕಾರಿಗಳಿಗೆ ಹೇಳಿದ ರೆಂದು ವರದಿಯಾಗಿದೆ. ಸತಂಕುಳಂ ಪೊಲೀಸ್ ಠಾಣೆಯ ಸಿಸಿಟಿವಿ ದೃಶ್ಯಗಳು ಪ್ರತಿದಿನ ಸ್ವಯಂ ಚಾಲಿತವಾಗಿ ಅಳಿಸಿ ಹೋಗುವಂತೆ ವ್ಯವಸ್ಥೆ ಮಾಡಲಾಗಿದ್ದರಿಂದ, ಅವುಗಳನ್ನು ಸಂರಕ್ಷಿಸದೇ ಇದ್ದದ್ದು ತನಿಖೆಗೆ ದೊಡ್ಡ ಸವಾಲಾಯಿತು. ಐದು ವರ್ಷಕ್ಕಿಂತ ಹೆಚ್ಚು ಕಾಲ ನಡೆದ ವಿಚಾರಣೆಯಲ್ಲಿ 100 ಕ್ಕೂ ಹೆಚ್ಚು ಸಾಕ್ಷಿದಾರರನ್ನು ಪರೀಕ್ಷಿಸಲಾಯಿತು.

ಇಂದು ದ್ವಿತೀಯ ಪಿಯು ಫಲಿತಾಂಶ ಇಲ್ಲ

ರಾಜ್ಯದ ಕೆಲವು ಕ್ಷೇತ್ರಗಳಲ್ಲಿ ವಿಧಾನಸಭಾ ಉಪ ಚುನಾವಣೆಗಳು ನಡೆಯುತ್ತಿರುವುದರಿಂದ, ಫಲಿತಾಂಶ ಪ್ರಕಟಿಸಲು ಅನುಮತಿ ಕೋರಿ ಮಂಡಳಿಯು ಚುನಾವಣಾ ಆಯೋಗಕ್ಕೆ ಪತ್ರ ಬರೆದಿತ್ತು. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಫಲಿತಾಂಶ ಘೋಷಣೆಯು ನೀತಿ ಸಂಹಿತೆಯ ಅಡಿಯಲ್ಲಿ ಬರುವ ಸಾಧ್ಯತೆ ಇರುವುದರಿಂದ ಅಥವಾ ಚುನಾವಣಾ ಕರ್ತವ್ಯದಲ್ಲಿ ಅಧಿಕಾರಿಗಳು ನಿರತರಾಗಿರುವುದರಿಂದ ಫಲಿತಾಂಶವನ್ನು ತಾತ್ಕಾಲಿಕವಾಗಿ ಮುಂದೂಡಲು ನಿರ್ಧರಿಸಲಾಗಿದೆ

ಹೊಸ ದಿನಾಂಕ ಘೋಷಣೆ ಸಾಧ್ಯತೆ: ನಾಳೆ ಸಂಜೆ ಪರೀಕ್ಷೆ ಮಂಡಳಿಯು ಅಧಿಕೃತ ಸಭೆ ನಡೆಸಿ, ಫಲಿತಾಂಶ ಪ್ರಕಟಿಸುವ ಹೊಸ ದಿನಾಂಕವನ್ನು ಘೋಷಿಸುವ ಸಾಧ್ಯತೆಯಿದೆ. ಮೂಲಗಳ ಪ್ರಕಾರ, ಒಂದೆರಡು ದಿನಗಳ ಅಂತರದಲ್ಲಿ ಫಲಿತಾಂಶ ಹೊರಬೀಳುವ ನಿರೀಕ್ಷೆಯಿದೆ

ಇನ್ನೆರಡು ವರ್ಷವೂ ಸಿದ್ದರಾಮಯ್ಯ ಸಿಎಂ ಆಗಿರ್ತಾರೆ...!

ಹಾಗಾಗಿ ನಾನು ಸೇರಿದಂತೆ ನಮ್ಮ ಪಕ್ಷದ ಎಲ್ಲರೂ ಸಿಎಂ ಸ್ಥಾನಕ್ಕೆ ಅರ್ಹರೇ ಆಗಿದ್ದೇವೆ. ಇದರಲ್ಲಿ ಒಬ್ಬರು, ಇಬ್ಬರ ಪ್ರಶ್ನೆ ಇಲ್ಲ ಎಂದರು.

ಉಪಚುನಾವಣೆ ಫಲಿತಾಂಶ ದಿಕ್ಸೂಚಿಯಲ್ಲ: ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಯ ಫಲಿತಾಂಶ ರಾಜ್ಯ ಸರ್ಕಾರಕ್ಕೆ ನೀಡುವ ಮಾರ್ಕ್ಸ್ ಕಾರ್ಡ್ ಅಲ್ಲ. ಅದು ರಾಜ್ಯ ಸರ್ಕಾರದ ಮೇಲೆ ಯಾವುದೇ ರೀತಿಯಲ್ಲೂ ಪರಿಣಾಮ ಬೀರುವುದಿಲ್ಲ. ಅಲ್ಲದೆ ರಾಜಕೀಯ ದಿಕ್ಸೂಚಿ ಕೂಡ ಅಲ್ಲ. ಉಪ ಚುನಾವಣೆಯ ಫಲಿತಾಂಶ ಯಾರ ಸ್ಥಾನವನ್ನು ಭದ್ರಗೊಳಿಸಲ್ಲ ಹಾಗೂ ಅಭದ್ರಗೊಳಿಸುವುದಿಲ್ಲ ಎಂದು ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದರು.

ಉಪ ಚುನಾವಣೆಯ ಫಲಿತಾಂಶ ಯಾವ ವಿಚಾರಕ್ಕೂ ಮಾನದಂಡವಲ್ಲ. ಇದು ಯಾವ ವಿಷಯದ ಮೇಲೂ ಪರಿಣಾಮ ಬೀರುವುದಿಲ್ಲ. ಈ ಬಗ್ಗೆ ಬಿಜೆಪಿಯವರ ಹೇಳಿಕೆಗಳಿಗೆ ಯಾವುದೇ ಬೆಲೆ ಇಲ್ಲ. ಮೂರು ವರ್ಷದ ನಮ್ಮ ಸರ್ಕಾರದ ಜನಪರ ಆಡಳಿತದಿಂದ ಎರಡು ಉಪ ಚುನಾವಣೆಯಲ್ಲೂ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ. ಗ್ಯಾರಂಟಿ ಯೋಜನೆಗಳನ್ನು ಮೀರಿಯೂ ಈ ಸರ್ಕಾರದ ಆಡಳಿತ ದಕ್ಷತೆಗೆ ಜನರು ಮತ ನೀಡುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಳ ಮೀಸಲಾತಿ ಬಗ್ಗೆ ಶೀಘ್ರ ತೀರ್ಮಾನ: ಒಳ ಮೀಸಲಾತಿ ಜಾರಿ ಸಂಬಂಧ ಸುಪ್ರೀಂಕೋರ್ಟ್ ಆದೇಶದಂತೆ ನಾಗಮೋಹನ್ ದಾಸ್ ಆಯೋಗ ರಚನೆ ಮಾಡಲಾಗಿತ್ತು. ಜಾತಿ ಆಧಾರಿತವಾಗಿ ಆಯೋಗ ಮೀಸಲಾತಿಯನ್ನು ಹಂಚಿಕೆ ಮಾಡಿದೆ. ಆದರೆ ಈ ಸಂಬಂಧ ಕೆಲವು ತಾಂತ್ರಿಕ ಸಮಸ್ಯೆ ಇರುವ ಕಾರಣ ಸಮಾಲೋಚನೆ ನಡೆಸಿ, ಜಾರಿ ಮಾಡುತ್ತೇವೆ ಎಂದು ಇದೇ ವೇಳೆ ತಿಳಿಸಿದರು.

ಅಧಿಕಾರಿಗಳ ಸಭೆ: ಸರ್ಕಾರಿ ಅತಿಥಿ ಗೃಹದಲ್ಲಿ ಇದೇ ವೇಳೆ ಸಚಿವ ಡಾ.ಪರಮೇಶ್ವರ್ ಅವರು ಜಿಲ್ಲಾಡಳಿತದ ಪ್ರಮುಖ ಅಧಿಕಾರಿಗಳ ಜೊತೆ ಅನೌಪಚಾರಿಕ ಸಭೆ ನಡೆಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್‌ಕುಮಾರ್, ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಸುಂದರ್ ರಾಜ್, ಡಾ.ಹರ್ಷ ಪ್ರಿಯಂವದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸಭೆಯಲ್ಲಿದ್ದರು.

ಕ್ಯಾಷ್ ಇಲ್ಲ; ಡಿಜಿಟಲ್ ಪಾವತಿ ಮಾತ್ರ

ಫಾಸ್ಟ್‌ಟ್ಯಾಗ್, ಯುಪಿಐ ಅಥವಾ ನಗದು ರೂಪದಲ್ಲಿ ಪಾವತಿ ಮಾಡಲು ಅವಕಾಶವಿತ್ತು. ಆದರೆ ಇದೀಗ ಎನ್‌ಎಚ್‌ಎಐ ಶುಲ್ಕ ಪಾವತಿಯಲ್ಲಿ ಹೊಸ ನಿಯಮವನ್ನು ಜಾರಿಗೊಳಿಸಿದೆ. ಇನ್ನು ಮುಂದೆ ಟೋಲ್‌ಗಳಲ್ಲಿ ಯುಪಿಐ ಪಾವತಿ ಮತ್ತು ಫಾಸ್ಟ್ ಟ್ಯಾಗ್ ಮಾತ್ರ ಬಳಕೆಯಲ್ಲಿ ಇರಲಿವೆ. ನಗದು ಪಾವತಿ ಅಥವಾ ಯುಪಿಐ ಮೂಲಕ ಹಣ ಪಾವತಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು. ಇದರಿಂದಾಗಿ ವಾಹನಗಳು ಸರದಿ ಸಾಲಿನಲ್ಲಿ ನಿಲ್ಲಬೇಕಿತ್ತು. ಆದರೆ ಸಂಪೂರ್ಣ ಡಿಜಿಟಲ್ ಪಾವತಿ ವ್ಯವಸ್ಥೆಯಿಂದಾಗಿ ಸವಾರರ ಸಮಯದ ಉಳಿತಾಯವಾಗಲಿದೆ.

ನಗದು ಪಾವತಿಸಿದಾಗ ಅವರಿಗೆ ಚಿಲ್ಲರೆ ಕೊಡುವ ಗೊಂದಲ ಇಲ್ಲ ಅಲ್ಲದೇ ಇಂಧನ ಉಳಿತಾಯಕ್ಕೂ ಅನುಕೂಲವಾಗಲಿದೆ. ಜತೆಗೆ ತಡೆ ರಹಿತ ಸಂಚಾರಕ್ಕೂ ಸಹಕಾರಿಯಾಗಲಿದೆ. ಟೋಲ್ ಶುಲ್ಕ ಪಾವತಿಯಲ್ಲಿ ಪಾರದರ್ಶಕ ವಹಿವಾಟನ್ನು ಜಾರಿಗೊಳಿಸುವುದು ಇದರ ಮುಖ್ಯ ಉದ್ದೇಶ ಎಂದು ಪ್ರಾಧಿಕಾರ ತಿಳಿಸಿದೆ.

ನಗದು ರಹಿತ ಸೇವೆಯನ್ನು ದೇಶದಾದ್ಯಂತ ಇರುವ ಹೆದ್ದಾರಿ ಹಾಗೂ ಎಕ್ಸ್‌ಪ್ರೆಸ್ ವೇ ಗಳಲ್ಲಿರುವ 1,550ಕ್ಕೂ ಹೆಚ್ಚು ಟೋಲ್ ಪ್ಲಾಜಾಗಳಲ್ಲಿ ಜಾರಿಗೊಳಿಸಲಾಗುತ್ತದೆ. ಪೂರ್ಣ ಡಿಜಿಟಲ್ ಪಾವತಿ ಮಾತ್ರ ಇರಲಿದ್ದು, ಒಂದು ವೇಳೆ ನಗದು ಶುಲ್ಕ ಪಾವತಿಸಿದರೆ, ನಿಗದಿತ ಶುಲ್ಕದ ಪಾವತಿಗಿಂತ ಹಲವು ಪಟ್ಟು ಹೆಚ್ಚು ಹಣವನ್ನು ದಂಡದ ರೂಪದಲ್ಲಿ ಪಾವತಿಸಬೇಕಾ ಗುತ್ತದೆ ಎಂದು ಪ್ರಾಧಿಕಾರ ತಿಳಿಸಿದೆ.

ಏ.8ರಂದು ಬಸ್ ಸ್ಥಗಿತ!



ಹಿಂಬಾಕಿ ಬದಲಿಗೆ 26 ತಿಂಗಳು ವೇತನ ಹಿಂಬಾಕಿ, 2024 ಜನವರಿ ಬದಲಿಗೆ 2025ರ ಏಪ್ರಿಲ್‌ನಿಂದ ಹೊಸ ವೇತನ ಒಪ್ಪಂದ ಮಾಡುವುದಾಗಿ ಈಗಾಗಲೇ ಆದೇಶ ಮಾಡಿದೆ. ಆದರೆ ಇದಕ್ಕೆ ಒಪ್ಪದ ಸಾರಿಗೆ ನೌಕರರ ಒಕ್ಕೂಟ ಇಂದು ಸುದ್ದಿಗೋಷ್ಠಿ ನಡೆಸಿ ಯಾವುದೇ ಕಾರಣಕ್ಕೂ ಸರ್ಕಾರದ ಆದೇಶವನ್ನು ನಾವು ಒಪ್ಪುವುದಿಲ್ಲ. ಏಪ್ರಿಲ್ 8ರಿಂದ ಚಿತ್ರದುರ್ಗದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ ಪಾದಯಾತ್ರೆ ಮಾಡುತ್ತೇವೆ ಎಂದು ಸಾರಿಗೆ ನೌಕರರ ಒಕ್ಕೂಟ ಅಧ್ಯಕ್ಷ ಚಂದ್ರಶೇಖರ್ ಹೇಳಿದ್ದಾರೆ.

ಇನ್ನು ಸಾರಿಗೆ ನೌಕರರ ಒಕ್ಕೂಟ 38 ತಿಂಗಳ ವೇತನ ಹಿಂಬಾಕಿ ಮತ್ತು 2024 ಜನವರಿಯಿಂದಲೇ ವೇತನ ಹೆಚ್ಚಳ ಮಾಡಬೇಕೆಂದು ಪಟ್ಟುಹಿಡಿದಿದ್ದಾರೆ. ಈಗಾಗಲೇ ರಾಜ್ಯ ಸರ್ಕಾರ 38 ತಿಂಗಳ ವೇತನ ಹಿಂಬಾಕಿಯಲ್ಲಿ 26 ತಿಂಗಳ ವೇತನ ಹಿಂಬಾಕಿ 1272 ಕೋಟಿ ರೂ ನೀಡುತ್ತಿದೆ. 2024 ಜನವರಿಯಿಂದ ಆಗಬೇಕಿದ್ದ ಹೊಸ ವೇತನ ಒಪ್ಪಂದವನ್ನು 2025 ಏಪ್ರಿಲ್‌ನಿಂದ ಮಾಡಲು ಮುಂದಾಗಿದೆ.

1970 ಕೋಟಿ ರೂ ಹಿಂಬಾಕಿ ಬಿಡುಗಡೆಗೆ ಪಟ್ಟು: ಸರ್ಕಾರದ ಈ ನಿರ್ಧಾರಕ್ಕೆ ಒಪ್ಪದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮದ ನೌಕರರು 38 ತಿಂಗಳ ವೇತನ ಹಿಂಬಾಕಿ 1970 ಕೋಟಿ ರೂ ಬಿಡುಗಡೆ ಮಾಡಲೇಬೇಕು ಮತ್ತು 2024 ಜನವರಿಯಿಂದಲೇ ಹೊಸ ವೇತನ ಒಪ್ಪಂದ ಮಾಡಬೇಕೆಂದು ಪಟ್ಟುಹಿಡಿದಿದ್ದಾರೆ. ಈ ನಿಟ್ಟಿನಲ್ಲಿ ಫ್ರೀಡಂ ಪಾರ್ಕ್‌ಗೆ ಬಂದು, ಅಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಂತರ ಮುಷ್ಕರಕ್ಕೆ ಹೋಗಬೇಕೆಂದು ಸಾರಿಗೆ ನೌಕರರ ಮುಖಂಡರು ಸಿದ್ಧತೆ ಮಾಡಿಕೊಂಡಿದ್ದಾರೆ. ಅಂದು ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ ಪ್ರಯಾಣಿಕರು ತಮ್ಮ ಪ್ರಯಾಣವನ್ನು ಮುಂದೂಡುವುದು ಉತ್ತಮ.

ಒಟ್ಟಿನಲ್ಲಿ ರಾಜ್ಯ ಸರ್ಕಾರ ನೀಡಬೇಕಿದ್ದ 38 ತಿಂಗಳ ಬದಲಿಗೆ 26 ತಿಂಗಳಿನ ವೇತನ ಮತ್ತು 2024 ಜನವರಿ ಬದಲಿಗೆ 25 ಏಪ್ರಿಲ್‌ನಿಂದ ಹೊಸ ವೇತನ ಪರಿಷ್ಕರಣೆ ಮಾಡುತ್ತೇವೆ ಅಂತಿದ್ದಾರೆ. ಆದರೆ ಇದಕ್ಕೆ ಸಾರಿಗೆ ನೌಕರರು ಒಪ್ಪದೆ ಮತ್ತೆ ಹೋರಾಟಕ್ಕೆ ಮುಂದಾಗಿದ್ದು, ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ ಎಂದು ಕಾದು ನೋಡಬೇಕಿದೆ.

ನೀಡಿದರಷ್ಟೇ ಪೊಲೀಸರು ಕ್ರಮ

ಪೊಲೀಸರು ದಾಳಿ ನಡೆಸಬಹುದೇ ಹೊರತು, ಸ್ವಯಂಪ್ರೇರಿತ ದಾಳಿ ಅಥವಾ ದೂರು ದಾಖಲಿಸಲಾಗದು ಎಂದು ಸ್ಪಷ್ಟಪಡಿಸಿದರು. ಯುದ್ಧದ ಹೆಸರಿನಲ್ಲಿ ಬಹಳಷ್ಟು ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಡಾ.ಪರಮೇಶ್ವರ್, ಬೆಲೆ ಏರಿಕೆ ಆಗದಂತೆ ಮಾರುಕಟ್ಟೆ ಮೇಲೆ ನಿಯಂತ್ರಣ ಹೇರಬೇಕಾದ ಹೊಣೆ ಕೇಂದ್ರ ಸರ್ಕಾರದ್ದಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚನೆಗಳನ್ನು ನೀಡಿದರೆ ಅದನ್ನು ಪಾಲಿಸಲಾಗುವುದು. ರಾಜ್ಯ ಸರ್ಕಾರಕ್ಕೆ ಕೆಲವು ಇತಿಮಿತಿಗಳಿವೆ. ಇದರಿಂದ ಮಾರುಕಟ್ಟೆ ಮೇಲೆ ನಿಯಂತ್ರಣ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಈ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕಿದೆ ಎಂದು ತಿಳಿಸಿದರು.

ಕುಟುಂಬ ರಾಜಕಾರಣ ಅನಿವಾರ್ಯ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಇಡೀ ಕುಟುಂಬ ರಾಜಕಾರಣದಲ್ಲಿದೆ; ಅವರು ನಮ್ಮ ಟೀಕಿಸುವುದು ಸರಿಯೇ!?

ಬೆಂಗಳೂರು, ಏ.6(ಕೆಎಂಶಿ)– ವಂಶ ಪಾರಂಪರ್ಯ ರಾಜಕಾರಣ ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮತದಾರ ತಿರಸ್ಕರಿಸಿದ ನಂತರವೂ ಸಾರ್ವಜನಿಕ ಬದುಕಿನಲ್ಲಿ ಮುಂದುವರೆಯುವುದು ಸರಿಯಲ್ಲ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನ ಬಯಸಿದ್ದಕ್ಕೆ ನಮ್ಮ ಪುತ್ರ ಯತೀಂದ್ರ ರಾಜಕೀಯ ಪ್ರವೇಶಿಸಿ, ಜನಪ್ರತಿನಿಧಿಯಾಗಿ ಸಾರ್ವಜನಿಕ ಸೇವೆ ಮಾಡುತ್ತಿದ್ದಾರೆ ಎಂದರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಇಬ್ಬರು ಮಕ್ಕಳು ಸೊಸೆಯಂದಿರು, ಮೂವರು ಮೊಮ್ಮಕ್ಕಳು, ಅಳಿಯ ರಾಜಕಾರಣದಲ್ಲಿದ್ದಾರೆ. ಅಂತಹವರು ನಮ್ಮ ಕುಟುಂಬವನ್ನು ಟೀಕಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ್ದಾರೆ.

ನಾವು ಕುಟುಂಬ ರಾಜಕಾರಣ ಮಾಡುತ್ತಿಲ್ಲ, ಜನರೇ ನಮ್ಮನ್ನು ಕರೆತಂದು ಚುನಾವಣೆಗೆ ನಿಲ್ಲಿಸುತ್ತಾರೆ ಎಂಬುದಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೊಂಡಿದ್ದಾರೆ. ಹಾಗಿದ್ದರೆ, ಚನ್ನಪಟ್ಟಣದ ಉಪಚುನಾವಣೆಯಲ್ಲಿ ಅವರ ಮಗ 23,000 ಮತಗಳ ಅಂತರದಿಂದ ಸೋತಿದ್ದು ಏಕೆ ಎಂದು ಪ್ರಶ್ನಿಸಿದ ಮುಖ್ಯಮಂತ್ರಿ, ಜನ ಬಯಸಿದಾಗ ಚುನಾವಣೆಯಲ್ಲಿ ಸ್ಪರ್ಧೆ ತಪ್ಪಲ್ಲ. ಆದರೆ, ತಿರಸ್ಕರಿಸಿದ ನಂತರವೂ ಇನ್ನೊಂದು ಕುಟುಂಬದ ಬಗ್ಗೆ ಮಾತನಾಡುವುದು ಸರಿಯೇ ಎಂದರು.

ದೇವೇಗೌಡ ಹಾಗೂ ಕುಮಾರಸ್ವಾಮಿ



ಸಿದ್ದರಾಮಯ್ಯ

ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಈಗ ಬಿಜೆಪಿ ಜೊತೆ ಕೈಜೋಡಿಸಿದ್ದಾರೆ. ಇದು ವರೆಗೂ ಅವರುಗಳು ಬಿಜೆಪಿ ಮತ್ತು ಆರ್‌ಎಸ್‌ಎಸ್ ಕುರಿತು ಏನೆಲ್ಲಾ ಮಾತನಾಡಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಲಿ.


ಕಟ್ಟಿದ ಗೂಡಿನಲ್ಲಿ ರಾಜಕಾರಣ ಮಾಡುತ್ತೇನೆ ಎಂಬ ಕುಮಾರಸ್ವಾಮಿ ಆರೋಪ ಅಲ್ಲಗಳೆದ ಸಿದ್ದರಾಮಯ್ಯ, ನಾನು ಜೆಡಿಎಸ್ ಅಧ್ಯಕ್ಷನಾಗಿದ್ದಾಗ 59 ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದಿದ್ದೆವು.

ಜೆಡಿಎಸ್‌ನಿಂದ ನಾನು ಹೊರಬಂದ ನಂತರ ಅಷ್ಟು ಸೀಟು ಗೆಲ್ಲಲೇ ಇಲ್ಲ, ಈಗ 19ಕ್ಕೆ ಇಳಿದಿದೆ ಎಂದು ಟೀಕಿಸಿದರು.

ದೇವೇಗೌಡ ಸೇರಿದಂತೆ ಬಿಜೆಪಿ ಸೇರ್ಪಡೆಗೊಂಡಿರುವ ಕೆಲವು ನಾಯಕರು ತಮ್ಮ ಸಾರ್ವಜನಿಕ ಬದುಕನ್ನು ಬಲಪಡಿಸಿಕೊಳ್ಳಲು ಕೋಮುವಾದಿಗಳ ಜೊತೆ ಕೈಜೋಡಿಸಿದ್ದಾರೆ. ಇವರು ಈ ಹಿಂದೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಆರ್‌ಎಸ್‌ಎಸ್ ನಾಯಕ ರನ್ನು ಯಾವ ರೀತಿ ಟೀಕಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳಲಿ ಎಂದರು.

2028ಕ್ಕೆ ರೈತಪರ ಸರ್ಕಾರ

ಬೆಂಗಳೂರು, ಏ.6(ಕೆಎಂಶಿ)– 2028ಕ್ಕೆ ರೈತಪರ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಭವಿಷ್ಯ ನುಡಿದಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ರಾಜ್ಯದ ಜನ ಬೇಸತ್ತಿದ್ದು, ಮುಂದೆ ಬಡವರ, ಪರಿಶಿಷ್ಟರ,



ಸಾಮಾಜಿಕ ನ್ಯಾಯಪರ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದರು. ಉಪಚುನಾವಣೆ ಪ್ರಚಾರ ವೇಳೆ ಬಿಜೆಪಿ ಅಭ್ಯರ್ಥಿ ಪರ ಮತಯಾಚಿಸಿ ಮಾತನಾಡಿದ ಅವರು, ಗಂಗಾಮತಸ್ಥರು ಶಿಕ್ಷಿತರಾಗಿ ತಮ್ಮ ಶಕ್ತಿ ತೋರಿಸಿದರೆ ರಾಜಕೀಯ ಪಕ್ಷಗಳು ನಿಮ್ಮ ಮನೆ ಬಾಗಿಲಿಗೆ ಬರುತ್ತವೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿ ದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ವಿರೋಧಿಯಾಗಿದ್ದು, ಮತ ನೀಡಿದವರಿಗೇ ಅನ್ಯಾಯ ಮಾಡುತ್ತಿದೆ ಎಂದರು. ಅಂಬಿಗರ ಚೌಡಯ್ಯನ ಕುಲಬಾಂಧವರನ್ನು ನೋಡಲು ಸಂತೋಷವಾಗುತ್ತದೆ. ಕಠಿಣ ಪರಿಶ್ರಮ, ಸಾಹಸಮಯ ಬದುಕು ನಡೆಸುವ ಈ ಸಮುದಾಯ ಮುಂದೆ ಬರಬೇಕು ಎಂದರು.

ಒಂದು ಕಾಲದಲ್ಲಿ ಭೂಮಿ ಇದ್ದವರು ಜಗತ್ತು ಆಳಿದರು. 21ನೇ ಶತಮಾನದಲ್ಲಿ ಜ್ಞಾನ ಇದ್ದವರು ಜಗತ್ತು ಆಳುತ್ತಾರೆ. ನಿಮ್ಮ ಕಠಿಣ ಪರಿಶ್ರಮದ ಜೊತೆಗೆ ಜ್ಞಾನ ಸಂಪಾದಿಸಿದರೆ ಜಗತ್ತನ್ನು ಆಳುತ್ತೀರಿ. ಶಿಕ್ಷಣವಂತರಾಗಿ ಜ್ಞಾನ ಪಡೆದುಕೊಂಡರೆ ನಿಮಗೂ ನೀಡುವ ಶಕ್ತಿ ಬರುತ್ತದೆ.

ಸಾವಿರಾರು ವರ್ಷಗಳಿಂದ ತುಳಿತಕ್ಕೆ ಒಳಪಟ್ಟಿದ್ದೀರಿ, ಅತ್ಯಂತ ಕಷ್ಟ, ಅವಮಾನ, ಅಪಮಾನ ಎದ್ದು ಕಾಣಿಸುತ್ತದೆ. ನೀವೆಲ್ಲಾ ಗಂಗಾತಾಯಿಯ ಮಕ್ಕಳು. ಬಿ.ಎಸ್.ಯಡಿಯೂರಪ್ಪ ನನ್ನನ್ನು ನೀರಾವರಿ ಸಚಿವನಾಗಿ ಮಾಡಿದಾಗ ಗಂಗಮ್ಮನ ಮಗನಿಗೆ ಗಂಗಮ್ಮನ ಮಕ್ಕಳ ಸೇವೆ ಮಾಡುವ ಭಾಗ್ಯ ದೊರೆಯಿತು. ಭೂಮಿ, ನೀರನ್ನು ನಂಬಿ ಕೊಂಡಿರುವ ಪರಿಶಿಷ್ಟ ಸಮುದಾಯದವರಿಗೆ ಹೃದಯಾಂತರಾಳದಿಂದ ಸೇವೆ ಮಾಡಿದರೆ ನ್ಯಾಯ ಕೊಡಿಸಲು ಸಾಧ್ಯ. ಗಂಗಾಮತಸ್ಥರಿಗೆ ಮೀಸಲಾತಿ ವರ್ಗೀಕರಣದಲ್ಲಿ ಅನ್ಯಾಯ ಆಗಿದೆ. ನ್ಯಾಯ ಕೊಡಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಕುಡಿಯುವ ನೀರು, ಒಳಚರಂಡಿ ಶುಲ್ಕ ಏರಿಕೆ ಖಂಡಿಸಿ ಪಾಲಿಕೆ ಮುಂದೆ ಭಾರತ ಕಮ್ಯುನಿಸ್ಟ್ ಪಕ್ಷ ಪ್ರತಿಭಟನೆ

ಮೈಸೂರು, ಏ.6(ಜಿಎ)–ಮೈಸೂರು ಮಹಾನಗರಪಾಲಿಕೆ ಕುಡಿಯುವ ನೀರು, ಒಳಚರಂಡಿ ಶುಲ್ಕ ಏರಿಕೆಯನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಪಾಲಿಕೆ ಮುಂಭಾಗ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಮಹಾ ಪಾಲಿಕೆ ಕುಡಿಯುವ ನೀರು, ಒಳಚರಂಡಿ ಶುಲ್ಕ ಏರಿಕೆಯನ್ನು ವಾಪಸ್ ಪಡೆಯ ಬೇಕೆಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ಪಾಲಿಕೆ ಮುಂಭಾಗ ಪ್ರತಿ ಭಟಿಸಲಾಯಿತು.

ಏ.1ರಿಂದ ಜಾರಿಗೆ ಬರುವಂತೆ ಕುಡಿಯುವ ನೀರು, ಒಳಚರಂಡಿ ಶುಲ್ಕ ಏರಿಕೆ ಮಾಡಿದ್ದು, ಪಾಲಿಕೆ ವ್ಯಾಪ್ತಿಯ ನಿವಾಸಿಗಳು ಅನವಶ್ಯಕ ಹೆಚ್ಚಳವನ್ನು ಎದುರಿಸಬೇಕಾಗಿದೆ. ಗೃಹಬಳಕೆಯ ನೀರಿನ ಶುಲ್ಕವನ್ನು ಬಳಕೆಯ ಮಟ್ಟ ಆಧರಿಸಿ ಸ್ಲ್ಯಾಬ್ ಪದ್ಧತಿ ವ್ಯವಸ್ಥೆ ಜಾರಿಗೆ ತರಲಾಗಿದೆ. ಬಳಕೆ ಆಧಾರಿತ ಬಿಲ್ಲಿಂಗ್ ಜತೆಗೆ ಕನಿಷ್ಠ ಅಥವಾ ಬಳಕೆಯಿಲ್ಲದ ಮನೆಗಳಿಗೂ ಪಾಲಿಕೆ ಕನಿಷ್ಠ ಮಾಸಿಕ ಶುಲ್ಕ ಕಡ್ಡಾಯಗೊಳಿಸಿದೆ. ಇದು ಸಮರ್ಥನೀಯವಲ್ಲ. ಪರಿಷ್ಕೃತ ನೀರಿನ ದರದ ಜತೆಗೆ ಒಳಚರಂಡಿ ಶುಲ್ಕವನ್ನೂ ನವೀಕರಿಸಿದೆ. ಪಾಲಿಕೆ ವ್ಯಾಪ್ತಿಯಲ್ಲಿ ನಿವಾಸಿಗಳು ಈಗಾಗಲೇ ಆಸ್ತಿ ತೆರಿಗೆಯನ್ನು ಹೆಚ್ಚಳ ಎದುರಿಸುತ್ತಿರುವ ಈ ಸಮಯದಲ್ಲಿ ನೀರು ಮತ್ತು ಒಳಚರಂಡಿ ಶುಲ್ಕಗಳ ಅವೈಜ್ಞಾನಿಕ ಪರಿಷ್ಕರಣೆ ಸರಿಯಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಈ ತೀರ್ಮಾನವನ್ನು ಮೈಸೂರಿನ ನಾಗರಿಕರು ಒಪ್ಪಲು ಸಾಧ್ಯವಿಲ್ಲ ಮತ್ತು ಸಿದ್ಧರಿಲ್ಲ. ಚುನಾಯಿತ ಪ್ರತಿನಿಧಿಗಳೇ ಇಲ್ಲದಿರುವ ಪಾಲಿಕೆ ಅಧಿಕಾರಿಗಳು ಚರ್ಚೆಗೆ ಆಸ್ಪದವೇ ಇಲ್ಲದೇ ನಗರ ನಿರ್ವಹಣೆಯ ಹೆಸರಿನಲ್ಲಿ ಜನರ ಮೇಲೆ ಶುಲ್ಕಭಾರ ಹೇರುವುದು ಖಂಡನಾರ್ಹ. ನಗರವಾಸಿಗಳ ಮೂಲ ಅವಶ್ಯಕತೆಗಳನ್ನು ಉಚಿತವಾಗಿ ಅಥವಾ ಆದಷ್ಟು ಕಡಿಮೆ ವೆಚ್ಚದಲ್ಲಿ ನೀಡುವುದು ಸ್ಥಳೀಯ ಸಂಸ್ಥೆಗಳ ಉದ್ದೇಶ ಮತ್ತು ಆಶಯವಾಗಿರಬೇಕು. ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ಶುಲ್ಕದ ಹೊರೆ ಹೊರಿಸಿ ಪ್ರಾಕೃತಿಕ ಸಂಪನ್ಮೂಲಗಳನ್ನು ಆರ್ಥಿಕ ಲಾಭಕ್ಕಾಗಿ ಲೂಟಿ ಹೊಡೆಯುವ ಇನ್ನೊಂದು ವರ್ಗವನ್ನು ಓಲೈಸುವ ಈ ಪ್ರವೃತ್ತಿ ಬದಲಾಗಬೇಕು. ಕೂಡಲೇ ನೀರು ಮತ್ತು ಒಳಚರಂಡಿ ಶುಲ್ಕ ಏರಿಕೆ ಕೈಬಿಟ್ಟು, ನಗರದ ಮೂಲ ಸಮಸ್ಯೆಗಳಾದ ರಸ್ತೆ, ದೀಪ, ನೈರ್ಮಲ್ಯಗಳ ಕಡೆಗೆ ಗಮನಹರಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಜಯರಾಂ, ಬಸವರಾಜ್, ವಿಜಯ್‌ಕುಮಾರ್, ಸ್ಥಳೀಯ ಸಮಿತಿ ಕಾರ್ಯದರ್ಶಿ ಸುಬ್ರಹ್ಮಣ್ಯ, ಸದಸ್ಯರಾದ ರಾಜೇಂದ್ರ, ಬಸವಯ್ಯ, ಅಣ್ಣಪ್ಪ, ಬಲರಾಂ, ಈಶ್ವರ್, ಬೀರೇಶ್ವರ್, ಪುಟ್ಟ ಮಲ್ಲಯ್ಯ, ಅಭಿ, ಶ್ರೀಧರ್, ಚನ್ನಪ್ಪ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲಾ ಪೊಲೀಸರಿಂದ 862 ಕೆಜಿ ಮಾದಕ ವಸ್ತು ನಾಶ



ಮಾದಕ ವಸ್ತುಗಳನ್ನು ಮೈಸೂರು ಜಿಲ್ಲಾ ಪೊಲೀಸರು ನಾಶಪಡಿಸಿದರು.

ಮೈಸೂರು, ಏ.6(ಜಿಎ)–ಅಕ್ರಮವಾಗಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ವಶ ಪಡಿಸಿಕೊಳ್ಳಲಾಗಿದ್ದ 862 ಕೆಜಿ ಮಾದಕ ವಸ್ತುಗಳನ್ನು ಮೈಸೂರು ಜಿಲ್ಲಾ ಪೊಲೀಸರು ನಾಶಪಡಿಸಿದ್ದಾರೆ. ಮಾದಕ ವಸ್ತುವನ್ನು ವಿಲೇವಾರಿ ಅಥವಾ ನಾಶಮಾಡುವ ಬಗ್ಗೆ ಘನ ನ್ಯಾಯಾಲಯದಿಂದ ಆದೇಶವಾಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾ ಎಸ್‌ಪಿ, ಮಾದಕ ವಸ್ತು ವಿಲೇವಾರಿ ಸಮಿತಿಯ ಅಧ್ಯಕ್ಷರೂ ಆದ ಮಲ್ಲಿಕಾರ್ಜುನ ಬಾಲದಂಡಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು–2 ಎಲ್.ನಾಗೇಶ್, ಡಿವೈಎಸ್‌ಪಿ ಟಿ.ಬಿ. ರಾಜಣ್ಣ ಎನ್‌ಡಿಪಿಎಸ್ ಆಕ್ಟ್ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಒಟ್ಟು 862 ಕೆ.ಜಿ 853 ಗ್ರಾಂ ತೂಕವಿರುವ ಮಾದಕ ವಸ್ತುಗಳನ್ನು ನಾಶಪಡಿಸಲಾಗಿದೆ.

ಮೈಸೂರು ಜಿಲ್ಲಾ ವ್ಯಾಪ್ತಿಯ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ವಿವಿಧ ಎನ್‌ಡಿಪಿಎಸ್ ಆಕ್ಟ್ ಪ್ರಕಣಗಳಲ್ಲಿ ವಶಪಡಿಸಿಕೊಂಡಿದ್ದ ಒಟ್ಟು 862 ಕೆ.ಜಿ 853 ಗ್ರಾಂ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದು, ಅವುಗಳನ್ನು ಸೋಮವಾರ ಬೆಂಗಳೂರಿನ ಹಾರೋಹಳ್ಳಿ ಇಂಡಸ್ಟ್ರಿಯಲ್ ಏರಿಯಾ, ಹಾರೋಹಳ್ಳಿ ತಾಲೂಕಿನ, ಪ್ಲಾಟ್ ನಂ.342/ಬಿ, 2ನೇ ಫೇಸ್, 2ನೇ ಸೆಕ್ಟರ್, ಕೆಐಡಿಬಿ, ಇಂಡಸ್ಟ್ರಿಯಲ್ ಏರಿಯಾ ಇ ನ್ಯಾನೋ ಇನ್ಸಿನೆಟೆಕ್ ಪ್ಲಾಂಟ್‌ನಲ್ಲಿ ಮಾದಕ ವಸ್ತುಗಳನ್ನು ನಾಶಪಡಿಸಲಾಗಿದೆ ಎಂದು ಎಸ್‌ಪಿ ತಿಳಿಸಿದ್ದಾರೆ.

ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್‌ಗೆ ಅಭಿನಂದನೆ...



ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆಗಾಗಿ 2025ರ ಸಾಲಿನ ಮುಖ್ಯಮಂತ್ರಿ ಪದಕ ಪುರಸ್ಕೃತರಾದ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್ ಅವರನ್ನು ಮೈಸೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ರಾಮಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯ ಎಂ.ಚಿಕ್ಕವೆಂಕಟು, ಆರ್.ಲೋಕೇಶ್, ಸಿ.ಡಿ.ಕುಮಾರ್, ಕೆ.ಯೋಗೇಶ್, ನಾಗರಾಜು, ಕೆ.ಗಿರೀಶ್, ಮಾದು ಸನ್ಮಾನಿಸಿದರು.

ವಿಶ್ವ ಆರೋಗ್ಯ ದಿನಾಚರಣೆ: ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಏ.6–ಮೈಸೂರು ಅರಿವು ಸಂಸ್ಥೆ, ಸುಯೋಗ್ ಆಸ್ಪತ್ರೆ ವತಿಯಿಂದ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಆರೋಗ್ಯಕ್ಕೆ ಜೊತೆಗೂಡಿ ವಿಜ್ಞಾನದೊಂದಿಗೆ ನಿಲ್ಲಿ ಜಾಗೃತಿ ಕಾರ್ಯಕ್ರಮ ಹಾಗೂ ವಾಯು ವಿಹಾರಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏ.7ರಂದು ಬೆಳಗ್ಗೆ 8 ಗಂಟೆಗೆ ಕುಕ್ಕರಹಳ್ಳಿ ಕೆರೆ (ರೈಲ್ವೆ ಗೇಟ್) ಬಳಿ ಹಮ್ಮಿಕೊಳ್ಳಲಾಗಿದೆ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸುಯೋಗ ಆಸ್ಪತ್ರೆ ವೈದ್ಯ ಡಾ.ಎಸ್.ಪಿ.ಯೋಗಣ್ಣ ಆಗಮಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಾಜಿ ಮೇಯರ್ ಸಂದೇಶಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಆಸ್ಪತ್ರೆ ಸಿಬ್ಬಂದಿ ವರ್ಗ ಆಗಮಿಸಲಿದ್ದಾರೆ.

ಶುಭಾಶಯ



ಯುವ ಮುಖಂಡ ನಿತಿನ್ ಪುಟ್ಟಸ್ವಾಮಿ ಅವರಿಗೆ ಶಾಸಕ ಕೆ.ಹರೀಶ್‌ಗೌಡ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ವಿನೋದ್, ಚಂದನ್, ಗೌತಮ್, ಪ್ರವೀಣ್ ಡಿಂಪಲ್, ಅನಿಲ್, ಲಿಖಿತ್, ಹೇಮಂತ್ ಇನ್ನಿತರರು ಉಪಸ್ಥಿತರಿದ್ದರು.

ಸರ್ಕಾರಿ ಕಚೇರಿಗಳಲ್ಲಿ ಲೋಕಾಯುಕ್ತ ಸಹಾಯವಾಣಿ ಸಂಖ್ಯೆ ಫಲಕ ಅಳವಡಿಕೆ ಕಡ್ಡಾಯ

ಮೈಸೂರು, ಏ.6(ಎಸ್‌ಪಿಎನ್)–ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಸಹಾಯವಾಣಿ ಸಂಖ್ಯೆಯನ್ನೊಳಗೊಂಡ ಫಲಕಗಳನ್ನು ಅಳವಡಿಸುವಂತೆ ರಾಜ್ಯದ ಎಲ್ಲಾ ಇಲಾಖೆ ಮುಖ್ಯಸ್ಥರಿಗೆ ಮುಖ್ಯಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸುತ್ತೋಲೆ ಹೊರಡಿಸಿದ್ದಾರೆ. ಲೋಕಾಯುಕ್ತ ಸಂಸ್ಥೆಯ ರಚನೆ, ಕಾರ್ಯವ್ಯಾಪ್ತಿ ವಿಳಾಸಗಳು, ಕಾರ್ಯ ನಿರ್ವಹಣಾ ರೀತಿಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ವ್ಯಾಪ್ತಿಗೆ ಒಳಪಡುವ ಎಲ್ಲಾ ಇಲಾಖೆ ಕಚೇರಿ, ಸಂಸ್ಥೆ, ಪಾಲಿಕೆ, ನಗರಸಭೆ, ನಿಗಮ ಮಂಡಳಿಗಳ ಪ್ರವೇಶ ದ್ವಾರ ಹಾಗೂ ಸದರಿ ಕಚೇರಿಗಳಿಗೆ ಬರುವ ಸಾರ್ವಜನಿಕರಿಗೆ ಮುಕ್ತವಾಗಿ ಕಾಣುವಂತಹ ಸ್ಥಳಗಳಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಸಹಾಯವಾಣಿ ಸಂಖ್ಯೆ 080–223755014, 080–22011298 ಅನ್ನು ಪ್ರದರ್ಶಿಸಬೇಕು ಎಂದಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ವಾರ್ಷಿಕ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಸನ್ಮಾನ

ಮಾಧ್ಯಮಗಳು ವಿರೋಧ ಪಕ್ಷಗಳಂತೆ ಕೆಲಸ ಮಾಡಬೇಕು: ಎಂಎಲ್‌ಸಿ ಸಿ.ಎನ್.ಮಂಜೇಗೌಡ

ಮೈಸೂರು, ಏ.6(ಜಿಎ)–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ ಮೈಸೂರು ಪತ್ರಕರ್ತರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಅಭಿನಂದಿಸಲಾಯಿತು.

> “ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನಿರ್ಮಾಣಗೊಳ್ಳಲಿರುವ ಪತ್ರಕರ್ತರ ಭವನಕ್ಕೆ ಈ ವರ್ಷ 5 ಲಕ್ಷ ಹಾಗೂ ಮುಂದಿನ ವರ್ಷ 5 ಲಕ್ಷ ರೂ. ಅನುದಾನ ನೀಡುತ್ತೇನೆ.
> –ಸಿ.ಎನ್.ಮಂಜೇಗೌಡ, ಎಂಎಲ್‌ಸಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಖಾದ್ರಿ ಶಾಮಣ್ಣ ಪ್ರಶಸ್ತಿ ಪುರಸ್ಕೃತ (ಅತ್ಯುತ್ತಮ ರಾಜಕೀಯ ವಿಮರ್ಶೆ) ಸುದ್ದಿ ಮೂಲ ಪತ್ರಿಕೆ ವರದಿಗಾರ ದಯಾಶಂಕರ ಮೈಲಿ, ಆರ್.ಎಲ್. ವಾಸುದೇವರಾವ್ ಪ್ರಶಸ್ತಿ ಪುರಸ್ಕೃತ (ವನ್ಯ ಪ್ರಾಣಿಗಳ ವರದಿ) ವಿಜಯಕರ್ನಾಟಕ ಪತ್ರಿಕೆ ನಾಗರಾಜ್ ನವೀಮನೆ, ಗಿರಿಧರ್ ಪ್ರಶಸ್ತಿ ಪುರಸ್ಕೃತ (ಅಪರಾಧ ಸಂಬಂಧಿತ ಅತ್ಯುತ್ತಮ ವರದಿ) ವಿಜಯವಾಣಿ ಪತ್ರಿಕೆ ಪಿ.ಕೆ.ರವಿಕುಮಾರ್, ಅತ್ಯುತ್ತಮ ಪುಟ ವಿನ್ಯಾಸಗಾರ ಪ್ರಶಸ್ತಿ ಪುರಸ್ಕೃತ ಪ್ರತಿನಿಧಿ ದಿನಪತ್ರಿಕೆ ಸಂದೇಶ್, ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿ ಪುರಸ್ಕೃತ (ಗ್ರಾಮೀಣ ಜನ–ಜೀವನದ ವರದಿ) ಜನಮಿತ್ರ ಪತ್ರಿಕೆ ಹುಣಸೂರು ವರದಿಗಾರ ಶಂಕರ ಕಟ್ಟೆ ಮಳಲವಾಡಿ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಇಂದು ವಿಧಾನ ಪರಿಷತ್ ಸದಸ್ಯನಾಗಿದ್ದೇನೆ ಎಂದರೆ ಅದಕ್ಕೆ ಪತ್ರಕರ್ತರು ಕಾರಣ. ರಾಜಕೀಯದ ಆರಂಭದ ದಿನದಿಂದಲೂ ಪ್ರತಿ ನಿತ್ಯವೂ ನನಗೆ ಸಹಕಾರ, ಸಲಹೆ ನೀಡಿದ ಪರಿಣಾಮ ಇಂದು ಈ ಹಂತಕ್ಕೆ ತಲುಪಿದ್ದೇನೆ ಎಂದರು.

ಸಿನಿಮಾ ಹಾಗೂ ಪತ್ರಕರ್ತರು ಸಮಾಜವನ್ನು ತಿದ್ದುವ ಕೆಲಸವನ್ನು ಮಾಡುತ್ತಿರುವುದರಿಂದ ರಾಜ್ಯದಲ್ಲಿ ಪತ್ರಕರ್ತರು ಮತ್ತು ಸಿನಿಮಾದವರಿಗೆ ಪ್ರಶಸ್ತಿ ನೀಡಿದರೆ ಅತೀವ ಸಂತಸವಾಗುತ್ತದೆ. ಪ್ರಶಸ್ತಿ ನೀಡಿದಾಗ ಜವಾಬ್ದಾರಿ ಹೆಚ್ಚಳವಾಗುತ್ತದೆ. ಅದನ್ನು ಸೂಕ್ಷ್ಮವಾಗಿ ನಿಭಾಯಿಸಬೇಕು. ಇಂದು ಮಾಧ್ಯಮಗಳಲ್ಲಿ ಸಣ್ಣ ವಿಚಾರಗಳಿಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಮಾಧ್ಯಮಗಳು ಸರ್ಕಾರದ ವಿರೋಧ ಪಕ್ಷದಂತೆ ಕೆಲಸ ಮಾಡಬೇಕು. ಆಗ ಆಡಳಿತ ಪಕ್ಷ ತಮ್ಮ ಕೆಲಸವನ್ನು ಜವಾಬ್ದಾರಿಯಿಂದ ತೆಗೆದುಕೊಳ್ಳುತ್ತದೆ ಎಂದರು.

ಅಮೆರಿಕಾದ ವ್ಯಾಸ ಭಾರತೀ ತ್ರಿಯೋಗ ವಿಶ್ವವಿದ್ಯಾನಿಲಯದ ಕುಲಪತಿ ಯೋಗಗುರು ಡಾ.ಕೆ.ರಾಘವೇಂದ್ರ ಪೈ ಮಾತನಾಡಿ, ಇಂದು ಸಮಾಜದಲ್ಲಿ ಯಾವುದೇ ಸಮಸ್ಯೆ ಬಗ್ಗೆ ಯಾರೇ ಧ್ವನಿ ಎತ್ತಿದರೂ ಅದು ಬಗೆಹರಿಯುವುದಿಲ್ಲ. ಆದರೆ, ಮಾಧ್ಯಮಗಳು ಧ್ವನಿ ಎತ್ತಿದ್ದಾಗ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆ. ಆದರೆ, ಉತ್ತಮ ಕೆಲಸಗಳಿಗೆ ಒತ್ತು ಕಡಿಮೆ ಮಾಡಿ, ಋಣಾತ್ಮಕ ಚಿಂತನೆಗಳಿಗೆ ಹೆಚ್ಚು ಆದ್ಯತೆ ನೀಡಲಾಗುತ್ತದೆ. ಅದರ ಬದಲು ಧನಾತ್ಮಕ ವಿಷಯಗಳಿಗೆ ಆದ್ಯತೆ ನೀಡಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಹಿರಿಯ ಸಿ.ಕೆ.ಮಹೇಂದ್ರ, ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024–25ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ ಮೈಸೂರು ಪತ್ರಕರ್ತರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಅಭಿನಂದಿಸಲಾಯಿತು.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಿಸಿಲಿನ ತಾಪ

ಮೈಸೂರಲ್ಲಿ ಮಣ್ಣಿನ ಮಡಿಕೆ–ಕುಡಿಕೆಗಳಿಗೆ ಡಿಮ್ಯಾಂಡ್





ಹಳೇ ಡಿಸಿ ಕಚೇರಿ ಪಾರ್ಕ್ ಬದಿಯಲ್ಲಿ ಮಾರಾಟಕ್ಕಿಟ್ಟಿರುವ ಮಣ್ಣಿನ ಮಡಿಕೆಗಳು. ಕಲಾಮಂದಿರ ಬದಿಯಲ್ಲಿ ಮಣ್ಣಿನ ಮಡಿಕೆಗಳು ಆಕರ್ಷಿಸುತ್ತಿರುವುದು. (ಬಲಚಿತ್ರ)

ಮೈಸೂರು, ಏ.6(ವಿವಿಹೆಚ್)– ಇಡೀ ರಾಜ್ಯದಲ್ಲಿ ಬಿಸಿಲಿನ ಝಳ ಹೆಚ್ಚುತ್ತಿದ್ದು, ಹಸಿರು ನಗರ ಎಂದೇ ಪ್ರಸಿದ್ಧಿಯಾದ ಮೈಸೂರು ನಗರದಲ್ಲೂ ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚಾಗುತ್ತಿದೆ. ಸಾಮಾನ್ಯ ಮಟ್ಟವನ್ನು ಮೀರಿ ಏರಿಕೆಯಾಗಿರುವುದರಿಂದ ಜನರು ತಂಪು ಸಾಧನಗಳತ್ತ ಮುಖ ಮಾಡುತ್ತಿದ್ದಾರೆ.

ಮೈಸೂರು ನಗರದ ಹಳೇ ಡಿಸಿ ಕಚೇರಿ ಹಿಂಭಾಗದ ಪಾರ್ಕ್‌ನ ಬದಿಯಲ್ಲಿರುವ ಮೈಸೂರು–ಹುಣಸೂರು ರಸ್ತೆ ಬದಿಯಲ್ಲಿ, ಕಲಾಮಂದಿರ ಬದಿಯ ರಸ್ತೆಯಲ್ಲಿ, ಬೋಗಾದಿ ರಸ್ತೆ, ಹೆಬ್ಬಾಳ ಸೇರಿದಂತೆ ಹಲವು ಭಾಗಗಳಲ್ಲಿ ಮಣ್ಣಿನ ಮಡಿಕೆಗಳ ಮಾರಾಟ ಬಲು ಜೋರಾಗಿದೆ. 10 ಲೀ, 15 ಲೀ ಹಾಗೂ 20 ಲೀಟರ್ ಸಾಮರ್ಥ್ಯದ ಮಡಿಕೆಗಳು ಮಾರುಕಟ್ಟೆಗೆ ಲಗ್ಗೆಯಿಟ್ಟಿದ್ದು, ಖರೀದಿಗಾಗಿ ಜನರು ಮುಂದಾಗುತ್ತಿದ್ದಾರೆ.

ಈ ಬಿಸಿಲಿನ ಹೊಡೆತಕ್ಕೆ ತಕ್ಷಣದ ಪರಿಹಾರವಾಗಿ ಪಾರಂಪರಿಕ ವಿಧಾನವಾದ ಮಣ್ಣಿನ ಮಡಿಕೆಗಳ ಮೊರೆ ಹೋಗಿದ್ದಾರೆ. ಫ್ರಿಜ್‌ನ ತಣ್ಣೀರಿಗಿಂತ ಮಡಿಕೆಯಲ್ಲಿ ಇಟ್ಟ ನೀರು ಆರೋಗ್ಯಕರವಾಗಿದ್ದು, ಸ್ವಾಭಾವಿಕವಾಗಿ ತಂಪಾಗಿರುತ್ತದೆ ಎಂಬ ಕಾರಣದಿಂದಾಗಿ ಮೈಸೂರಲ್ಲಿ ಮಡಿಕೆಗಳಿಗೆ ಭಾರೀ ಬೇಡಿಕೆ ಬಂದಿದೆ. ಮಡಿಕೆಗಳ ಜೊತೆಗೆ ಮಣ್ಣಿನ ಕುಡಿಕೆ, ಹಂಡಿ, ನೀರಿನ ಪಾತ್ರೆಗಳಿಗೂ ಬೇಡಿಕೆ ಹೆಚ್ಚಿದೆ. ಮಣ್ಣಿನ ಮಡಿಕೆಯಲ್ಲಿ ನೀರು ಸೇವಿಸುವುದು ದೇಹದ ತಾಪಮಾನ ನಿಯಂತ್ರಣಕ್ಕೆ ಸಹಕಾರಿ ಎಂದು ಹೇಳುತ್ತಾರೆ. ಮಡಿಕೆಯಲ್ಲಿ ನೀರು ಸ್ವಾಭಾವಿಕವಾಗಿ ಶೀತವಾಗುವುದರಿಂದ ದೇಹಕ್ಕೆ ಹಾನಿಯಾಗುವ ಸಾಧ್ಯತೆ ಕಡಿಮೆ. ಜೊತೆಗೆ ಪರಿಸರ ಸ್ನೇಹಿ ಉತ್ಪನ್ನಗಳನ್ನು ಬಳಸುವ ಪ್ರವೃತ್ತಿ ಹೆಚ್ಚುತ್ತಿರುವುದು ಕೂಡ ಈ ಬೇಡಿಕೆಗೆ ಮತ್ತೊಂದು ಕಾರಣವಾಗಿದೆ. ದಿನನಿತ್ಯ ಬಳಕೆಗೆ ಮನೆಗಳಿಗೆ ಬಳಸಲು ಕೊಂಡೊಯ್ದರೆ, ಹಾಸ್ಟೆಲ್ ವಿದ್ಯಾರ್ಥಿಗಳು ಸಹ ಮಡಿಕೆ ಬೇಕೆಂದು ನಮ್ಮ ಬಳಿಯೇ ಖರೀದಿಸಿ ಹೋಗಿದ್ದಾರೆ. ಮಜ್ಜಿಗೆ, ಅಂಬಲಿ ಸೇರಿದಂತೆ ಪಾನೀಯಗಳನ್ನು ಸ್ವಾಭಾವಿಕವಾಗಿ ತಂಪು ಮಾಡಿ ಮಾರಾಟ ಮಾಡಲು ನಮ್ಮ ಬಳಿ ಮಾರಾಟಗಾರರು ಕೊಂಡುಕೊಳ್ಳುತ್ತಾರೆ ಎನ್ನುತ್ತಾರೆ ರಾಜಸ್ತಾನದ ವ್ಯಾಪಾರಿ ರಮೇಶ್.

> “ರಾಜಸ್ತಾನ ಮೂಲದವರಾದ ನಾವು, ಕಳೆದ 15 ವರ್ಷಗಳಿಂದ ಮೈಸೂರಿನಲ್ಲಿ ಮಡಿಕೆ ವ್ಯಾಪಾರ ಮಾಡುತ್ತೇವೆ. ರಾಜಸ್ತಾನ ಬಿರು–ಬಿಸಿಲಿಗೆ ಹೊಂದಿ ಕೊಳ್ಳುವಂತೆ ಮಾಡಿರುವ ಮಡಿಕೆಗಳನ್ನು ಇಲ್ಲಿ ತಂದು ಮಾರಾಟ ಮಾಡುತ್ತೇವೆ. ಮೂರು ತಿಂಗಳ ಕಾಲ ಇಲ್ಲೇ ಇರಲಿದ್ದು, ಬಳಿಕ ರಾಜಸ್ತಾನಕ್ಕೆ ವಾಪ ಸ್ಸಾಗುತ್ತೇವೆ. ಮಣ್ಣಿನ ಮಡಿಕೆ ಬಹಳ ವಿಶೇಷ. ನೀರನ್ನು ಸದಾ ತಂಪಾಗಿಸಿರುತ್ತದೆ. ನಮ್ಮಲ್ಲಿ 10 ಲೀ, 15 ಲೀ, ಹಾಗೂ 20 ಲೀ. ಸಾಮರ್ಥ್ಯದ ಮಡಿಕೆಗಳಿದ್ದು, ಎಲ್ಲಾ ಮಡಿಕೆಗಳಿಗೂ ನಲ್ಲಿಗಳ ಹಾಕಲಾಗಿದೆ. ಇನ್ನು ಬೆಲೆ 450 ರೂ., 650 ರೂ., ಹಾಗೂ 950 ರೂ.ಗಳಿದ್ದು, ಜನರು ಹೆಚ್ಚು ಇಷ್ಟಪಡುತ್ತಿದ್ದಾರೆ. **–ರಮೇಶ್, ವ್ಯಾಪಾರಿ**

ದೇಶ - ವಿದೇಶ

ಧಾರಾಶಿವ್ ಜಿಲ್ಲೆಯಲ್ಲಿ ‘ನೋ ಟಿವಿ, ನೋ ಮೊಬೈಲ್’ ಅಭಿಯಾನ



ಮುಂಬೈ: ಮಹಾರಾಷ್ಟ್ರದ ಧಾರಾಶಿವ್ (ಹಿಂದಿನ ಒಸ್ಮಾನಾಬಾದ್) ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ‘ನೋ ಟಿವಿ, ನೋ ಮೊಬೈಲ್’ ಅಭಿಯಾನದ ಮೂಲಕ ಪ್ರತಿದಿನ ಎರಡು ಗಂಟೆ ಮೊಬೈಲ್ ಮತ್ತು ಟಿವಿಯನ್ನು ಕಡ್ಡಾಯವಾಗಿ ಆಫ್ ಮಾಡುವಂತೆ ಆದೇಶಿಸಲಾಗಿದೆ.

ಈ ಅಭಿಯಾನವು ಜಿಲ್ಲೆಯ 712 ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪ್ರತಿದಿನ ಸಂಜೆ 7ರಿಂದ 9 ಗಂಟೆವರೆಗೆ ಜಾರಿಯಲ್ಲಿರಲಿದೆ. ವಿಶೇಷವಾಗಿ ಶಾಲಾ ಮಕ್ಕಳಲ್ಲಿ ಮೊಬೈಲ್ ಮತ್ತು ಟಿವಿ ಅವಲಂಬನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಧಾರಾಶಿವ್ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಅರ್ಚನಾ ಪಾಟೀಲ್ ತಿಳಿಸಿದ್ದಾರೆ.

ಎಲ್ಲಾ ಗ್ರಾಪಂಗಳಲ್ಲಿ ಸಂಜೆ 7ಕ್ಕೆ ಸೈರನ್ ಮೊಳಗಿಸಲಾಗುವುದು. ಸಂಜೆ 7ರಿಂದ 9ರವರೆಗೆ ಟಿವಿ ಮತ್ತು ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಬೇಕಾಗುತ್ತದೆ. ಈ ಅವಧಿಯಲ್ಲಿ ನಿಯಮ ಪಾಲನೆ ಖಚಿತಪಡಿಸಿಕೊಳ್ಳಲು ಸುಮಾರು 750 ಸರ್ಕಾರಿ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ವಿದ್ಯಾರ್ಥಿಗಳ ಸ್ಕ್ರೀನ್ ಟೈಮ್ ಕಡಿಮೆ ಮಾಡುವುದು ಮತ್ತು ಶಿಸ್ತುಬದ್ಧ ಅಧ್ಯಯನದ ದಿನಚರಿ ಬೆಳೆಸುವುದು ಈ ಉಪಕ್ರಮದ ಮುಖ್ಯ ಉದ್ದೇಶ. ಈ ಕ್ರಮವು ನೂತನ ಪ್ರಯೋಗವಾಗಿ ಕಂಡುಬಂದರೂ ಇದರ ಯಶಸ್ಸು ಸಾರ್ವಜನಿಕರ ಸಹಕಾರ, ಸಮುದಾಯದ ಮೇಲೆ ಅವಲಂಬಿತವಾಗಿದೆ ಎಂದು ಮನವಿ ಮಾಡಿದ್ದಾರೆ.


ಅಮೆರಿಕ ಶ್ವೇತಭವನದ ಬಳಿ ಅಪರಿಚಿತನಿಂದ ಗುಂಡಿನ ದಾಳಿ



ವಾಷಿಂಗ್ಟನ್: ಇರಾನ್ ಮತ್ತು ಅಮೆರಿಕ ಸಂಘರ್ಷದ ನಡುವೆ ಅಮೆರಿಕದ ಅಧ್ಯಕ್ಷರ ನಿವಾಸ ಶ್ವೇತಭವನದ ಉತ್ತರ ಭಾಗದಲ್ಲಿ ಗುಂಡಿನ ದಾಳಿ ನಡೆದಿದ್ದು, ಇಡೀ ಪ್ರದೇಶದಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

ಶ್ವೇತಭವನದ ಬಳಿ ಗುಂಡಿನ ದಾಳಿ ನಡೆಸಿದ ವಿಚಾರ ತಿಳಿಯುತ್ತಲೇ ಅಮೆರಿಕದ ಸೀಕ್ರೆಟ್ ಸರ್ವಿಸ್ ಮತ್ತು ಮೆಟ್ರೋಪಾಲಿಟನ್ ಪೊಲೀಸ್ ಇಲಾಖೆ ಜಂಟಿಯಾಗಿ ತನಿಖೆ ಆರಂಭಿಸಿ, ಸುತ್ತಮುತ್ತಲಿನ ಪ್ರದೇಶದಲ್ಲಿ ಹದ್ದಿನ ಕಣ್ಣಾವಲಿಟ್ಟಿವೆ. ವೈಟ್ ಹೌಸ್‌ನ ತೀರಾ ಹತ್ತಿರದಲ್ಲಿರುವ 800 ಬ್ಲಾಕ್ 16ನೇ ಸೇಂಟ್ ಮತ್ತು ಅದರ ಉತ್ತರಕ್ಕಿರುವ ಲಾಫಯೆಟ್ ಪಾರ್ಕ್ ಪ್ರದೇಶದಲ್ಲಿ ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಶಂಕಿತ ವ್ಯಕ್ತಿಯೊಬ್ಬ ರೈಫಲ್‌ನಿಂದ ಹಲವಾರು ಬಾರಿ ಗುಂಡು ಹಾರಿಸಿದ್ದಾನೆ ಎಂದು ವರದಿಯಾಗಿದ್ದು, ಪೊಲೀಸರಿಗೆ ಸ್ಥಳದಲ್ಲಿ ರೈಫಲ್ ಪತ್ತೆಯಾಗಿವೆ. ಘಟನೆ ವೇಳೆ ಅಮೆರಿಕ ಅಧ್ಯಕ್ಷ ಟ್ರಂಪ್ ವೈಟ್ ಹೌಸ್‌ನಲ್ಲಿದ್ದರು ಎನ್ನಲಾಗಿದೆ. ಒಳಗಿರುವ ಪ್ರತಿಯೊಬ್ಬರೂ ಸುರಕ್ಷಿತವಾಗಿದ್ದಾರೆ ಎಂದು ಸೀಕ್ರೆಟ್ ಸರ್ವಿಸ್ ಸ್ಪಷ್ಟನೆ ಕೊಟ್ಟಿದೆ. ಟ್ರಂಪ್ ಅವರನ್ನು ವಾಲ್ಟರ್ ರೀಡ್ ರಾಷ್ಟ್ರೀಯ ಮಿಲಿಟರಿ ವೈದ್ಯಕೀಯ ಕೇಂದ್ರಕ್ಕೆ ಕರೆದೊಯ್ಯಲಾಗಿದೆ ಎಂಬ ವದಂತಿಗಳು ಹರಡಿದ್ದವು. ಅಧ್ಯಕ್ಷ ಟ್ರಂಪ್ ಆರೋಗ್ಯವಾಗಿದ್ದು, ಓವಲ್ ಕಚೇರಿಯಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ವೈಟ್ ಹೌಸ್ ಸಂವಹನ ನಿರ್ದೇಶಕ ಸ್ಟೀವನ್ ಸ್ಪಷ್ಟನೆ ನೀಡಿದ್ದಾರೆ.

ಶ್ರೀನಗರ ಹೆದ್ದಾರಿಯಲ್ಲಿ ಭಾರೀ ಭೂಕುಸಿತ; ಸಂಚಾರ ಸ್ಥಗಿತ



ಜಮ್ಮು: ಇಲ್ಲಿನ ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ(ಎನ್‌ಹೆಚ್–44) ಸೋಮವಾರ ನಸುಕಿನ ಜಾವ ಭಾರೀ ಭೂಕುಸಿತ ಸಂಭವಿಸಿದ್ದು, ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.

ಇಂದು ಬೆಳಗಿನ ಜಾವ 3 ಗಂಟೆ ಸುಮಾರಿಗೆ ರಾಂಬನ್ ಜಿಲ್ಲೆಯ ಕರೋಲ್ ಪುಲ್ ಮತ್ತು ಚಂದ್ರಕೋಟ್ ನಡುವೆ ಭಾರಿ ಗಾತ್ರದ ಕಲ್ಲುಗಳು ಮತ್ತು ಮಣ್ಣು ಕುಸಿದಿದ್ದು, ಹೆದ್ದಾರಿಯ ಎರಡೂ ಬದಿಗಳು ಸಂಪೂರ್ಣವಾಗಿ ಮುಚ್ಚಿಹೋಗಿವೆ. ಜಮ್ಮು ಹಾಗೂ ಶ್ರೀನಗರ ಮಾರ್ಗದ ಎಲ್ಲಾ ವಾಹನಗಳನ್ನು ದಾರಿಯಲ್ಲೇ ನಿಲ್ಲಿಸಲಾಗಿದೆ. ಪ್ರಯಾಣಿಕರು ತಮ್ಮ ಪ್ರಯಾಣಕ್ಕೂ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ನೀಡುವ ಇತ್ತೀಚಿನ ಮಾಹಿತಿ ಪಡೆಯುವಂತೆ ಅಧಿಕಾರಿಗಳು ಸಾರ್ವಜನಿಕರಿಗೆ ಸೂಚನೆ ನೀಡಿದ್ದಾರೆ. ಮಣ್ಣು ತೆರವು ಕಾರ್ಯಾಚರಣೆ ಪ್ರಗತಿಯಲ್ಲಿದ್ದರೂ ನಿರಂತರ ಬಂಡೆಗಳು ಬೀಳುತ್ತಿವೆ ಎನ್ನಲಾಗಿದೆ. ಜಮ್ಮು–ಕಾಶ್ಮೀರದ ರಾಂಬನ್ ಉಪ ಸಂಚಾರ ನಿರೀಕ್ಷಕ ವಿನಯ್ ಗುಪ್ತಾ ಮಾತನಾಡಿ, ಮಧ್ಯಾಹ್ನ 12:30ರ ಸುಮಾರಿಗೆ ಪುನಃ ಭಾರಿ ಭೂಕುಸಿತ ಸಂಭವಿಸಿದ್ದು, ಹೆದ್ದಾರಿಯಲ್ಲಿ ದೊಡ್ಡ ಅಡಚಣೆ ಉಂಟಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹೆದ್ದಾರಿಯನ್ನು ಆದಷ್ಟು ಬೇಗ ಪ್ರಯಾಣಿಕರ ಪ್ರಯಾಣಕ್ಕೆ ಅನುವು ಮಾಡಲು ಪ್ರಯತ್ನಿಸುತ್ತಿದೆ. ಯಾವುದೇ ವದಂತಿಗಳಿಗೆ ಕಿವಿಗೊಡಬೇಡಿ ಎಂದಿದ್ದಾರೆ.

ಪಾಕ್‌ನ ಪಂಜಾಬ್ ಪ್ರಾಂತ್ಯದಲ್ಲಿ ಸಗಣಿ ತೆರಿಗೆ!; ಎಮ್ಮೆಗೆ ಡೈಪರ್ ಧರಿಸಿ ವ್ಯಂಗ್ಯ



ಲಾಹೋರ್: ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಪಾಕಿಸ್ತಾನದಲ್ಲಿ ಜಾನುವಾರುಗಳ ಸಗಣಿ ಮೇಲೂ ತೆರಿಗೆ ವಿಧಿಸಲಾಗಿದೆ.

ಪಾಕ್‌ನ ಪಂಜಾಬ್ ಪ್ರಾಂತ್ಯದಲ್ಲಿ 168 ಜಾನುವಾರು ವಸಾಹತುಗಳಲ್ಲಿರುವ 50 ಲಕ್ಷ ಪ್ರಾಣಿಗಳ ಮೇಲೆ ಗೋಬರ್ ತೆರಿಗೆ(Dung Tax) ವಿಧಿಸಿದ್ದು, ಪಾಕಿಸ್ತಾನಿಗಳು ಇದನ್ನು ಸಗಣಿ ತೆರಿಗೆ ಎಂದು ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಮಾಡುತ್ತಿದ್ದಾರೆ. ಪಂಜಾಬ್ ಸಿಎಂ ಮರ್ಯಮ್ ನವಾಜ್, ‘ಸೂತ್ರ ಪಂಜಾಬ್’ ಹೆಸರಿನಲ್ಲಿ ಪ್ರತಿ ಮೇಕೆಯ ಮಾಲೀಕರು ಜೈವಿಕ ಅನಿಲ ಕಾರ್ಯಕ್ರಮಕ್ಕಾಗಿ ಪ್ರತಿ ಮೇಕೆಗೆ ದಿನಕ್ಕೆ 30 ರೂ. ತೆರಿಗೆ ಪಾವತಿಸಬೇಕೆಂದು ಆದೇಶಿಸಿದ್ದಾರೆ. ಈ ತೆರಿಗೆ ಮೂಲಕ ಸರ್ಕಾರ ಕೋಟಿ ರೂ. ಸಂಗ್ರಹಿಸುವ ಗುರಿ ಹೊಂದಿದೆ. ಈ ತೆರಿಗೆಯನ್ನು ತಪ್ಪಿಸಲು ವಿಚಿತ್ರ ಕೆಲಸಗಳಿಗೆ ಮುಂದಾಗಿರುವ ಕೆಲವು ಮಾಲೀಕರು, ತಮ್ಮ ಜಾನುವಾರುಗಳಿಗೆ ಶೂನ್ಯ ತ್ಯಾಜ್ಯ ಆಹಾರವನ್ನು ನೀಡುತ್ತಿದ್ದರೆ ಮತ್ತಷ್ಟು ಮಂದಿ ತಮ್ಮ ಜಾನುವಾರುಗಳಿಗೆ ಡೈಪರ್ ಧರಿಸಲು ಪ್ರಾರಂಭಿಸಿದ್ದಾರೆ. ಮುಂದಿನ ದಿನಗಳಲ್ಲಿ ಮಾನವ ಮಲದ ಮೇಲೂ ತೆರಿಗೆ ಗ್ಯಾರಂಟಿ ಎಂದು ಜನ ವ್ಯಂಗ್ಯವಾಡಿದ್ದಾರೆ.ಪಾಕಿಸ್ತಾನಿ ರೂ. ಹೆಚ್ಚಿಸಿತ್ತಾದರೂ, ಅದರ ಮೇಲಿನ ತೆರಿಗೆಯನ್ನು ರದ್ದುಗೊಳಿಸಿತ್ತು. ಕೊಲ್ಲಿ ರಾಷ್ಟ್ರಗಳಲ್ಲಿನ ಪರಿಸ್ಥಿತಿಯೇ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣ ಎಂದು ಸರ್ಕಾರ ತಿಳಿಸಿತ್ತು.

ಪುಲ್‌ಅಪ್ಸ್ ವೇಳೆ ಬ್ಯಾಸ್ಕೆಟ್ ಬಾಲಿನ ಕಂಬ ಕುಸಿದು ಬಿ.ಟೆಕ್ ವಿದ್ಯಾರ್ಥಿ ಸಾವು



ಪುಣೆ: ವ್ಯಾಯಾಮ ಮಾಡುತ್ತಿದ್ದ 20 ವರ್ಷದ ಯುವಕನ ಮೇಲೆ ಬ್ಯಾಸ್ಕೆಟ್ ಬಾಲ್ ಕಂಬ ಬಿದ್ದು ಪ್ರಾಣ ಕಳೆದುಕೊಂಡ ಘಟನೆ ಮಹಾರಾಷ್ಟ್ರದ ಪುಣೆಯ ಪ್ರತಿಷ್ಠಿತ ಕಾಲೇಜೊಂದರ ಕ್ಯಾಂಪಸ್‌ನಲ್ಲಿ ನಡೆದಿದೆ.

ಬಿ.ಟೆಕ್ ಪದವಿ ವಿದ್ಯಾರ್ಥಿ, ಉತ್ತರ ಪ್ರದೇಶ ಮೂಲದ ವಿಶಾಲ್ ವರ್ಮಾ ಮೃತಪಟ್ಟವರು. ಇವರಿಗೆ ನಿತ್ಯ ವ್ಯಾಯಾಮ ಮಾಡುವ ಅಭ್ಯಾಸವಿತ್ತು. ಎಂದಿನಂತೆ ಸೋಮವಾರ ಮುಂಜಾನೆ ವಸತಿ ನಿಲಯದಿಂದ ವ್ಯಾಯಾಮ ಮತ್ತು ವಾಕಿಂಗ್‌ಗಾಗಿ ಕಾಲೇಜು ಮೈದಾನಕ್ಕೆ ತೆರಳಿದ್ದಾಗ ಪುಲ್‌ಅಪ್ಸ್ ಮಾಡಲು ಬಾಸ್ಕೆಟ್‌ಬಾಲ್ ಫ್ರೇಮ್ ಬಳಸಿಕೊಂಡಿದ್ದಾರೆ. ಈ ವೇಳೆ ಆ ಫ್ರೇಮ್ ಕುಸಿದು ವಿಶಾಲ್ ವರ್ಮಾ ಮೇಲೆ ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾರೆ. ಸ್ಥಳದಲ್ಲಿದ್ದ ವಿದ್ಯಾರ್ಥಿಗಳು ಆತನನ್ನು ಆಸ್ಪತ್ರೆಗೆ ಕರೆದೊಯ್ದರಾದರೂ ದಾರಿಮಧ್ಯೆ ವಿಶಾಲ್ ಮೃತಪಟ್ಟಿದ್ದಾರೆ. ಆ ಬಾಸ್ಕೆಟ್‌ಬಾಲ್ ಕಂಬ ತುಕ್ಕು ಹಿಡಿದಿತ್ತೇ ಅಥವಾ ಅದರ ಫಿಟ್ಟಿಂಗ್‌ನಲ್ಲಿ ದೋಷವಿತ್ತೇ ಎಂಬ ಬಗ್ಗೆ ಪೊಲೀಸರು ಪರಿಶೀಲಿಸುತ್ತಿದ್ದಾರೆ. ಹರಿಯಾಣದ ರೋಹ್ಟಕ್‌ನಲ್ಲಿ 16 ವರ್ಷದ ರಾಷ್ಟ್ರೀಯ ಮಟ್ಟದ ಬ್ಯಾಸ್ಕೆಟ್ ಬಾಲ್ ಆಟಗಾರ ಹಾರ್ದಿಕ್ ರಥಿ, ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಕಂಬ ಮುಂದಕ್ಕೆ ಬಿದ್ದು ಸ್ಥಳದಲ್ಲೇ ಮೃತಪಟ್ಟರು. ಇದಕ್ಕೂ ಮೊದಲು, ಹರಿಯಾಣದ ಬಹದ್ದೂರ್‌ಗಢ ಜಿಲ್ಲೆಯಲ್ಲಿ ಇದೇ ರೀತಿಯ ಘಟನೆಯಲ್ಲಿ 15 ವರ್ಷದ ಬಾಲಕ ಸಾವನ್ನಪ್ಪಿದ್ದ.

ಏ.17, ಕೊಡಗಿಗೆ ಮುಖ್ಯಮಂತ್ರಿ ಭೇಟಿ ಸಾಧ್ಯತೆ



ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಸೋಮಶೇಖರ್.

ಮಡಿಕೇರಿ ಏ.6–ಮುಖ್ಯಮಂತ್ರಿ ಸಿದ್ಧರಾಮಯ್ಯ ಏ.17 ರಂದು ಕೊಡಗು ಜಿಲ್ಲೆಗೆ ಭೇಟಿ ನೀಡುವ ಸಾಧ್ಯತೆ ಇದ್ದು, ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಲೈನ್‌ಮನೆಗಳಲ್ಲಿ ವಾಸ ಮಾಡುತ್ತಿರುವ ಪರಿಶಿಷ್ಟ ಪಂಗಡದವರಿಗೆ ನಿವೇಶನ ಹಕ್ಕುಪತ್ರ ವಿತರಿಸುವುದರ ಜೊತೆಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಭೂಮಿ ಪೂಜೆ ನೆರವೇರಿಸುವ ಸಾಧ್ಯತೆ ಇದೆ ಎಂದರು.

ಲೈನ್‌ಮನೆಗಳಲ್ಲಿ ವಾಸಿಸುವ ನಿವೇಶನ ರಹಿತ ಕುಟುಂಬದವರ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಆದರೂ ಸಹ ಕೆಲವು ಕುಟುಂಬದವರ ಸಮರ್ಪಕ ಮಾಹಿತಿ ಲಭ್ಯ ಇಲ್ಲದಿರುವ ಹಿನ್ನೆಲೆ ಸಂಬಂಧಪಟ್ಟ ಗ್ರಾಮಕ್ಕೆ ತೆರಳಿ ಆಧಾರ್ ಕಾರ್ಡ್ ಮಾಡಿಸುವುದು ಹಾಗೆಯೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸೋಮಶೇಖರ್ ಅವರು ಸ್ಪಷ್ಟ ನಿರ್ದೇಶನ ನೀಡಿದರು.

ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಮಾತನಾಡಿ ತಾ.ಪಂ.ಇಒ ಮತ್ತು ತಹಶೀಲ್ದಾರರು ಹಾಗೆಯೇ ಪಿಡಿಒ ಗಳು, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತಾಧಿಕಾರಿಗಳು, ಬಿಲ್ಲು ಕಲೆಕ್ಟರ್‌ಗಳು, ಗ್ರಾಮ ಸಹಾಯಕರು ಹೀಗೆ ಎಲ್ಲರೂ ಸಹ ಫಲಾನುಭವಿಗಳನ್ನು ಪತ್ತೆ ಹಚ್ಚಬೇಕು. ಜಾತಿ ಮತ್ತು ಆದಾಯ ಹಾಗೂ ಆಧಾರ್ ಕಾರ್ಡ್ ಮಾಡಿಸುವಂತಾಗಬೇಕು ಎಂದು ಸೂಚಿಸಿದರು. ತಾ.ಪಂ.ಇಒ ಶೇಖರ್, ಜಿ.ಪಂ.ಉಪ ಕಾರ್ಯದರ್ಶಿ ಜೀವನ್ ಕುಮಾರ್, ಪೊನ್ನಂಪೇಟೆ ತಹಸೀಲ್ದಾರ್ ಸಂಜನಾ, ಅಕ್ರಂ ಪಾಷಾ ಇದ್ದರು.

ಡಿಸಿಸಿ ಬ್ಯಾಂಕ್‌ಗೆ 30 ಕೋಟಿ ರೂ. ಲಾಭ

ಮಡಿಕೇರಿ: ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು 30.46 ಕೋಟಿ ರೂ. ಲಾಭಾಂಶ ಹೊಂದಿದ್ದು, 23.14 ಕೋಟಿ ರೂ. ನಿವ್ವಳ ಲಾಭ ಹೊಂದಿದೆ ಎಂದು ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ತಿಳಿಸಿದ್ದಾರೆ.

ನಗರದ ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಬ್ಯಾಂಕಿನ ಪ್ರಗತಿಯ ಬಗ್ಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ 5 ಲಕ್ಷ ರೂ. ವರೆಗೆ ಶೂನ್ಯ ಬಡ್ಡಿ ದರದಲ್ಲಿ ಕೃಷಿಕರಿಗೆ ಸಾಲ ಸೌಲಭ್ಯ ಕಲ್ಪಿಸುತ್ತಿದೆ. ನಬಾರ್ಡ್‌ನಿಂದ 37,492 ಲಕ್ಷ ರೂ. ಸಾಲವನ್ನು ಪಡೆಯಲಾಗಿದೆ. 73,370 ಲಕ್ಷ ಹೂಡಿಕೆ ಇದೆ. ಶೇಕಡಾವಾರು ಸಾಲ ವಸೂಲಾತಿ ಗಮನಿಸಿದಾಗ 99ರಷ್ಟು ಸಾಲ ವಸೂಲಾತಿ ಆಗುತ್ತಿರುವುದು ಶ್ಲಾಘನೀಯ ಎಂದರು.

ನಿರ್ದೇಶಕರಾದ ಎಚ್.ಕೆ.ಮಾದಪ್ಪ, ಕಾಂಗೀರ ಸತೀಶ್, ಎಚ್.ಎಂ.ರಮೇಶ್, ಬ್ಯಾಂಕಿನ ಸಿಇಓ ಎಂ.ಕೆ.ಬೆಳ್ಯಪ್ಪ, ಪ್ರಧಾನ ವ್ಯವಸ್ಥಾಪಕಿ ಬೋಜಮ್ಮ ಇದ್ದರು.

ಬೊಪ್ಪಂಡ ರಶ್ಮಿ ಅಯ್ಯಪ್ಪರಿಗೆ ಉದ್ಯೋಗ್ ಯೋಗ್ ಧಾನ್ ಪ್ರಶಸ್ತಿ




ನಟಿ ಶಿಲ್ಪಾ ಶೆಟ್ಟಿ ಅವರಿಂದ ರಶ್ಮಿ ಅಯ್ಯಪ್ಪ ಪ್ರಶಸ್ತಿ ಸ್ವೀಕರಿಸಿದರು.

ಮಡಿಕೇರಿ, ಏ.6–ಬೆಂಗಳೂರಿನಲ್ಲಿ ನೆಲಸಿರುವ ಬೊಪ್ಪಂಡ ರಶ್ಮಿ ಅಯ್ಯಪ್ಪ ಅವರಿಗೆ ಜೀವಮಾನ ಸಾಧನೆಗಾಗಿ ಪ್ರತಿಷ್ಠಿತ ಉದ್ಯೋಗ್ ಯೋಗ್ ಧಾನ್ ಪ್ರಶಸ್ತಿ ಲಭಿಸಿದೆ

ಯೋಗ ಕ್ಷೇಮ, ಆರೋಗ್ಯ ಸ್ವಾಸ್ಥ್ಯ ಜೀವನೋಲ್ಲಾಸ ಕ್ಷೇತ್ರದಲ್ಲಿ ಹೆಸರಾಗಿರುವ ಆಶ್ವಾಸನ್ ಸಂಸ್ಥೆಯ ಸಂಸ್ಥಾಪಕಿಯಾಗಿ ಮತ್ತು ಕಾರ್ಯನಿರ್ವಾಹಕಿ ಅಧ್ಯಕ್ಷೆಯಾಗಿರುವ ರಶ್ಮಿ ಅಯ್ಯಪ್ಪ ಎರಡು ದಶಕಗಳಿಂದ 30 ದೇಶಗಳಲ್ಲಿ ಆರೋಗ್ಯ ಸ್ವಾಸ್ಥ್ಯ ಸಂಬಂಧಿತ 100ಕ್ಕೂ ಹೆಚ್ಚು ಅಭೂತಪೂರ್ವ ಫಲಿತಾಂಶಗಳು ತಂದಿದ್ದು, ಆರೋಗ್ಯ ಸ್ವಾಸ್ಥ್ಯ ಕ್ಷೇತ್ರದಲ್ಲಿ ಇವರು ಸಲ್ಲಿಸಿರುವ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಯೋಗ ಕ್ಷೇಮ, ಆಧ್ಯಾತ್ಮದ ಮೂಲಕ ಜೀವನೋಲ್ಲಾಸ ಕುರಿತಾದ ರಶ್ಮಿ ಅಯ್ಯಪ್ಪ ಅವರ ಕಾರ್ಯಕ್ರಮಗಳು ಜಗತ್ತಿನಾದ್ಯಂತ ಮನ್ನಣೆ ಪಡೆದಿದೆ. 2005ರ ಮೇ.23ರಂದು ಆರೋಗ್ಯ ಸುರಕ್ಷತೆ ಮತ್ತು ಯೋಗ ಕ್ಷೇಮ ವಿಚಾರವನ್ನೇ ಆದ್ಯತೆಯಾಗಿರಿಸಿಕೊಂಡು ಆಶ್ವಾಸನ್ ಎಂಬ ಸಂಸ್ಥೆಯನ್ನು ರಶ್ಮಿ ಅಯ್ಯಪ್ಪ ಪ್ರಾರಂಭಿಸಿದ್ದರು. ದಿ.ಲೆಫ್ಟಿನೆಂಟ್ ಕರ್ನಲ್ (ನಿವೃತ್ತ) ಬೊಪ್ಪಂಡ ದಿ.ಬೋಪಣ್ಣ ಅಯ್ಯಪ್ಪ ಮತ್ತು ಬಡುವ ಮಾಡಂಡ ಜುಕ್ಕ ಅಯ್ಯಪ್ಪ ಅವರ ಪುತ್ರಿಯಾಗಿರುವ ರಶ್ಮಿ, ಭಾರತದಲ್ಲಿನ ಆರೋಗ್ಯ ಸುಧಾರಣಾ ಕ್ಷೇತ್ರದಲ್ಲಿನ ಯೋಗ ಕ್ಷೇಮ ಕ್ಷೇತ್ರದಲ್ಲಿನ ಸಾಧನೆಗಾಗಿ ಪ್ರವಾಸೋದ್ಯಮ ಇಲಾಖೆ ಬೆಂಬಲಿತ ಉದ್ಯೋಗ್ ಯೋಗ್ ಧಾನ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಈ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಖ್ಯಾತ ಚಿತ್ರ ನಟಿ ಶಿಲ್ಪಾ ಶೆಟ್ಟಿ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ಮದುವೆಯಾದ ನಂತರ ತವರಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ರಶ್ಮಿಕಾ



ತಂದೆ, ತಾಯಿ, ವಕೀಲೆಯೊಂದಿಗೆ ರಶ್ಮಿಕಾ.

ವಿರಾಜಪೇಟೆಏ.6– ಮದುವೆಯಾದ ನಂತರ ನಟಿ ರಶ್ಮಿಕಾ ಮಂದಣ್ಣ ಮೊದಲ ಬಾರಿಗೆ ತವರಿಗೆ ಆಗಮಿಸಿದ್ದರು. ತವರು ಮನೆಯಲ್ಲಿ ತಂದೆ ಮಂದಣ್ಣ, ತಾಯಿ ಸುಮನ್ ಮಂದಣ್ಣರ ಸೇರಿದಂತೆ ಕುಟುಂಬದ ಸದಸ್ಯರೊಂದಿಗೆ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿಕೊಂಡರು. ನಾಪೋಕ್ಲುವಿನ ಇಗ್ಗುತ್ತಪ್ಪ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆಯನ್ನು ಮಾಡಿಸಿ ದರು.

ವೈವಾಹಿಕ ಜೀವನಕ್ಕೆ ಕಾಲಿಟ್ಟ ನಂತರ ಮೊದಲ ಬಾರಿಗೆ ಬಂದಿದ್ದ ಮಗಳಿಗೆ ವಾಸದ ಮನೆಯನ್ನೇ ತಂದೆ ಮಂದಣ್ಣ ಉಡುಗೊರೆಯಾಗಿ ನೀಡಿದರು.

ವಿರಾಜಪೇಟೆ ಚೆಂಬೆಬೆಳ್ಳೂರು ಗ್ರಾ.ಪಂ. ವ್ಯಾಪ್ತಿಯ ಕುಕ್ಲೂರು ಗ್ರಾಮದ ನಿವಾಸಿ ಪ. ಪಂ. ಮಾಜಿ ಸದಸ್ಯರಾಗಿದ್ದ ಮುಂಡಚಾಡಿರ ಮದನ್ ಮಂದಣ್ಣ ಮತ್ತು ಪತ್ನಿ ಸುಮನ್ ಮಂದಣ್ಣರ ಹೆಸರಿನಲ್ಲಿದ್ದ ಜಾಷಾರಾಮಿ (ಸೆರಿನಿಟಿ) ಮನೆಯನ್ನು ಉಪನೋಂದಣಿ ಕಚೇರಿಯಲ್ಲಿ ಪುತ್ರಿ ರಶ್ಮಿಕಾ ಮಂದಣ್ಣ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಟ್ಟರು. ಇತ್ತೀಚೆಗೆ ರಶ್ಮಿಕಾ ಮಂದಣ್ಣ ತೆಲುಗು ಚಿತ್ರನಟ ವಿಜಯ್ ದೇವಕೊಂಡರೊಂದಿಗೆ ವಿವಾಹವಾಗಿದ್ದರು. ಇದೇ ಸಂದರ್ಭದಲ್ಲಿ ದಾನಪತ್ರ ಮತ್ತು ದಾಖಲೆ ಪತ್ರಗಳನ್ನು ನಿರ್ವಹಿಸಿದ ಮಂದಣ್ಣ ಕುಟುಂಬದ ವಕೀಲರಾದ ಪಟ್ಟಡ ರೀನಾ ಪ್ರಕಾಶ್, ಮಂದಣ ಅವರ ಖಾಸಗಿ ವ್ಯವಸ್ಥಾಪಕರು, ಅಂಗರಕ್ಷಕರು ಹಾಜರಿದ್ದರು.

ಮಹಿಳೆ ಅವಕಾಶವಂಚಿತಳಾಗಿ ಮುನ್ನಲೆಗೆ ಬರುತ್ತಿಲ್ಲ



ವಿರಾಜಪೇಟೆ, ಏ.6– ಕೊಡಗು ಮಹಿಳಾ ಸಹಕಾರ ಸಂಘ ನಿಯಮಿತ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.

ವಿಶಾಲಿ ಪ್ರಮೋದ್ ಕಾರ್ಯಕ್ರಮ ಉದ್ಘಾಟಿಸಿ, ಈಗಿನ ಹೆಣ್ಣು ಮಕ್ಕಳು ಎಲ್ಲ ಕ್ಷೇತ್ರದಲ್ಲೂ ಛಾಪು ಮೂಡಿಸುತ್ತಿದ್ದರೂ ಮನ್ನಣೆ ಎಲ್ಲರಿಗೂ ಲಭಿಸುವುದಿಲ್ಲ. ಎಷ್ಟೋ ಮಂದಿ ಮಹಿಳೆಯರು ಮುನ್ನಲೆಗೆ ಬರದೆ ಅವಕಾಶವಂಚಿತರಾಗಿದ್ದಾರೆ ಎಂದರು.

ಅತಿಥಿಗಳಾಗಿದ್ದ ಸಾಹಿತಿ ರಜಿತ ಕಾರ್ಯಪ್ಪ ಮಾತನಾಡಿ ಮಹಿಳಾ ದಿನ ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗದಿರಲಿ ಎಂದು ಆಶಿಸಿದರು. ಮಹಿಳಾ ಸಮಾಜದ ಅಧ್ಯಕ್ಷೆ ಪಟ್ರಪಂಡ ಗೀತಾಬೆಳ್ಯಪ ಮಾತನಾಡಿ, ಪುರುಷರಿಗಿಂತ ಸ್ತ್ರೀ ಯಾವುದರಲ್ಲಿಯೂ ಕಡಿಮೆ ಇಲ್ಲ ಅನ್ನುವುದು ಈಗಾಗಲೇ ಸಾಬೀತಾಗಿದೆ, ಆದರೂ ಪುರುಷ ಪ್ರಧಾನ ಸಮಾಜದಲ್ಲಿ ಎಷ್ಟೋ ಪ್ರತಿಭಾನ್ವಿತ ಮಹಿಳೆಯರು ಮೂಲೆಗುಂಪಾಗುತ್ತಿದ್ದಾರೆ. ಆದರೂ ಇಂತಹ ಸಮಾಜದ ಮುಂದೆ ಸಾಧಕ ಮಹಿಳೆಯರನ್ನು ಗುರುತಿಸಿ ಆತ್ಮಸ್ಥೈರ್ಯವನ್ನು ತುಂಬಿಸುವ ಕಾರ್ಯ ನಡೆಯುತ್ತಿದೆ. ಈಗಿನ ಮಹಿಳೆಯರಿಗೆ ಪುರುಷರಿಂದ ಪ್ರೋತ್ಸಾಹ ಇರುವುದರಿಂದ ಮನೆ ಒಳಗೆ ಹೊರಗೆ ಕೆಲಸ ಮಾಡಲು ಉತ್ಸಾಹವಿದೆ ಎಂದರು.

ಮಹಿಳಾ ಸಮಾಜದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಸಂಘದ ಅಭಿವೃದ್ಧಿಗೆ ಶ್ರಮಿಸಿದ ಹಾಗೂ ಸಮಾಜದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ, ದಿವಂಗತ ಡಾ, ಆಸ್ರಣ್ಣ ಅವರ ಪತ್ನಿ ಲೀಲಾವತಿ ಆಸ್ರಣ್ಣ ಅವರನ್ನು ಸ್ಮರಿಸುತ್ತಾ, ಹಾಗೂ ಸಮಾಜ ಮುಖಿಯಾಗಿರುವ ವಕೀಲ ಪ್ರಮೋದ್ ಅವರ ಪತ್ನಿ ವಿಶಾಲಿ ಪ್ರಮೋದ್, ಪತ್ರಕರ್ತೆ ರಜಿತ ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆ ನಡೆಯಿತು. ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ವೇದಿಕೆಯಲ್ಲಿ ಮಹಿಳಾ ಸಹಕಾರ ಸಂಘದ ಉಪಾಧ್ಯಕ್ಷೆ ಬಿ.ಆರ್. ಸಬಿತ, ನಿರ್ದೇಶಕರಾದ ಆಶಾ ಚಿಣ್ಣಪ್ಪ, ಯು.ಕೆ. ಪೊನ್ನಮ್ಮ, ಕುಸುಮ ಸೋಮಣ್ಣ ಜಯಲೀಲಾ ಸತೀಶ್, ಪಿ.ಕೆ. ನೀಲಮ್ಮ, ಪ್ರೇಮ ಮಂಜುನಾಥ್, ಬಿ.ಎನ್.ಭಾರತಿ, ಬಿ.ಯಶೋಧ ಹೆಚ್.ಆರ್. ಪುಷ್ಪ ವಾಸು, ಪುಷ್ಪ ಐತಪ್ಪ, ಮೆಟಿಲ್ಡಾ ಲೋಬೋ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಜಿ. ಪುಷ್ಪಲತಾ ಸೇರಿದಂತೆ ಸದಸ್ಯರುಗಳು, ಸಿಬ್ಬಂದಿಗಳು ಹಾಜರಿದ್ದರು.

ಶ್ರೀ ಗೋಪಾಲಕೃಷ್ಣ ದೇವಸ್ಥಾನ ಬ್ರಹ್ಮಕಲಶೋತ್ಸವ

ನಾಪೋಕ್ಲು, ಏ.6 (ದುಗ್ಗಳ)–ಅವಂದೂರು ಗ್ರಾಮದ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಧಾರ್ಮಿಕ ಕಾರ್ಯಕ್ರಮ ಮೇ 5 ರಿಂದ 8ರವರೆಗೆ ನೆರವೇರಲಿದೆ.

ಸಮಿತಿಯ ನಿರ್ಣಯದಂತೆ ಇಂದು ಪೂರ್ವಭಾವಿ ಸಭೆಯನ್ನು ನಡೆಸಿ ಉಪ ಸಮಿತಿಗಳನ್ನು ರಚಿಸಲಾಯಿತು. ಸಭೆಯಲ್ಲಿ ಶ್ರೀ ಗೋಪಾಲಕೃಷ್ಣ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಚೊಕ್ಕಾಡಿ ಅಪ್ಪಯ್ಯ, ಕಾರ್ಯದರ್ಶಿ ಪಟ್ಟಡ ಸುಗುಣ ಕುಮಾರ್, ಖಜಾಂಚಿ ಬೆಳ್ಯನ ಚಂದ್ರ ಪ್ರಕಾಶ್, ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು, ದೇವಸ್ಥಾನ ಜೀರ್ಣೋದ್ಧಾರದ ಮೂಲ ಸಮಿತಿ, ಪ್ರಧಾನ ಅರ್ಚಕ ದಿನೇಶ್ ಭಟ್, ಗ್ರಾಮದ ತಕ್ಕ ಮುಖ್ಯಸ್ಥರು, ಗ್ರಾಮದ ಕಾರ್ಯದರ್ಶಿ ಕಾಳೇರಮ್ಮನ ಪೂವಯ್ಯ, ಗ್ರಾಮ ಪಂಚಾಯತ್ ಸದಸ್ಯ ಊರೊಳನ ತೇಜಕುಮಾರ್, ಗ್ರಾಮದ ಪ್ರಮುಖ ದೇವಾಯಿರ ದೇವಯ್ಯ, ದೇವಾಯಿರ ದಾಮೋದರ, ದೇವಾಯಿರ ಚಂದ್ರಶೇಖರ್, ಹೊಸೂರು ಗಿರೀಶ್, ಬೆಳ್ಯನ ವಾಸುದೇವ, ಬೆಳ್ಯನ ನಾಣಯ್ಯ, ಬೆಳ್ಯನ ಪವಿತ್ರ, ಪಟ್ಟಡ ನಂದಕುಮಾರ್, ಪಟ್ಟಡ ದೀಪಕ್, ಕಾಳೇರಮ್ಮನ ಮೇದಪ್ಪ, ಕಾಳೇರಮ್ಮನ ಅಶೋಕ, ಊರೊಳನ ಮಂಜುನಾಥ್, ಪೊನ್ನಚ್ಚನ ಚಂಗಪ್ಪ, ಕಡ್ಯದ ಭವಾನಿ ಶಂಕರ್ ಕಡ್ಯದ ಪ್ರಸನ್ನ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದು ಸಲಹೆ ನೀಡಿದರು

ಇಂದು ಮಾಜಿ ಸೈನಿಕರ ಕುಂದುಕೊರತೆ ಸಭೆ

ಮಡಿಕೇರಿ, ಏ.6–ಜಿಲ್ಲೆಯ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಕುಂದುಕೊರತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತ ಪರಿಹಾರ ನೀಡುವಲ್ಲಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಏ.7ರ ಬೆಳಗ್ಗೆ 10.30 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಸಭಾಂಗಣದಲ್ಲಿ ಸಭೆ ನಡೆಯಲಿದೆ.

ಜಿಲ್ಲೆಯ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು ಈ ಸಭೆಯ ಸದುಪಯೋಗ ಪಡೆದುಕೊಳ್ಳುವಂತೆ ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಆರ್.ಶೆಟ್ಟಿ ತಿಳಿಸಿದ್ದಾರೆ.

ತ್ರೇಷಿಯಮ್ಮ ನಿಧನ



ವಿರಾಜಪೇಟೆ ಏ.6– ಪಟ್ಟಣದ ನಿವಾಸಿ ಟೇರೆಷಿಯನ್ ಪ್ರಿಂಟಿಂಗ್ ಪ್ರೆಸ್ ಮಾಲೀಕರಾದ ಪೌಲ್ ಕ್ಸೇವಿಯರ್‌ರವರ ತಾಯಿ ತ್ರೇಷಿಯಮ್ಮ (90) ಎಂಬುವರು ಬೆಂಗಳೂರಿನಲ್ಲಿರುವ ಮಗಳ ಮನೆಯಲ್ಲಿ ಸೋಮವಾರ ಮುಂಜಾನೆ ನಿಧನ ಹೊಂದಿದರು. ಪಾಲಿಬೆಟ್ಟದ ಲೂರ್ದು ಮಾತೆಯ ದೇವಾಲಯದ ಆವರಣದಲ್ಲಿ ಮೃತರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಕೂತಿನಾಡು ಗ್ರಾಮಗಳಲ್ಲಿ ಸುಗ್ಗಿ ಹಬ್ಬದ ಸಂಭ್ರಮ



ಮಡಿಕೇರಿ, ಏ.6–ಸೋಮವಾರಪೇಟೆ ತಾಲೂಕಿನ ಪುಷ್ಪಗಿರಿ ಬೆಟ್ಟ ಶ್ರೇಣಿಯ ತಪ್ಪಲಲ್ಲಿರುವ ಕೂತಿನಾಡು ವ್ಯಾಪ್ತಿಯ ಗ್ರಾಮಗಳಲ್ಲಿ ಸುಗ್ಗಿ ಹಬ್ಬದ ಸಂಭ್ರಮ ಕಳೆಗಟ್ಟಿದೆ. ಈ ವ್ಯಾಪ್ತಿಯ ಗ್ರಾಮಗಳ ಗ್ರಾಮ ದೇವತೆಯಾದ ಸಬ್ಬಮ್ಮ ದೇವಿಗೆ ಊರಿನ ಎಲ್ಲರೂ ಒಗ್ಗೂಡಿ ವರ್ಷಕ್ಕೊಮ್ಮೆ ಪೂಜೆ ಸಲ್ಲಿಸುವ ಆಚರಣೆ ತಲತಲಾಂತರದಿಂದ ನಡೆದುಕೊಂಡು ಬರುತ್ತಿದ್ದು, ಈ ಹಿನ್ನೆಲೆ ಸಬ್ಬಮ್ಮ ದೇವಿಯ ತವರು ಎಂದೇ ಕರೆಯಲ್ಪಡುವ ಸಮೀಪದ ಕೂತಿ ಗ್ರಾಮದ ಚಾವಡಿ ಕಟ್ಟೆಯಲ್ಲಿ ಸುಗ್ಗಿ ಹಬ್ಬ ನಡೆಯಿತು.

ಸುಗ್ಗಿ ವಿಧಿ ವಿಧಾನದಂತೆ ಗ್ರಾಮದಲ್ಲಿನ ಕೆಲವು ಮನೆತನದ ಸೋಡ್ಲು(ದೊಡ್ಡ ಆಕಾರದ ದೀಪ)ವನ್ನು ದೇವಿಯ ಕಟ್ಟೆಗೆ ತಂದಿಟ್ಟು, ಕಟ್ಟೆ ಸುತ್ತ ದೇವಿಯ ಹೆಸರಿನೊಂದಿಗೆ ಕುಣಿದು ಸುಗ್ಗಿ ಆಚರಿಸಲಾಯಿತು. ನಗರಳ್ಳಿಯಲ್ಲಿ ಹಗಲು ಸುಗ್ಗಿಯಂದು ನಡೆಯುವ ಸುಗ್ಗಿ ಕುಣಿತ, ಜಿಂಕೆ ಬೇಟೆ ಸಾರುವ ಕುಣಿತ, ಮಳೆ ಹಾಡು ಸೇರಿದಂತೆ ಹಲವು ಕಾರ್ಯಕ್ರಮಗಳು ಇಲ್ಲಿ ನಡೆಯುವುದು ವಿಶೇಷವಾಗಿದೆ.

ಮುಖ್ಯಮಂತ್ರಿ ಪದಕ ಪಡೆದ ಸರ್ಕಲ್ ಇನ್‌ಸ್ಪೆಕ್ಟರ್ ಶಿವನಂಜಪ್ಪ ಅವರಿಗೆ ಸನ್ಮಾನ



ಯಳಂದೂರು, ಏ.6– ಮುಖ್ಯಮಂತ್ರಿ ಪದಕ ಪಡೆದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ವೃತ್ತ ನಿರೀಕ್ಷಕ ಸಿ.ಶಿವನಂಜಶೆಟ್ಟಿ ಅವರನ್ನು ಚಾಮರಾಜನಗರ ತಾಲ್ಲೂಕಿನ ಕೋಡಿಮೋಳೆ ಗ್ರಾಮದಲ್ಲಿ ಸನ್ಮಾನಿಸಲಾಯಿತು.

ಕೋಡಿಮೋಳೆ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು, ಯಜಮಾನರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಿ.ಶಿವನಂಜಶೆಟ್ಟಿ ಅವರಿಗೆ ಶಾಲು ಹೊದಿಸಿ ಪೇಟ ತೊಡಿಸಿ ಸನ್ಮಾನಿಸಲಾಯಿತು.

ಮುಖಂಡ ಕೋಡಿಮೋಳೆ ರಾಜಶೇಖರ್ ಮಾತನಾಡಿ, ಶಿವನಂಜಶೆಟ್ಟಿ ಅವರು ಕೋಡಿ ಮೋಳೆಯಂತಹ ಕುಗ್ರಾಮದಲ್ಲಿ ಜನಿಸಿ ಶಿಕ್ಷಣ ಪಡೆದು ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಿ ಸಿಎಂ ಪದಕ ಪಡೆದಿರುವುದು ಹೆಮ್ಮೆಯ ವಿಚಾರ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿ.ಶಿವನಂಜಶೆಟ್ಟಿ, ಕಷ್ಟಪಟ್ಟು ವ್ಯಾಸಂಗ ಮಾಡಿದಾಗ ಸಾಧನೆಯ ಶಿಖರವನ್ನು ಏರಬಹುದು. ಸಿಎಂ ಚಿನ್ನದ ಪದಕ ಪಡೆದಿರುವ ತಮ್ಮನ್ನು ಗ್ರಾಮದ ಎಲ್ಲಾ ಸಮುದಾಯದವರು ಅದ್ದೂರಿಯಾಗಿ ಸನ್ಮಾನಿಸಿ ಅಭಿನಂದಿಸಿರುವುದು ಖುಷಿ ತಂದಿದೆ ಎಂದರು.

ಇದಕ್ಕೂ ಮುನ್ನ ಗ್ರಾಮದ ಗಣಪತಿ ದೇವಾಲಯಕ್ಕೆ ಸಿ.ಶಿವನಂಜಶೆಟ್ಟಿ ಅವರು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಗ್ರಾಮದ ಯುವಕರು, ಮುಖಂಡರು ಪಟಾಕಿ ಸಿಡಿಸಿ ಶಿವನಂಜ ಶೆಟ್ಟಿ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಗೋವಿಂದಶೆಟ್ಟಿ, ಪ್ರಕಾಶ್, ನಟರಾಜು, ನಾಗನಾಯ್ಕ ಆಲೂರು ಮಲ್ಲು, ರಾಜಶೇಖರ್, ಶಂಕರ್, ಹರೀಶ್, ರಂಗಸ್ವಾಮಿ, ರಾಜಶೆಟ್ಟಿ, ಜಯಶಂಕರ್, ಮಹೇಶ್, ಗೌಡಿಕೆ ಮಹೇಶ್, ಪರಶಿವಪ್ಪ, ರಮೇಶ್, ಶಿವನಾಗಪ್ಪ ಕುಮಾರ್, ಲೋಕೇಶ್, ಬಸವರಾಜು, ಪುಟ್ಟಸ್ವಾಮಿ, ರಾಜಣ್ಣ, ಭಗತ್‌ಸಿಂಗ್ ಯುವಸೇನೆ ಅಧ್ಯಕ್ಷ ಕಾಂತರಾಜು ಸೇರಿದಂತೆ ಇತರರಿದ್ದರು.

ದೇಶದಲ್ಲಿ ಕಾಂಗ್ರೆಸ್ ಬರೀ ಭ್ರಷ್ಟಾಚಾರ, ಲೂಟಿ ಮಾಡಿದೆ

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪಕ್ಷದ 47ನೇ ಸಂಸ್ಥಾಪನಾ ದಿನಾಚರಣೆ



ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿದರು.

ಚಾಮರಾಜನಗರ: ಬಿಜೆಪಿಯು ದೇಶದಲ್ಲಿ ಅಧಿಕಾರಕ್ಕೆ ಬಂದಾಗಲೆಲ್ಲ ದೇಶವೇ ಮೊದಲು ಎಂಬ ಧ್ಯೇಯವಾಕ್ಯದೊಂದಿಗೆ ಕೆಲಸ ಮಾಡುತ್ತಿದೆ. ಕಾಂಗ್ರೆಸ್ ದೇಶದಲ್ಲಿ ಅಧಿಕಾರ ಮಾಡಿರುವಾಗಲೆಲ್ಲ ಬರೀ ಭ್ರಷ್ಟಾಚಾರ, ಲೂಟಿ ಮಾಡಿ ಎಂದು ಪಕ್ಷದ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಆರೋಪಿಸಿದರು.

ನಗರದ ರಾಮಸಮುದ್ರದ ಕುಳುಮೆ ರಸ್ತೆಯಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪಕ್ಷದ 47ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ, ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಕಾಂಗ್ರೆಸ್‌ನವರು ಹೇಳುತ್ತಾರೆ ನಮ್ಮ ಪಕ್ಷದ ನಾಯಕರು ಪ್ರಾಣತ್ಯಾಗ ಮಾಡಿದ ಪ್ರತಿಫಲದಿಂದ ದೇಶಕ್ಕೆ ಸ್ವಾತಂತ್ರ್ಯ ಬಂತು ಎಂದು. ಅವರು ದೇಶದಲ್ಲಿ ಅನುಭವಿಸಿದ್ದೆ ಜಾಸ್ತಿ. ಅವರು ಕಳೆದುಕೊಂಡಿದ್ದು ಏನು ಇಲ್ಲ. ಬರೀ ಭ್ರಷ್ಟಾಚಾರ, ಲೂಟಿ ಮಾಡಿದ್ದಾರೆ ಎಂದು ದೂರಿದರು.

ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ದೇಶದ ಸಮಗ್ರತೆಗೆ, ದೇಶದ ಐಕ್ಯತೆಗೆ, ದೇಶದ ವಿಚಾರಗಳಿಗೆ ಹೆಚ್ಚಿನ ಒತ್ತು ನೀಡಿ ಆಡಳಿತ ಮಾಡಿರುವುದನ್ನು ನಾವು ಬಿಜೆಪಿ ಆಡಳಿತದಲ್ಲಿ ನೋಡಬಹುದಾಗಿದೆ. ಎಂದೆಂದಿಗೂ ಬಿಜೆಪಿ ಮೇಲೆ ಜನರ ವಿಶ್ವಾಸವಿಟ್ಟಿದ್ದಾರೆ. ಬಿಜೆಪಿ ಅಧಿಕಾರ ಬಂದರೆ ದೇಶ ಅಭಿವೃದ್ಧಿ ಆಗುತ್ತದೆ ಎಂದು ಜನರು ಬಯಸಿದ್ದಾರೆ. ಬಿಜೆಪಿ 47 ವರ್ಷಗಳಲ್ಲಿ ಅನೇಕ ಸಾಧನೆ ಮಾಡಿದೆ. ಬಿಜೆಪಿ ಇತಿಹಾಸವನ್ನು ಪಕ್ಷದ ಮುಖಂಡರು, ಕಾರ್ಯಕರ್ತರು ಮೊದಲು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಿಜೆಪಿ 1980 ಏ.6ರಂದು ಸ್ಥಾಪನೆಯಾಗಿ ಭಾರತದ ಪ್ರಮುಖ ಬಲಪಂಥೀಯ ರಾಜಕೀಯ ಪಕ್ಷವಾಗಿದ್ದು. 1951ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿ ಸ್ಥಾಪಿಸಿದ ಭಾರತೀಯ ಜನಸಂಘದ ಉತ್ತರಾಧಿಕಾರಿಯಾಗಿ ಜನತಾ ಪಕ್ಷದಿಂದ ಬೇರ್ಪಟ್ಟು ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್ ಕೃಷ್ಣ ಅಡ್ವಾಣಿ ನೇತೃತ್ವದಲ್ಲಿ ಇದು ಅಸ್ತಿತ್ವಕ್ಕೆ ಬಂದಿತು ಎಂದರು.

ಬಿಜೆಪಿ ಸಂಸ್ಥಾಪನಾ ದಿನಾಚರಣೆ ಸಹ ಸಂಯೋಜಕ ಕುಲಗಾಣ ಶಾಂತಮೂರ್ತಿ ಮಾತನಾಡಿ, ದ್ವಿಸದಸ್ಯತ್ವ ವಿವಾದದ ನಂತರ, ಮಾಜಿ ಜನಸಂಘದ ನಾಯಕರು ಹೊಸ ಪಕ್ಷವಾಗಿ ಬಿಜೆಪಿಯನ್ನು ಸ್ಥಾಪಿಸಿದರು. ಅಟಲ್ ಬಿಹಾರಿ ವಾಜಪೇಯಿ ಮೊದಲ ಅಧ್ಯಕ್ಷರಾದರು. 1984ರ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಕೇವಲ 2 ಸ್ಥಾನಗಳನ್ನು ಗೆದ್ದಿತು, ಆದರೆ ಹಿಂದುತ್ವ ಮತ್ತು ಸಾಂಸ್ಕೃತಿಕ ರಾಷ್ಟ್ರೀಯತೆಯ ಸಿದ್ಧಾಂತವನ್ನು ಬೆಳೆಸಿಕೊಂಡಿತು. ರಾಮಜನ್ಮಭೂಮಿ ಆಂದೋಲನ ಮತ್ತು ಲಾಲ್ ಕೃಷ್ಣ ಅಡ್ವಾಣಿಯವರ ರಥ ಯಾತ್ರೆಯು ಪಕ್ಷವನ್ನು ಮುಖ್ಯವಾಹಿನಿಗೆ ತಂದಿತು. 1996ರಲ್ಲಿ ವಾಜಪೇಯಿ ಮೊದಲ ಬಾರಿಗೆ ಪ್ರಧಾನಿಯಾದರು. ವಾಜಪೇಯಿ ನೇತೃತ್ವದಲ್ಲಿ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಸರ್ಕಾರವು ಪೂರ್ಣ ಅವಧಿಗೆ ಆಡಳಿತ ನಡೆಸಿದ ಮೊದಲ ಕಾಂಗ್ರೆಸ್ಸೇತರ ಸರ್ಕಾರವಾಯಿತು ಎಂದರು.

ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ ಮಾತನಾಡಿ, 2014 ರಲ್ಲಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬಂದಿತು. 2019 ರಲ್ಲೂ ಇದು ಪುನರಾವರ್ತನೆಯಾಯಿತು. ಪ್ರಸ್ತುತ, ಬಿಜೆಪಿ ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿ ಗುರುತಿಸಿಕೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಎ.ಆರ್. ಬಾಬು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಭೇಂದ್ರಪ್ಪ. ಮೂಡ್ಲಾಕೂಡು ಪ್ರಕಾಶ್ ಹೂನ್ನೂರು ಮಹದೇವಸ್ವಾಮಿ, ಮಂಡಲ ಅಧ್ಯಕ್ಷ ಕಾಡಳ್ಳಿ ಕುಮಾರ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಸಾಹಿತಿ ಕೋಡಿ ಉಗನೆ ಮಂಜು, ಜಿಲ್ಲಾ ಕಾರ್ಯದರ್ಶಿ ನಟರಾಜು ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಆನಂದ್ ಭಗೀರಥ, ಪುರುಷೋತ್ತಮ್, ರಾಮಸಮುದ್ರ ಶಿವಣ್ಣ, ಸಾಗಡೆ ಗುರುಪ್ರಸಾದ್, ಚಾಮುಲ್ ಮಾಜಿ ನಿರ್ದೇಶಕ ಕಿಲಗೆರೆ ಶಶಿ, ಮಾಜಿ ಮಂಡಲ ಅಧ್ಯಕ್ಷ ನಾಗರಾಜು ಮಾಧ್ಯಮ ಸಹಪ್ರಮುಕ್ ಮಂಜುನಾಥ್, ಸಹ ಪ್ರಮುಖ ವೀರೇಂದ್ರ ಎಂಎಸ್ ಚಂದ್ರಶೇಖರ್, ಶಿವಣ್ಣ, ಮನೋಜ್, ಉಷಾರಾಣಿ, ಮಹದೇವಮ್ಮ ರಾಜೇಂದ್ರ, ರಂಗಸ್ವಾಮಿ ಇತರರು ಹಾಜರಿದ್ದರು.

ಚಾಮರಾಜನಗರದಲ್ಲಿ ಜೈ ಭೀಮ್ ಕಪ್-2026 ಕ್ರಿಕೆಟ್ ಟೂರ್ನಮೆಂಟ್

ಕೊಳ್ಳೆಗಾಲದ 'ಭೀಮ ಫೈಟರ್ಸ್‌ಗೆ ಚಾಂಪಿಯನ್‌ಶಿಪ್ ಪಟ್ಟ



ಚಾಮರಾಜನಗರ: ಜಿಲ್ಲೆಯಲ್ಲಿಯೇ ಪ್ರಪ್ರಥಮವಾಗಿ ಜೈ ಭೀಮ್ ಕ್ರಿಕೆಟ್ ಕ್ಲಬ್ ವತಿಯಿಂದ ಆಯೋಜಿಸಲಾದ ಜಿಲ್ಲಾ ಮಟ್ಟದ "ಜೈ ಭೀಮ್ ಕಪ್–2026" ಕ್ರಿಕೆಟ್ ಪಂದ್ಯಾವಳಿ ನಗರದ ಶ್ರೀ ಸಿದ್ಧಾರ್ಥ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಭಾನುವಾರ ಯಶಸ್ವಿಯಾಗಿ ಸಮಾರೋಪಗೊಂಡಿತು.

ಮೂರು ದಿನಗಳ ಕಾಲ ನಡೆದ ಈ ಟೂರ್ನಮೆಂಟ್‌ನಲ್ಲಿ ಒಟ್ಟು 10 ತಂಡಗಳು ಭಾಗವಹಿಸಿ ಕ್ರೀಡಾಸಕ್ತರಿಗೆ ರೋಮಾಂಚನಕಾರಿ ಪಂದ್ಯಗಳನ್ನು ನೀಡಿದವು. ಅಂತಿಮ ದಿನ ನಡೆದ ಫೈನಲ್ ಪಂದ್ಯವು ವಿಶೇಷ ಆಕರ್ಷಣೆಯಾಗಿದ್ದು, ಭಾರೀ ಸಂಖ್ಯೆಯಲ್ಲಿ ಕ್ರೀಡಾಭಿಮಾನಿಗಳು ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಾಯುಪುತ್ರ ಡೆವಲಪರ್ಸ್ ಸಂಸ್ಥೆಯ ಬಿಲ್ಡರ್ ಚೆಲುವರಾಜು, ವಕೀಲ ಪ್ರಸನ್ನ ಕುಮಾರ್ ಮಾತನಾಡಿದರು.

ಖ್ಯಾತ ಉದ್ಯಮಿ ಹಾಗೂ ಸಮಾಜಮುಖಿ ಕಾರ್ಯಕರ್ತರಾದ ಶ್ರೀನಿಧಿ ಕುದಾರ್ ಎಲ್ಲಾ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಪಂದ್ಯಾವಳಿಯಲ್ಲಿ ಕೊಳ್ಳೇಗಾಲ ತಾಲೂಕಿನ "ಭೀಮ ಫೈಟರ್ಸ್" ತಂಡವು ಚಾಂಪಿಯನ್ ಪಟ್ಟಕ್ಕೇರಿದ್ದು, ಪ್ರಥಮ ಬಹುಮಾನವಾಗಿ ಟ್ರೋಫಿ ಹಾಗೂ 1 ಲಕ್ಷ ನಗದು ಬಹುಮಾನ ಪಡೆಯಿತು. ರನ್ನರ್ ಅಪ್ ಆಗಿ "ಜೈ ಭೀಮ್ ಕ್ರಿಕೆಟ್ ಕ್ಲಬ್ ಲಯನ್ಸ್" ತಂಡವು ಟ್ರೋಫಿ ಜೊತೆಗೆ 50,000 ನಗದು ಬಹುಮಾನವನ್ನು ಪಡೆಯಿತು.

ವೈಯಕ್ತಿಕ ಪ್ರಶಸ್ತಿಗಳಲ್ಲಿ ಭೀಮ ಫೈಟರ್ಸ್ ತಂಡದ ಸಂಜಯ್ "ಮ್ಯಾನ್ ಆಫ್ ದ ಮ್ಯಾಚ್" ಹಾಗೂ "ಮ್ಯಾನ್ ಆಫ್ ದ ಸೀರೀಸ್" ಪ್ರಶಸ್ತಿಗಳನ್ನು ಪಡೆದರು. ಪ್ರಶಾಂತ ಮುದ್ದು "ಬೆಸ್ಟ್ ಬ್ಯಾಟ್ಸ್‌ಮನ್" ಪ್ರಶಸ್ತಿ ಪಡೆದುಕೊಂಡರೆ, ಸಂಜು "ಬೆಸ್ಟ್ ಬೌಲರ್" ಆಗಿ ಹೊರಹೊಮ್ಮಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರಿ ನೌಕರರ ಸಂಘದ ಮಹದೇವ, ಕೆಪಿಟಿಸಿಎಲ್ ನೌಕರರ ಸಂಘದ ಅಧ್ಯಕ್ಷ ಮುರುಳಿ, ಸಿದ್ದರಾಜಪ್ಪ, ಸೋಮಶೇಖರ್, ಶಿವಪ್ರಸಾದ್, ತೇಜು, ಭರತ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕ್ರೀಡಾಕೂಟದ ಆಯೋಜಕರಾದ ಲೋಕೇಶ್, ಮಲ್ಲೇಶ್, ಹರೀಶ್, ಶಿವಕುಮಾರ್, ಸೋಮೇಶ್ವರ, ಮೋಹನ್ ಹಾಗೂ ಜೈ ಭೀಮ್ ಕ್ರಿಕೆಟ್ ಕ್ಲಬ್‌ನ ಪದಾಧಿಕಾರಿಗಳು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ಈ ಟೂರ್ನಮೆಂಟ್ ಯುವ ಕ್ರೀಡಾ ಪಟುಗಳಿಗೆ ವೇದಿಕೆ ಒದಗಿಸಿ, ಚಾಮರಾಜನಗರದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹೊಸ ಉತ್ತೇಜನ ನೀಡಿದಂತಾಯಿತು.

ಕೊಳ್ಳೆಗಾಲದ ಬಳಿ ಆಟೋದಲ್ಲಿ ಸಾಗಿಸುತ್ತಿದ್ದ ಪಡಿತರ ಅಕ್ಕಿ



ಕೊಳ್ಳೇಗಾಲ, ಏ.6– ತಾಲೂಕಿನ ತೇರಂಬಳ್ಳಿ–ಗೊಬ್ಬಳಿಪುರ ಗ್ರಾಮದ ಬಳಿ ಪ್ಯಾಸೆಂಜರ್ ಆಟೋದಲ್ಲಿ ಅಕ್ರಮವಾಗಿ 11 ಮೂಟೆಯಲ್ಲಿ ಪಡಿತರ ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ಅಗರ–ಮಾಂಬಳ್ಳಿ ಪೊಲೀಸರು ಬಂಧಿಸಿದ್ದಾರೆ.

ಟಿ.ನರಸೀಪುರ ತಾಲೂಕಿನ ಇಂಡವಾಳು ಗ್ರಾಮದ ಅಶೋಕ (41) ಬಂಧಿತ ಆರೋಪಿ. ಬಂಧಿತನಿಂದ 512 ಕೆ.ಜಿ ತೂಕದ ಪಡಿತರ ಅಕ್ಕಿಯನ್ನು ಜಪ್ತಿ ಮಾಡಿದ್ದು ಮುಂದಿನ ಕ್ರಮಕೈಗೊಂಡಿದ್ದಾರೆ.

ಈತ ಸರ್ಕಾರ ಜನರಿಗೆ ನೀಡಿರುವ ಪಡಿತರವನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ಆಟೋದಲ್ಲಿ ಟಿ.ಎನ್.ಪುರ ಕಡೆಗೆ ಸಾಗಾಣಿಕೆ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿಯಲ್ಲಿ ಆಹಾರ ನಿರೀಕ್ಷಕ ಎನ್.ಎಂ ಪ್ರಸಾದ್, ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಎಸ್ಐ ಕರಿಬಸಪ್ಪ, ಹೆಚ್.ಸಿ ಪರಶಿವಮೂರ್ತಿ, ಸಿಬ್ಬಂದಿಗಳು ಶಿವಕುಮಾರ್, ಉಸ್ಮಾನ್ ಇನ್ನಿತರರು ಭಾಗವಹಿಸಿದ್ದರು.

ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ರೋಟರಿ ಸಂಸ್ಥೆ ವತಿಯಿಂದ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 425 ಮಂದಿ ತಪಾಸಣೆ ಮಾಡಿಸಿಕೊಂಡರು. 305 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು. ರೋಟರಿ ಸಂಸ್ಥಾಪಕ ಸದಸ್ಯ ಸಿ.ವಿ.ಶ್ರೀನಿವಾಸಶೆಟ್ಟಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿದರು. ಶಿಬಿರದಲ್ಲಿ ಮಾಜಿ ಅಧ್ಯಕ್ಷ ಶ್ರೀನಿವಾಸನ್, ಎಲ್.ನಾಗರಾಜ, ಜಂಟಿ ಕಾರ್ಯದರ್ಶಿ ಜಿ.ಅಂಕಶೆಟ್ಟಿ, ಯೋಗರಾಜ್, ರೋಟರಿಯನ್ ಸಿದ್ದಮಲ್ಲಪ್ಪ ನೇಮಿರಾಜ್, ಎಸ್ಆರ್ಎಸ್ ಶ್ರೀನಿವಾಸ, ಪ್ರಭಾಕರ್, ಮಹಾದೇವಸ್ವಾಮಿ, ಸುರೇಶ್, ಮನೋಜ್, ಸವಿತಾ, ಪಿಆರ್ಒ ವಿಜಯಕಾಂತ್ ಇತರರು ಹಾಜರಿದ್ದರು.

ದಾವಣಗೆರೆ–ಬಾಗಲಕೋಟೆ ಉಪಚುನಾವಣೆ

ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ಬಿಜೆಪಿಗೇ ಸಹಾಯ ಮಾಡುತ್ತಿದ್ದಾರೆ; ಆರ್.ಅಶೋಕ್



ಬೆಂಗಳೂರು: ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಪರೋಕ್ಷವಾಗಿ ಬಿಜೆಪಿ ಪಕ್ಷಕ್ಕೆ ಸಹಾಯ ಮಾಡುತ್ತಿದ್ದಾರೆಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಒಳಗಿನ ಅಸಮಾಧಾನ, ನಾಯಕತ್ವದ ಭಿನ್ನಾಭಿಪ್ರಾಯಗಳು ಮತ್ತು ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಲ್ಲಿ ಉಂಟಾಗಿರುವ ಗೊಂದಲಗಳು ಉಪಚುನಾವಣೆಗಳಲ್ಲಿ ಪಕ್ಷಕ್ಕೆ ಹಿನ್ನಡೆಯುಂಟು ಮಾಡುತ್ತದೆ. ವಿಶೇಷವಾಗಿ ಡಿ.ಕೆ. ಶಿವಕುಮಾರ್ ತೆಗೆದುಕೊಳ್ಳುತ್ತಿರುವ ಕೆಲವು ನಿರ್ಧಾರಗಳು ಪಕ್ಷದ ಕಾರ್ಯಕರ್ತರಲ್ಲೇ ಅಸಮಾಧಾನ ಹುಟ್ಟಿಸುತ್ತಿದ್ದು, ಇದರಿಂದ ಮತಗಳ ವಿಭಜನೆ ಸಂಭವಿಸುವ ಸಾಧ್ಯತೆ ಇದೆ. ಇದು ಪರೋಕ್ಷವಾಗಿ ಬಿಜೆಪಿಗೇ ಸಹಾಯ ಮಾಡಲಿದೆ ಎಂದು ಹೇಳಿದ್ದಾರೆ.

ಇದಲ್ಲದೆ, ಕಾಂಗ್ರೆಸ್ ಒಳಜಗಳ ಹಾಗೂ ಪ್ರಾದೇಶಿಕ ನಾಯಕತ್ವದ ಸಂಘರ್ಷಗಳು ಮತದಾರರಲ್ಲಿ ಗೊಂದಲ ಉಂಟುಮಾಡುತ್ತಿವೆ. ಇದರ ಪರಿಣಾಮವಾಗಿ ಬಿಜೆಪಿಗೆ ಮತದಾರರನ್ನು ಸುಲಭವಾಗಿ ಏಕೀಕರಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದು ನೇರ ಸಹಾಯವಲ್ಲದಿದ್ದರೂ, ಕಾಂಗ್ರೆಸ್ ಒಳಗಿನ ದುರ್ಬಲತೆಗಳು ಬಿಜೆಪಿಗೆ ಲಾಭವಾಗುವಂತೆ ಮಾಡುತ್ತಿವೆ ಎಂದು ತಿಳಿಸಿದ್ದಾರೆ.

ಈ ಆರೋಪಗಳಿಗೆ ಕಾಂಗ್ರೆಸ್ ನಾಯಕರು ತೀವ್ರ ಪ್ರತಿಕ್ರಿಯೆ ನೀಡಿದ್ದು, ಬಿಜೆಪಿ ನಾಯಕರು ಚುನಾವಣೆಗೆ ಮುನ್ನ ರಾಜಕೀಯ ಲಾಭ ಪಡೆಯಲು ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ತಿರುಗೇಟು ನೀಡಿದ್ದಾರೆ.

ಡಿ.ಕೆ. ಶಿವಕುಮಾರ್ ಅವರು ಪಕ್ಷವನ್ನು ಬಲಪಡಿಸಲು ತಂತ್ರ ರೂಪಿಸುತ್ತಿದ್ದು, ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಉತ್ತಮ ಪ್ರದರ್ಶನ ನೀಡಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಪತಿಯೊಂದಿಗೆ ವೀಡಿಯೊ ಕಾಲ್‌ನಲ್ಲಿರುವಾಗಲೇ ತಮಿಳು ನಟಿ ಸುಭಾಷಿಣಿ ಆತ್ಮಹತ್ಯೆ



ಚೆನ್ನೈ: ಪತಿಯೊಂದಿಗೆ ವಿಡಿಯೋ ಕಾಲ್‌ನಲ್ಲಿರುವಾಗಲೇ ನೇಣಿಗೆ ಶರಣಾಗಿ ತಮಿಳು ನಟಿ ಸುಭಾಷಿಣಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೂಲತಃ ಶ್ರೀಲಂಕಾದವರಾಗಿರುವ ಸುಭಾಷಿಣಿ ಅಲಿಯಾಸ್ ಸಾಸ್ವಿಬಾಲಾ ಅವರು ಹಲವು ಧಾರಾವಾಹಿಗಳಲ್ಲಿ ಪೋಷಕ ನಟಿಯಾಗಿ ಹಾಗೂ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದರು. 2024ರಲ್ಲಿ ಬೆಂಗಳೂರು ಮೂಲದ ಬಿಪಿನ್ ಚಂದ್ರನ್ ಅವರನ್ನು ವಿವಾಹವಾಗಿ, ಅಲ್ಲಿಯೇ ವಾಸವಾಗಿದ್ದರು ಎಂದು ತಿಳಿದುಬಂದಿದೆ.

ಸಿನಿಮಾ ಚಿತ್ರೀಕರಣದ ಹಿನ್ನೆಲೆ ಚೆನ್ನೈನ ಪೋರೂರು ಬಳಿಯ ಅಯ್ಯಪ್ಪ ತಂಗಲ್‌ನಲ್ಲಿರುವ ಅಪಾರ್ಟ್ಮೆಂಟ್‌ವೊಂದನ್ನು ಬಾಡಿಗೆ ಪಡೆದಿದ್ದರು. ಮಾ.3ಕ್ಕೆ ಆ ಮನೆಗೆ ಬಂದಿದ್ದರು. ಪೊಲೀಸರ ಮಾಹಿತಿ ಪ್ರಕಾರ, ಏ.5ರ ರಾತ್ರಿ ತಮ್ಮ ಅಪಾರ್ಟ್ಮೆಂಟ್‌ನಲ್ಲಿ ನಟಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಆತ್ಮಹತ್ಯೆಗೂ ಮುನ್ನ ತಮ್ಮ ಪತಿಯೊಂದಿಗೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ್ದು, ಈ ವೇಳೆ ಇಬ್ಬರ ನಡುವೆ ವಾಗ್ವಾದ ನಡೆದಿದೆ. ವಿಡಿಯೋ ಕಾಲ್‌ನಲ್ಲಿ ಇರುವಾಗಲೇ ನೇಣಿಗೆ ಶರಣಾಗಿದ್ದಾರೆ. ಕೂಡಲೇ ಅವರ ಪತಿ ಅಪಾರ್ಟ್ಮೆಂಟ್‌ನ ಸಿಬ್ಬಂದಿಗೆ ಕರೆ ಮಾಡಿ, ಮಾಹಿತಿ ನೀಡಿದ್ದಾರೆ.

ಸಿಬ್ಬಂದಿ ಪೋರೂರು ಪೊಲೀಸರಿಗೆ ಮಾಹಿತಿ ನೀಡಿದ್ದು, ಕೂಡಲೇ ಸ್ಥಳಕ್ಕೆ ಧಾವಿಸಿದ್ದಾರೆ. ಅವರನ್ನು ಕೆಳಗಿಳಿಸಿ, ಸರ್ಕಾರಿ ಆಸ್ಪತ್ರೆಗೆ ರವಾನಿಸಿದರೂ ಕೂಡ ಅವರನ್ನು ಉಳಿಸಿಕೊಳ್ಳಲಾಗಲಿಲ್ಲ. ಸದ್ಯ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಕೌಟುಂಬಿಕ ಕಲಹದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಶಂಕಿಸಲಾಗಿದೆ.

ವರಕೋಡು ಗುಡ್ಡದಲ್ಲಿ ಬೆಂಕಿ; ಕಿಡಿಗೇಡಿಗಳ ಕೃತ್ಯಕ್ಕೆ ಸಸ್ಯ ಸಂಪತ್ತು, ಪ್ರಾಣಿ–ಪಕ್ಷಿ ಸಂಕುಲ ಬೆಂಕಿಗಾಹುತಿ



ವರಕೋಡು ಗುಡ್ಡದಲ್ಲಿ ಸೋಮವಾರ ರಾತ್ರಿ ಬೆಂಕಿ ಉರಿಯುತ್ತಿರುವುದು.

ಮೈಸೂರು,ಏ.6(ಪಿಎಂ)– ವರಕೋಡು ಗುಡ್ಡದಲ್ಲಿ ಸೋಮವಾರ ಸಂಜೆ ಬೆಂಕಿ ಅವಘಡ ಸಂಭವಿಸಿ ಸಾಕಷ್ಟು ಸಸ್ಯ ಸಂಪತ್ತು ಬೆಂಕಿಗಾಹುತಿಯಾಗಿದ್ದು, ಕಿಡಿಗೇಡಿಗಳು ಹಚ್ಚಿದ ಬೆಂಕಿಗೆ ಅಪಾರ ಪ್ರಮಾಣದ ಪಕ್ಷಿ ಪ್ರಾಣಿಗಳು ಸುಟ್ಟು ಭಸ್ಮವಾಗಿರುವ ಸಾಧ್ಯತೆ ಇದೆ.

ಅಲ್ಲದೆ, ಗುಡ್ಡಕ್ಕೆ ರಸ್ತೆ ಇಲ್ಲದ ಕಾರಣ ಅಗ್ನಿಶಾಮಕ ಸಿಬ್ಬಂದಿ ವಾಹನಗಳೊಂದಿಗೆ ಸ್ಥಳಕ್ಕೆ ಹೋದರೂ ಪ್ರಯೋಜನವಾಗದೇ ವಾಪಸ್ಸು ಮರಳಿದ್ದಾರೆ. ಕೊನೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕೌಂಟರ್ ಫೈರ್ ತಂತ್ರದ ಮೂಲಕ ಬೆಂಕಿ ನಿಯಂತ್ರಿಸಿ ಅಗ್ನಿ ಹಬ್ಬದಂತೆ ಕಾರ್ಯಾಚರಣೆ ನಡೆಸಿದ್ದಾರೆ.

ಇಂತಹ ಗುಡ್ಡದಲ್ಲಿ ಬೆಂಕಿ ಅನಾಹುತ ಸಂಭವಿಸಿದಾಗ, ಸ್ಥಳಕ್ಕೆ ಧಾವಿಸಿ ಅಗ್ನಿ ನಂದಿಸುವ ಕಾರ್ಯಾಚರಣೆ ನಡೆಸುವಂತಹ ಸೌಲಭ್ಯ–ಸಲಕರಣೆ ಇಲ್ಲದಿರುವುದು ದುರಂತವೇ ಸರಿ ಎಂದು ಪ್ರಜ್ಞಾವಂತ ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಕಾಡ್ಗಿಚ್ಚು ವ್ಯಾಪಕವಾಗಿ ಹರಡಿ ಅದೆಷ್ಟು ಜೀವ ಸಂಕುಲ ನಾಶವಾಗಿರಬೇಕೆಂದು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅರಣ್ಯ ಇಲಾಖೆ ಡಿಆರ್‌ಎಫ್‌ಓ ಮಹೇಶ್, ವರಕೋಡು ಗುಡ್ಡದಲ್ಲಿ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಇದರ ಪರಿಣಾಮ ಬೆಂಕಿ ವ್ಯಾಪಿಸಿದೆ. ಸಂಜೆ ಸುಮಾರು 6ರ ವೇಳೆಗೆ ಕಿಡಿಗೇಡಿಗಳು ಬೆಂಕಿ ಹಚ್ಚಿರಬೇಕು. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿ ಅರಣ್ಯ ಇಲಾಖೆ ಸಿಬ್ಬಂದಿ ಕೌಂಟರ್ ಫೈರ್ ತಂತ್ರದ ಮೂಲಕ ಬೆಂಕಿ ಹರಡದಂತೆ ನಿಯಂತ್ರಿಸಲಾಗಿದೆ. ಗುಡ್ಡಗಾಡು ಹಾಗೂ ರಸ್ತೆ ಸಂಪರ್ಕ ಇಲ್ಲದ ಹಿನ್ನೆಲೆಯಲ್ಲಿ ಇದರ ಹೊರತಾಗಿ ಬೇರೆ ಆಯ್ಕೆ ಇಲ್ಲ. ಈಗ ಬಹುತೇಕ ನಿಯಂತ್ರಣಕ್ಕೆ ಬಂದಿದ್ದು, ಕೆಲ ಹೊತ್ತಿನಲ್ಲಿ ಸಂಪೂರ್ಣ ನಿಯಂತ್ರಣವಾಗಲಿದೆ. ನಮ್ಮ ಸಿಬ್ಬಂದಿ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ ಎಂದು ತಿಳಿಸಿದರು.

ಬಿಕ್ಲು ಶಿವ ಕೊಲೆ ಕೇಸ್: ಭೈರತಿ ಬಸವರಾಜ್‌ಗೆ ಇನ್ನು ಸಂಕಷ್ಟ



ಬೆಂಗಳೂರು, ಏ. 6: ರೌಡಿಶೀಟರ್ ಬಿಕ್ಲು ಶಿವ ಕೊಲೆ ಕೇಸ್‌ನಲ್ಲಿ ಬಂಧನಕ್ಕೊಳಗಾಗಿದ್ದ ಕೆ.ಆರ್ ಪುರಂ ಶಾಸಕ ಭೈರತಿ ಬಸವರಾಜ್ ಇತ್ತೀಚೆಗೆ ಜಾಮೀನು ಮೇಲೆ ಬಿಡುಗಡೆಯಾಗಿದ್ದರು. ಇದೀಗ ಜಾಮೀನು ರದ್ದುಪಡಿಸುವಂತೆ ಕೋರಿ ಸಿಐಡಿ ಪೊಲೀಸರಿಂದ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಆ ಮೂಲಕ ಭೈರತಿ ಬಸವರಾಜ್‌ಗೆ ಮತ್ತೆ ಸಂಕಷ್ಟ ಶುರುವಾಗಿದೆ.

ರೌಡಿಶೀಟರ್ ಬಿಕ್ಲು ಶಿವ ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ 5ನೇ ಆರೋಪಿಯಾಗಿರುವ ಕೆ.ಆರ್.ಪುರಂ ಬಿಜೆಪಿ ಶಾಸಕ ಭೈರತಿ ಬಸವರಾಜ್ 6 ತಿಂಗಳ ಬಳಿಕ ಬಲೆಗೆ ಬಿದ್ದಿದ್ದರು. ಕೆಂಪೇಗೌಡ ಏರ್‌ಪೋರ್ಟ್‌ನಲ್ಲಿ ರಾತ್ರಿ ಪೊಲೀಸರು ಭೈರತಿಯನ್ನು ಬಂಧಿಸಿದ್ದರು. ನಂತರ ಸಿಐಡಿಗೆ ಹಸ್ತಾಂತರಿಸಲಾಗಿತ್ತು.

7 ದಿನ ಸಿಐಡಿ ಕಸ್ಟಡಿಗೆ ನೀಡಿ 42ನೇ ಎಸಿಜೆಎಂ ಕೋರ್ಟ್ ಜಡ್ಜ್ ಆದೇಶ ಹೊರಡಿಸಿತ್ತು. 7 ದಿನಗಳ ಕಾಲ ಸಿಐಡಿ ಅಧಿಕಾರಿಗಳು 258 ಪ್ರಶ್ನೆಗಳನ್ನು ಮಾಡಿದ್ದರು. ಈ ವೇಳೆ ಬಹುತೇಕ ಪ್ರಶ್ನೆಗಳಿಗೆ ಶಾಸಕರು ಗೊತ್ತಿಲ್ಲ ಎಂದು ಉತ್ತರವನ್ನೇ ನೀಡಿದ್ದರು. ಇದರ ಜೊತೆಗೆ ಶಾಸಕರ ಎರಡು ಮೊಬೈಲ್‌ಗಳು ಕೂಡ ಸಿಐಡಿ ಜಪ್ತಿ ಮಾಡಿತ್ತು. ಮಾರ್ಚ್ 13ರಂದು ಷರತ್ತುಬದ್ಧ ಜಾಮೀನು ಮಂಜೂರು ಬೆನ್ನಲ್ಲೇ ಸೆಂಟ್ರಲ್ ಜೈಲಿನಿಂದ ಶಾಸಕ ಭೈರತಿ ಬಸವರಾಜ್ ಬಿಡುಗಡೆ ಆಗಿದ್ದರು.

ಪ್ರಕರಣದ ಹಿನ್ನೆಲೆ: ಕಿತ್ತಗನೂರಿನ ಜಮೀನು ವಿವಾದದ ಹಿನ್ನೆಲೆ ಕಳೆದ ವರ್ಷ ಜುಲೈ 15ರಂದು ದುಷ್ಕರ್ಮಿಗಳ ಗುಂಪೊಂದು ಮಾಜಿ ರೌಡಿ ಶೀಟರ್ ಬಿಕ್ಲು ಶಿವನನ್ನು ಮಚ್ಚು, ಲಾಂಗ್‌ಗಳಿಂದ ಅಟ್ಯಾಕ್ ಮಾಡಿ ಕೊಲೆ ಮಾಡಿತ್ತು. ಮೃತನ ತಾಯಿ ಭೈರತಿ ಬಸವರಾಜ್ ಸೇರಿದಂತೆ ಹಲವರ ಮೇಲೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಾಗುತ್ತಿದ್ದಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ಬಂಧನದಿಂದ ಮಧ್ಯಂತರ ರಕ್ಷಣೆ ಪಡೆದ ಭೈರತಿ ಬಸವರಾಜ್ ಪೊಲೀಸರ ಮುಂದೆ ತನಿಖೆಗೆ ಹಾಜರಾಗಿದ್ದರು. ಆದರೆ ಪ್ರಯಾಗ್ ರಾಜ್‌ಗೆ ತನ್ನ ಜೊತೆಯಲ್ಲೇ ಪ್ರಯಾಣಿಸಿದ ಎ1 ಆರೋಪಿ ಜಗ್ಗ ಅಲಿಯಾಸ್ ಜಗದೀಶ್ ಯಾರೆಂಬುದೇ ಗೊತ್ತಿಲ್ಲವೆಂದು ಹೇಳಿಕೆ ನೀಡಿದ್ದರು. ಈ ವೇಳೆ ಭೈರತಿ ಬಸವರಾಜ್ ತಗ್ಲಾಕಿಕೊಂಡಿದ್ದರು.

ಮಣ್ಣಿನ ರಕ್ಷಣೆಯೊಂದಿಗೆ ಕೃಷಿ ಉದ್ಯಮವಾದರೆ ರೈತರ ಬದುಕು ಹಸನು

ರಾಜ್ಯ ರೈತ ಕಲ್ಯಾಣ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅಭಿಪ್ರಾಯ

ನಂಜನಗೂಡು, ಏ.6– ಕೃಷಿ ಕ್ಷೇತ್ರ ಉದ್ಯಮವಾಗದ ಹೊರತು ರೈತರಿಗೆ ಬದುಕು ಹಸನಾಗದು ಎಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅಭಿಪ್ರಾಯಿಸಿದರು.

ತಾಲೂಕಿನ ಅಳಗಂಚಿಪುರ ಗ್ರಾಮದಲ್ಲಿ ನಡೆದ ರೈತ ಕಲ್ಯಾಣ ಸಂಘದ ನಾಮಫಲಕ ಅನಾವರಣ ಹಾಗೂ ಮಣ್ಣು ರಕ್ಷಿಸಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯಯುತವಾದ ಮಣ್ಣಿನಿಂದ ಮಾತ್ರ ಮನುಕುಲದ ರಕ್ಷಣೆ ಸಾಧ್ಯ. ಹಾಗೆಯೇ ಕೃಷಿ ಕ್ಷೇತ್ರವೂ ಇತರೆ ಉದ್ಯಮದಂತೆ ವ್ಯವಸ್ಥಿತವಾಗಿ ಅಭಿವೃದ್ಧಿಯಾಗುವ ಅಗತ್ಯವಿದೆ ಎಂದರು.

ರೈತರಲ್ಲಿ ಕೃಷಿ ಕ್ಷೇತ್ರದಲ್ಲಿನ ಜ್ಞಾನ ಹಾಗೂ ಚೈತನ್ಯದ ಕೊರತೆ ಇದೆ. ತಾವು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಸ್ವತಃ ಕಲ್ಪಿಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಪರಿಣಾಮ ಕಳೆದ 25 ವರ್ಷಗಳಲ್ಲಿ 110 ಲಕ್ಷ ಕೋಟಿಗಿಂತ ಹೆಚ್ಚು ನಷ್ಟ ಅನುಭವಿಸಿದ್ದಾರೆ. ಸಾಧ್ಯವಾದಷ್ಟು ಪ್ರಕೃತಿ ರಕ್ಷಣೆಯೊಂದಿಗೆ ರಾಸಾಯನಿಕ ಮುಕ್ತ ಕೃಷಿ ಮಾಡುವುದು ಒಳ್ಳೆಯದು. ಸರಳವಾಗಿ ಹೇಳುವುದಾದರೆ ಪಾರಂಪರಿಕ ಸಾವಯವ ಕೃಷಿ ಪದ್ಧತಿಗೆ ಮರಳಬೇಕು. ಕಡಿಮೆ ಖರ್ಚಿನಲ್ಲಿ ಅಧಿಕ ಬೆಳೆ ಉತ್ಪಾದಿಸುವುದರೊಂದಿಗೆ ಮಾರುಕಟ್ಟೆ ಜ್ಞಾನವನ್ನೂ ಹೊಂದಬೇಕು ಎಂದು ಸಲಹೆ ನೀಡಿದರು.



ನಂಜನಗೂಡು ತಾಲೂಕಿನ ಅಳಗಂಚಿಪುರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ನಾಮಫಲಕ ಅನಾವರಣ ಹಾಗೂ ಮಣ್ಣು ರಕ್ಷಿಸಿ ಅಭಿಯಾನ ನೆರವೇರಿತು. ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸದಾನಂದ ಸೇರಿದಂತೆ ಹಲವು ಮುಖಂಡರು ಚಿತ್ರದಲ್ಲಿದ್ದಾರೆ.

ಸಮೃದ್ಧ ಸಾಂಬಾರ ಪದಾರ್ಥ, ರತ್ನಗಳ ವ್ಯಾಪಾರ, ಜವಳಿ, ಕೃಷಿ ಮತ್ತು ಕರಕುಶಲ ವಸ್ತುಗಳಿಗೆ ಹೆಸರುವಾಸಿಯಾಗಿದ್ದ ಭಾರತವು 1750ನೇ ಇಸವಿಯವರೆಗೆ ವಿಶ್ವದ ಅತ್ಯಂತ ಶ್ರೀಮಂತ ದೇಶವಾಗಿತ್ತು. ಬ್ರಿಟಿಷರ ಆಳ್ವಿಕೆಯ ಮೊದಲು ಜಗತ್ತಿನ ಚಿನ್ನದ ಹಕ್ಕಿ ಎಂದು ಗುರುತಿಸಿಕೊಂಡಿತ್ತು. ಅಷ್ಟೊಂದು ಸಮೃದ್ಧವಾಗಿದ್ದ ನಮ್ಮ ದೇಶದ ಸಂಪತ್ತನ್ನು ಬ್ರಿಟಿಷರು ಲೂಟಿ ಮಾಡಿದರು. ಬ್ರಿಟನ್ ಎಕನಾಮಿಸ್ಟ್ ಪ್ರಕಾರ 150 ವರ್ಷಗಳಲ್ಲಿ 55 ಟ್ರಿಲಿಯನ್ ಡಾಲರ್‌ಗೂ ಹೆಚ್ಚು ಸಂಪತ್ತನ್ನು ಕೊಳ್ಳೆ ಹೊಡೆದಿದ್ದಾರೆ. ಆ ಸಂಪತ್ತು ನಮ್ಮಲ್ಲೇ ಉಳಿದಿದ್ದರೆ ನಮ್ಮ ದೇಶ ಹಾಗೂ ಅನ್ನದಾತರು ಸುಸ್ಥಿತಿಯಲ್ಲಿರುತ್ತಿದ್ದರು ಎಂದರು.

ನಮ್ಮ ದೇಶದಲ್ಲಿ ಅಪಾರ ಸಂಪತ್ತು ಅಡಗಿರುವುದು ಮಣ್ಣಿನಲ್ಲೇ ಹೊರತು ಯಾವುದೇ ಕೈಗಾರಿಕೆಗಳು, ಐಟಿಬಿಟಿ ಕಂಪನಿಗಳಲ್ಲಿ ಅಲ್ಲ ಎಂಬ ಸತ್ಯವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಈ ನಾಡಿನ ಮಣ್ಣಿನ ಮಹತ್ವ ಮರೆತವರ ಕಣ್ತೆರೆಸಬೇಕು. ಆರೋಗ್ಯಯುತ ಮಣ್ಣಿನ ಸಂರಕ್ಷಣೆಗೆ ಇಡೀ ವ್ಯವಸ್ಥೆ ಮುಂದಾಗಿ, ರೈತರಿಗೆ ನೆರವಾಗಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸದಾನಂದ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗ್ರಾಮದ ಮುಖಂಡರು, ಯಜಮಾನರು, ರೈತ ಕಲ್ಯಾಣ ಸಂಘದ ರಾಜ್ಯ, ಜಿಲ್ಲೆ ಮತ್ತು ತಾಲೂಕಿನ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

> ರೈತರ ಸಮಸ್ಯೆ ಪರಿಹರಿಸಲು ಸರ್ಕಾರ ಬದ್ಧವಾಗಿದೆ. ಕಾಡಂಚಿನ ತಾಲೂಕುಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷದಿಂದ ಪ್ರಾಣಹಾನಿ ಹಾಗೂ ಬೆಳೆಹಾನಿಯಾಗುತ್ತಿದೆ. ವನ್ಯಪ್ರಾಣಿಗಳ ತಡೆಗೆ ಬ್ಯಾರಿಕೇಡ್ ಅಳವಡಿಸುವುದರೊಂದಿಗೆ ಕಾಡಂಚಿನ ಭಾಗದಲ್ಲಿ ಪರ್ಯಾಯ ಬೆಳೆ ಬೆಳೆಯುವ ಬಗ್ಗೆಯೂ ಅರಿವು ಮೂಡಿಸಲಾಗುತ್ತಿದೆ. ಸರ್ಕಾರದೊಂದಿಗೆ ರೈತರೂ ಸಹಕರಿಸಬೇಕು. ನಮ್ಮ ನಂಜನಗೂಡು ತಾಲೂಕು ರೈತರ ಎಲ್ಲಾ ಸಮಸ್ಯೆಗಳನ್ನು ಆದ್ಯತೆ ಅನುಸಾರ ಸರ್ಕಾರ ಪರಿಹರಿಸಲಿದೆ. ಹಾಗೆಯೇ ಸರ್ಕಾರದ ಯೋಜನೆಗಳನ್ನು ಅನ್ನದಾತರಿಗೆ ತಲುಪಿಸುವಲ್ಲಿ ರೈತ ಸಂಘಗಳ ಪಾತ್ರವೂ ಮುಖ್ಯವಾಗಿದೆ.
>
> – ದರ್ಶನ್ ಧ್ರುವನಾರಾಯಣ್, ಶಾಸಕರು, ನಂಜನಗೂಡು ಕ್ಷೇತ್ರ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ನೃತ್ಯ ಕಲಾವಿದ ಪ್ರೊ.ಕೆ.ರಾಮಮೂರ್ತಿ ರಾವ್ ಅವರಿಗೆ ಅಭಿನಂದನೆ



ಭಾರತೀಯ ನೃತ್ಯಕಲಾ ಪರಿಷತ್, ನಾಟ್ಯಾಚಾರ್ಯ ಕೆ.ರಾಮಮೂರ್ತಿರಾವ್ ಅವರ ಶಿಷ್ಯವೃಂದದ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಕೆ.ರಾಮಮೂರ್ತಿರಾವ್ ದಂಪತಿಯನ್ನು ಅಭಿನಂದಿಸಿ, ಗೌರವಿಸಲಾಯಿತು.

ಮೈಸೂರು,ಏ.6(ಎಸ್‌ಪಿಎನ್)– ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ನೃತ್ಯ ಕಲಾವಿದ ಪ್ರೊ.ಕೆ.ರಾಮಮೂರ್ತಿ ರಾವ್ ದಂಪತಿಯನ್ನು ಮೈಸೂರು ಭಾರತೀಯ ನೃತ್ಯಕಲಾ ಪರಿಷತ್ ವತಿಯಿಂದ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಅಭಿನಂದಿಸಿದರು.

ಮೈಸೂರು ಕುವೆಂಪುನಗರ ಗಾನಭಾರತಿ ವೀಣೆಶೇಷಣ್ಣ ಭವನದಲ್ಲಿ ಭಾರತೀಯ ನೃತ್ಯಕಲಾ ಪರಿಷತ್, ನಾಟ್ಯಾಚಾರ್ಯ ಕೆ.ರಾಮಮೂರ್ತಿರಾವ್ ಅವರ ಶಿಷ್ಯವೃಂದದ ಸಹಯೋಗದೊಂದಿಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ಅಭಿನಂದಿಸಿ, ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಬಿ.ನಿರಂಜನ ಮೂರ್ತಿ ಅವರು, ಕಳೆದ 40 ವರ್ಷಗಳಿಂದ ನೃತ್ಯ ಕಲಾಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಜೊತೆಗೆ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿ, ಅಪಾರ ಶಿಷ್ಯವೃಂದವನ್ನು ಹುಟ್ಟುಹಾಕಿರುವ ಕೀರ್ತಿ ಪ್ರೊ.ರಾಮಮೂರ್ತಿ ರಾವ್ ಅವರಿಗೆ ಸಲ್ಲಿಸುತ್ತದೆ. ನಾನು ನಂಜನಗೂಡಿನ ಜೆಎಸ್‌ಎಸ್‌ನಲ್ಲಿ ಕೆಲಸ ಮಾಡುವಾಗ, ಅವರು ನನ್ನೊಂದಿಗೆ ಬೇರೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಕಳೆದ 26 ವರ್ಷಗಳಿಂದ ಅವರ ಕಲಾ ಚಟುವಟಿಕೆಗಳನ್ನು ನೋಡಿ ಆನಂದಿಸಿದ್ದೇನೆ ಎಂದರು.

ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿ, ಪ್ರವೃತ್ತಿಯಲ್ಲಿ ನೃತ್ಯ ಕಲಾವಿದರಾಗಿ ಅಪಾರ ಶಿಷ್ಯವೃಂದ ಅವರ ಹಿಂದಿದೆ. ಅವರಿಗೆ ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾದ ಸಂದರ್ಭದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಖುಷಿಪಟ್ಟರಲ್ಲದೆ, ಅವರು ಕರ್ತವ್ಯ ನಿರ್ವಹಿಸಿದ ಜೆಎಸ್‌ಎಸ್ ಕಾಲೇಜುಗಳಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿ, ಗೌರವ ಸಲ್ಲಿಸುವಂತೆ ಸೂಚಿಸಿದ ಪ್ರಸಂಗವನ್ನು ಸಭೆಗೆ ತಿಳಿಸಿದರು.

ಈ ವೇಳೆ ನಾಟ್ಯಾಚಾರ್ಯ ಕೆ.ರಾಮಮೂರ್ತಿರಾವ್ ಅವರ ಶಿಷ್ಯವೃಂದ ಪರವಾಗಿ ವಿದುಷಿ ಸಬೀನಾ ಲೋಹಿಯಾ, ವಿದುಷಿ ಪದ್ಮನಿ ಅಚ್ಚಿ ಅವರ ಶಿಷ್ಯವೃಂದದಿಂದ ನೃತ್ಯ ನಮನ ಸಲ್ಲಿಸಲಾಯಿತು. ಈ ವೇಳೆ ಭಾರತೀಯ ನೃತ್ಯಕಲಾ ಪರಿಷತ್ ಅಧ್ಯಕ್ಷರಾದ ವಿದುಷಿ ಡಾ.ಶೀಲಾಶ್ರೀಧರ್, ನೃತ್ಯಾಲಯ ಟ್ರಸ್ಟ್ ನಿರ್ದೇಶಕಿ ವಿದುಷಿ ಡಾ.ತುಳಸಿ ರಾಮಚಂದ್ರ, ಹಿರಿಯ ಕಲಾವಿದರಾದ ಡಾ.ಮೈಸೂರು ಮಂಜುನಾಥ್, ಹಿರಿಯವೈದ್ಯರಾದ ಡಾ.ಸಿ.ಜಿ.ಪ್ರಹ್ಲಾದ ರಾವ್, ವಿದುಷಿ ಡಾ.ಕೃಪಾಫಡ್ಕೆ, ವಿದುಷಿ ಡಾ.ಕುಮುದಿನಿ ಅಚ್ಚಿ, ವಿದುಷಿ ಎಂ.ಎನ್.ಸುಶ್ಮಿತಾ ಸೇರಿದಂತೆ ಇತರರಿದ್ದರು.

ಅಭಿನಂದನೆ



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡ ನಿರ್ವಹಣಾ ಸಮಿತಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಎ.ಸಿ.ಮಂಜುನಾಥ್ ಅವರಿಗೆ ಹೆಚ್ ಗಿರೀಶ್ ಗೌಡ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಶಿವಶಂಕರ್, ಬಸವರಾಜು, ಶಿವು, ರವಿ, ಮಹದೇವ, ಕೃಷ್ಣ, ಸೂರಿ ಇತರರು ಉಪಸ್ಥಿತರಿದ್ದರು.

ಹಾರ್ಮುಜ್ ಜಲಸಂಧಿ ದಾಟಿದ ಭಾರತದ 8ನೇ ಎಲ್‌ಪಿಜಿ ಸಾಗಣೆ ನೌಕೆ ಗ್ರೀನ್ ಆಶಾ

ಟೆಹ್ರಾನ್: ಭಾರತ ಧ್ವಜ ಹೊಂದಿರುವ ಗ್ರೀನ್ ಆಶಾ ನೌಕೆ ಹಾರ್ಮುಜ್ ಜಲಸಂಧಿ ಯಶಸ್ವಿಯಾಗಿ ದಾಟಿದೆ ಎಂದು ಅಧಿಕೃತ ಮೂಲಗಳು ಇಂದು ಸೋಮವಾರ ಎಎನ್‌ಐ ಸುದ್ದಿಸಂಸ್ಥೆಗೆ ತಿಳಿಸಿವೆ. ಫೆಬ್ರವರಿ 28ರಂದು ಇರಾನ್ ವಿರುದ್ಧ ಇಸ್ರೇಲ್–ಅಮೆರಿಕ ಯುದ್ಧ ಆರಂಭವಾದ ನಂತರ ಈ ಮಾರ್ಗವನ್ನು ದಾಟಿದ ಎಂಟನೇ ಎಲ್‌ಪಿಜಿ ಸಾಗಣೆ ನೌಕೆ ಇದಾಗಿದೆ.

ಇದಕ್ಕೂ ಮೊದಲು, ಗ್ರೀನ್ ಸಾನ್ವಿ ಎಂಬ ಮತ್ತೊಂದು ಭಾರತ ಧ್ವಜ ಹೊಂದಿರುವ ದೊಡ್ಡ ಇಂಧನ ಹೊತ್ತ ನೌಕೆ ಕಳೆದ ಶುಕ್ರವಾರ ರಾತ್ರಿ ಸುಮಾರು 46,650 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ ಸಾಗಿಸುತ್ತಾ ಸುರಕ್ಷಿತವಾಗಿ ಹಾರ್ಮುಜ್ ಜಲಸಂಧಿ ದಾಟಿತ್ತು. ಮಾರ್ಚ್ 28ರಂದು, 47,000 ಮೆಟ್ರಿಕ್ ಟನ್ ಎಲ್ ಪಿಜಿ ಸರಕು ಗುಜರಾತಿನ ಜಾಮ್ನಗರದ ವಡಿನಾರ್ ಟರ್ಮಿನಲ್ ತಲುಪಿತ್ತು. ಎಂಟಿ ಜಾಗ್ ವಸಂತ್ ನೌಕೆ ತನ್ನ ಸರಕುಗಳನ್ನು ಸಮುದ್ರದಲ್ಲಿಯೇ ಮತ್ತೊಂದು ನೌಕೆಗೆ ವರ್ಗಾಯಿಸುವ ಹಡಗಿನಿಂದ ಹಡಗಿಗೆ ಕಾರ್ಯಾಚರಣೆ ನಡೆಸಲು ನಿರ್ಧರಿಸಲಾಗಿದೆ.

ಸ್ಕೇಟಿಂಗ್ ಪಟು ರಿಷಿಕೇಶ್‌ಗೆ ಅವನೀ ಟ್ರಸ್ಟ್ ಆರ್ಥಿಕ ನೆರವು



ಮೈಸೂರಿನ ಅವನೀ ಟ್ರಸ್ಟ್ ವತಿಯಿಂದ ಸ್ಕೇಟಿಂಗ್ ಪಟು ರಿಷಿಕೇಶ್‌ಗೆ ಆರ್ಥಿಕ ನೆರವು ನೀಡಿ, ಅಭಿನಂದಿಸಲಾಯಿತು.

ಮೈಸೂರು, ಏ.6– ಮುಂದಿನ ತಿಂಗಳು ಇಂಡೋನೇಷಿಯಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲಿರುವ ಬೆಂಗಳೂರಿನ ಪ್ರವೀಣ್ ಕುಮಾರ್ ಹಾಗೂ ಯಶಸ್ವಿನಿ ದಂಪತಿ ಪುತ್ರ ರಿಷಿಕೇಶ್ ಪ್ರಯಾಣಕ್ಕೆ ಮೈಸೂರು ಮೂಲದ ಅವನೀ ಟ್ರಸ್ಟ್ ಆರ್ಥಿಕ ನೆರವು ನೀಡಿದೆ.

ಮೈಸೂರು ತಾಲೂಕಿನ ಜಯಪುರ ಹೋಬಳಿ, ಮೂಡಹಳ್ಳಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಪೋಷಕರೊಂದಿಗೆ ಆಗಮಿಸಿದ್ದ ರಿಷಿಕೇಶ್‌ನ ಬ್ಯಾಂಕ್ ಖಾತೆಗೆ 50 ಸಾವಿರ ಸಹಾಯ ಧನವನ್ನು ವರ್ಗಾವಣೆ ಮಾಡಿ, ಆತನನ್ನು ಅಭಿನಂದಿಸಿ ಶುಭ ಕೋರಲಾಯಿತು.

ಈ ವೇಳೆ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಸಂಗಮೇಶ್, ಅಂತರರಾಷ್ಟ್ರೀಯ ಸ್ಕೇಟಿಂಗ್ ಸ್ಪರ್ಧೆಗೆ ಭಾರತದಿಂದ ಬಡಕುಟುಂಬದ ರಿಷಿಕೇಶ್ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಆತನ ಪ್ರಯಾಣಕ್ಕೆ 4 ಲಕ್ಷ ರೂ. ಬೇಕಿದ್ದು, ಪೋಷಕರು ದಾನಿಗಳ ಮೊರೆ ಹೋಗಿದ್ದಾರೆ. ಈ ವಿಷಯ ತಿಳಿದು ನಮ್ಮ ಟ್ರಸ್ಟ್‌ನ 'ಅಭಯ' ಕಾರ್ಯಕ್ರಮದಡಿ 50 ಸಾವಿರ ಸಹಾಯ ಧನ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಯುವ ಪ್ರತಿಭೆ ರಿಷಿಕೇಶ್, ಕಠಿಣ ಪರಿಶ್ರಮ ಹಾಗೂ ನಿರಂತರ ಅಭ್ಯಾಸದಿಂದ ಈ ಅವಕಾಶ ಗಳಿಸಿದ್ದಾನೆ. ಆದರೆ ಆರ್ಥಿಕ ಸಮಸ್ಯೆಯಿಂದ ಆತನ ಕನಸು ಮಣ್ಣಾಗಬಾರದು. ರಿಷಿಕೇಶ್‌ಗೆ(ಮೊ.ಸಂ: 96114 40673) ಮತ್ತಷ್ಟು ಸಂಘ ಸಂಸ್ಥೆಗಳು ಹಾಗೂ ದಾನಿಗಳು ನೆರವು ನೀಡುವ ಮೂಲಕ ಅವನ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಟ್ರಸ್ಟ್‌ನ ಕಾರ್ಯದರ್ಶಿ ಸೂರ್ಯ, ಖಜಾಂಚಿ ಗಾನಶ್ರೀ, ಬ್ಯಾಸ್ಕೆಟ್ ಬಾಲ್ ತಂಡದ ಕೋಚ್ ರೋಹಿತ್ ಅರಸ್, ದೈಹಿಕ ಶಿಕ್ಷಣ ಶಿಕ್ಷಕಿ ಕವಿತಾ ಮತ್ತಿತರರಿದ್ದರು.

ಪಿ.ಲಂಕೇಶರ 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನ

ಬುದ್ಧ, ಬಸವ, ಅಂಬೇಡ್ಕರ್ ಸಮ ಸಮಾಜಕ್ಕೆ ಶ್ರಮಿಸಿದವರು; ಸಚಿವ ಡಾ.ಮಹದೇವಪ್ಪ ಅಭಿಮತ



ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಪ್ರಯುಕ್ತ ಪಿ.ಲಂಕೇಶ್ ರಚಿತ, 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ವೀಕ್ಷಿಸಿ, ಪಾತ್ರಧಾರಿಗಳಿಗೆ ಶುಭಹಾರೈಸಿದರು.

'ಮುಟ್ಟಿಸಿಕೊಂಡವನು' ನಾಟಕದ ಪಾತ್ರ ಪರಿಚಯ

ಬಸಲಿಂಗು–ಗಣಪತಿ ಜಕಾತಿ (ವಾರ್ಡನ್), ಸಿದ್ದಲಿಂಗಿ– ತುಳಸಿ (ವಾರ್ಡನ್), ಡಾ.ತಿಮ್ಮಯ್ಯ– ಸಿದ್ದಲಿಂಗ ಕೆ (ಸಹಾಯಕ ನಿರ್ದೇಶಕರು) ನಂಜನಗೂಡು ತಾಲೂಕು, ಡಾ. ನರಹುಲಿ– ಮಾಂತೇಶ್ ಮಾಟೊಳ್ಳಿ (ಸೀನಿಯರ್ ವಾರ್ಡನ್), ರುದ್ರಪ್ಪ– ಲೋಕೇಶ್.ಎಸ್ (ವಾರ್ಡನ್), ಡಾಕ್ಟರ್ ಕಮಲ–ಕೆ.ಜ್ಯೋತಿ.ಕೆ (ಅಡುಗೆಯವರು), ಜಾತಿ ಭೂತ– ಶ್ರೀಧರ್ ಪೋತೆದಾರ್ (ಅಡುಗೆಯವರು), ತಿಪ್ಪೇಶಿ– ಎಸ್.ರವಿಚಂದ್ರ (ವಾರ್ಡನ್), ಸಲೀಂ– ಜಿ.ಮಲ್ಲಯ್ಯ (ವಾರ್ಡನ್), ಭೀಮಣ್ಣ– ಕೆ.ಎ.ಎಸ್‌ಪ್ರದೀಪ್ (ವಾರ್ಡನ್), ಕಾಂಪೌಂಡರ್ ರಾಮಣ್ಣ– ಕೆ.ಮಹೇಶ್ (ವಾರ್ಡನ್), ಚೆನ್ನಕ್ಕ – ಒ.ರಜನಿ (ಅಡುಗೆಯವರು), ನೃತ್ಯ (ಕೊಲಾಜ್)ಶೈಲಶ್ರೀ (ಅಡುಗೆಯವರು), ಬಿ.ಆರ್. ಅಕ್ಷತಾ (ಅಡುಗೆಯವರು), ಎಸ್.ಮಹೇಶ್ (ವಾರ್ಡನ್)

ಮೈಸೂರು,ಏ.6(ಎಸ್‌ಪಿಎನ್)– ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಬುದ್ಧ, ಬಸವ, ಡಾ.ಬಿ.ಆರ್.ಅಂಬೇಡ್ಕರ್ ಆಶಯಗಳನ್ನು ಜನರಿಗೆ ತಲುಪಿಸುವ ಕೆಲಸವಾಗಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

> ನನ್ನದು ಅಂತರಜಾತಿ ವಿವಾಹ. ನನ್ನ ಪತ್ನಿ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಆ ವೇಳೆ ಪ್ರೇಮ ವಿವಾಹವಾಗಿದ್ದೆವು. ಕೆಲ ವರ್ಷಗಳ ಹಿಂದೆ ನಮ್ಮನ್ನಗಲಿದರು. ನನ್ನ ಎಂಬಿಬಿಎಸ್ ವ್ಯಾಸಂಗ ಮುಗಿದ ತಕ್ಷಣ ದೇವರಾಜ್ ಅರಸು ಆಗತಾನೆ ಮುಖ್ಯಮಂತ್ರಿಗಳಾಗಿದ್ದರು. ಆರೋಗ್ಯ ಇಲಾಖೆಯಲ್ಲಿ ನೇರ ಸಂದರ್ಶನದ ಮೂಲಕ ನನಗೆ ನೇಮಕಾತಿ ಆದೇಶ ಪತ್ರ ನೀಡಿದರು.
>
> – ಡಾ.ತಿಮ್ಮಯ್ಯ, ಸದಸ್ಯರು, ವಿಧಾನ ಪರಿಷತ್

ಮೈಸೂರು ಕಲಾಮಂದಿರದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಪ್ರಯುಕ್ತ ಪಿ.ಲಂಕೇಶ್ ರಚಿತ, 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನದಲ್ಲಿ ಪಾಲ್ಗೊಂಡು ಮಾತನಾಡಿದರು.

ಬುದ್ಧ, ಬಸವ, ಅಂಬೇಡ್ಕರ್ ಸಮ–ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಬುದ್ಧ ಅರಮನೆಯನ್ನು ತೊರೆದು, ಸಮಾನತೆಗೆ ಶ್ರಮಿಸಿದರು. ಬಸವಣ್ಣ ಅಂತರ ಜಾತಿ ವಿವಾಹ ಏರ್ಪಡಿಸಿ ಜಾತಿ ವಿನಾಶಕ್ಕೆ ಮುನ್ನುಡಿ ಬರೆದರು. ಅದೇ ರೀತಿ ಡಾ.ಬಿ.ಆರ್.ಅಂಬೇಡ್ಕರ್ ಅವರು, ಜಾತಿ ವಿನಾಶವಾಗದ ಹೊರತು ದೇಶ ಯಾವುದೇ ಕ್ಷೇತ್ರದಲ್ಲೂ ಪ್ರಗತಿ ಸಾಧಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಸಮಾಜ ಕಲ್ಯಾಣ ಇಲಾಖೆ ಎಂದರೆ, ವಿದ್ಯಾರ್ಥಿಗಳಿಗೆ ಬರೀ ಊಟ ಹಾಕು, ವಸತಿ ನಿಲಯ ನಿರ್ವಹಣೆ ಮಾಡುವುದಷ್ಟೆ ಕೆಲಸ ಅಲ್ಲ. ತೊಂದರೆಗೆ ಸಿಲುಕಿದವರಿಗೆ ದನಿಯಾಗಿ ಸಮಾಜ ಕಲ್ಯಾಣ ಇಲಾಖೆ ಕೆಲಸ ಮಾಡಬೇಕು. ಸಮ–ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಡಾ.ಅಂಬೇಡ್ಕರ್ ಸೇರಿದಂತೆ ಇತರೆ ಮಹನೀಯರ ಆದರ್ಶಗಳನ್ನು ಅಳವಡಿಸಿಕೊಳ್ಳುವಂತೆ ಸಮಾಜದಲ್ಲಿ ಅರಿವು ಮೂಡಿಸುವುದು ಸಮಾಜ ಕಲ್ಯಾಣ ಇಲಾಖೆಯ ಒಂದು ಭಾಗ ಎಂದರು.

ಜಾತಿ ರಹಿತ ಸಮ ಸಮಾಜ ನಿರ್ಮಾಣದತ್ತ ಯುವ ಜನತೆ ಮುಖ ಮಾಡಬೇಕು. ಆಗಲೇ ಸಮಾಜ ಸುಧಾರಣೆ, ದೇಶದ ಅಭಿವೃದ್ಧಿ ಸಾಧ್ಯ. ಸಮಾಜ ಕಲ್ಯಾಣ ಇಲಾಖೆಯ ನೌಕರರು ಬಹಳ ಅಚ್ಚುಕಟ್ಟಾಗಿ ಪಿ.ಲಂಕೇಶ್ ಕಥೆ ಆಧಾರಿತ 'ಮುಟ್ಟಿಸಿಕೊಂಡವನು' ನಾಟಕ ಪ್ರದರ್ಶನ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ನಾಟಕದಲ್ಲಿ ಬರುವ ವೈದ್ಯ ಡಾ.ತಿಮ್ಮಯ್ಯರ ಪಾತ್ರ ನನ್ನ ನೆಚ್ಚಿನ ಗುರುಗಳಾದ ಡಾ.ತಿಪ್ಪೇಸ್ವಾಮಿ ಅವರದು. ಗ್ರಾಮೀಣ ಪ್ರದೇಶದಲ್ಲಿ ನಡೆದ ಸಣ್ಣ ಘಟನೆಯೊಂದು ಇಂದು ನಾಟಕವಾಗಿ ಪ್ರದರ್ಶಿಸುತ್ತಿರುವುದು ಸಂತೋಷದ ಸಂಗತಿ. ಈ ನಾಟಕದಲ್ಲಿ ತಳ ಸಮುದಾಯದ ವ್ಯಕ್ತಿಯೊಬ್ಬ ಕಷ್ಟಪಟ್ಟು ಓದಿ ವೈದ್ಯನಾಗಿದ್ದರೂ ಕೆಲವು ಕಿಡಿಗೇಡಿಗಳು ಅದರಲ್ಲೂ ಜಾತಿ ಹುಡುಕುತ್ತಾರೆ. ಇಂತಹ ಮನಸ್ಥಿತಿಯವರೆಗೆ ಈ ನಾಟಕ ಮಾರ್ಗದರ್ಶಕವಾಗಬಹುದು ಎಂದರು.

ನಾಟಕದಲ್ಲಿ ಅಭಿನಯಿಸಿದ ಕಲಾವಿದರನ್ನು ಸನ್ಮಾನಿಸಲಾಯಿತು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ರಂಗಾಂತರಂಗ ಟ್ರಸ್ಟ್‌ನ ನಿರ್ದೇಶಕ ಕೆ.ಎಂ.ಕೀರ್ತಿರಾಜ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 7 ಏಪ್ರಿಲ್ 2026


ಮುಂಬರುವ ಅಂಬೇಡ್ಕರ್, ಬಾಬೂಜಿ ಜಯಂತಿ ವೇಳೆಗೆ ಪುರಸಭೆ ಎದುರು

ಅಂಬೇಡ್ಕರ್, ಬಾಬೂಜಿ ಪುತ್ಥಳಿ ನಿರ್ಮಾಣವಾಗಲಿ

ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ಒತ್ತಾಯ

ತಿ.ನರಸೀಪುರ, ಏ.6– ಡಾ.ಬಿ.ಆರ್.ಅಂಬೇಡ್ಕರ್, ಬಸವ, ಕನಕ, ವಾಲ್ಮೀಕಿ ಸೇರಿದಂತೆ ಅನೇಕ ಮಹನೀಯರ ಜಯಂತಿಗೆ ಸರ್ಕಾರ ರಜೆ ಘೋಷಿಸಿದೆ. ಆದರೆ ಡಾ.ಬಾಬು ಜಗಜೀವನರಾಂ ಜಯಂತಿಗೆ ಮಾತ್ರ ರಜೆ ಘೋಷಿಸದೇ ತಾರತಮ್ಯ ಮಾಡಲಾಗಿದೆ. ಹೀಗಾಗಿ ಬಾಬೂಜಿ ಜಯಂತಿಗೂ ಸರ್ಕಾರಿ ರಜೆ ಘೋಷಿಸಬೇಕೆಂಬ ಒತ್ತಾಯವನ್ನು ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಸಲ್ಲಿಸಿದ್ದೇನೆ ಎಂದು ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ತಿಳಿಸಿದರು.

ತಾಲೂಕು ಆಡಳಿತ, ತಾಪಂ, ಬನ್ನೂರು ಮತ್ತು ತಿ.ನರಸೀಪುರ ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಪುರಸಭೆ ಸಭಾಂಗಣದಲ್ಲಿ ನಡೆದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿಯಲ್ಲಿ ಮಾತನಾಡಿದ ಅವರು, ಮುಂಬರುವ ಅಂಬೇಡ್ಕರ್ ಜಯಂತಿ ಹಾಗೂ ಬಾಬೂಜಿ ಜಯಂತಿ ವೇಳೆಗೆ ಪುರಸಭೆ ಎದುರು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಪುತ್ಥಳಿಯನ್ನು ಪುರಸಭೆಯಿಂದ ನಿರ್ಮಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಂದ ಉದ್ಘಾಟಿಸಲು ಮುಂದಾಗಬೇಕು. ಈ ಕಾರ್ಯ ಮಾಡಲು ಅಧಿಕಾರಿಗಳು ವಿಫಲವಾದರೇ ಮುಂದಿನ ಬಾಬೂಜಿ ಜಯಂತಿಯನ್ನು ಬಹಿಷ್ಕರಿಸಲಾಗುತ್ತದೆ ಎಂದು ಎಚ್ಚರಿಸಿದರು.



ತಿ.ನರಸೀಪುರದ ತಾಲೂಕು ಪುರಸಭೆ ಸಭಾಂಗಣದಲ್ಲಿ ಬಾಬು ಜಗಜೀವನ ರಾಂ ಜಯಂತಿಯನ್ನು ಆಚರಿಸಲಾಯಿತು.

ತಾಲೂಕು ಕಚೇರಿ ಎದುರು ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮೇಲ್ಛಾವಣಿ ನಿರ್ಮಿಸಿ ಬಿಸಿಲಿನಿಂದ ರಕ್ಷಣೆ ನೀಡಬೇಕು. ಭೈರಾಪುರ ಪ್ರವೇಶ ದ್ವಾರದಲ್ಲಿ ನಿರ್ಮಿಸಿರುವ ಬಾಬು ಜಗಜೀವನರಾಂ ಪ್ರವೇಶ ದ್ವಾರ ನಿರ್ಮಿಸಲು ಸಿಎಂ ಸಿದ್ದರಾಮಯ್ಯ ಕೋಟಿ ರೂ. ಅನುದಾನ ನೀಡಲು ಒಪ್ಪಿಗೆ ನೀಡಿದ್ದು, ಅದರ ಉದ್ಘಾಟನೆಯನ್ನು ಹೆಲಿಕಾಪ್ಟರ್ ಮೂಲಕವೇ ಬಂದು ಮಾಡಲು ಮನವಿ ಮಾಡಿರುವುದಾಗಿ ತಿಳಿಸಿದರು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಬಾಬು ಜಗಜೀವನ್ ರಾಂ ಸಂಘದ ಮಾಜಿ ಅಧ್ಯಕ್ಷ ಸಿದ್ದರಾಜು ಮಾತನಾಡಿ, ಜಗಜೀವನ್ ರಾಂ ಅವರು ಗಾಂಧೀಜಿಯವರ ತತ್ವ, ಆದರ್ಶಗಳಿಂದ ಪ್ರಭಾವಿತರಾಗಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಸಚಿವರಾಗಿ ವಿವಿಧ ಖಾತೆಗಳನ್ನು ನಿಭಾಯಿಸಿದ ಡಾ.ಬಾಬು ಜಗಜೀವನರಾಂ ಅವರು ದಲಿತರ ಸಾಮಾಜಿಕ ಸಮಾನತೆ ಮತ್ತು ಸಮಾನ ಹಕ್ಕುಗಳಿಗಾಗಿ ಹೋರಾಡಿದರು. 1967 ರಿಂದ 1970ರವರೆಗೆ ಇಂದಿರಾ ಗಾಂಧಿ ಸರ್ಕಾರದಲ್ಲಿ ಕೇಂದ್ರ ಆಹಾರ ಮತ್ತು ಕೃಷಿ ಸಚಿವರಾಗಿ ಗಣನೀಯ ಸೇವೆ ಸಲ್ಲಿಸುವ ಮೂಲಕ ಭಾರತದ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದು 'ಹಸಿರು ಕ್ರಾಂತಿ ಹರಿಕಾರ' ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಮಾಜಿ ಅಧ್ಯಕ್ಷ ಪುಟ್ಟಯ್ಯ, ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಮನ್ಸೂರ್ ಆಲಿ, ಬಾಬೂಜಿ ಸಂಘದ ಉಪಾಧ್ಯಕ್ಷ ವಿಜಾಪುರ ಶಿವಶಂಕರ, ಪ್ರಧಾನ ಕಾರ್ಯದರ್ಶಿ ಸಿ.ಡಿ.ವೆಂಕಟೇಶ್, ಕಾರ್ಯದರ್ಶಿ ವಾಟಾಳು ಜಿ.ಎನ್.ಪುಟ್ಟಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎಸ್.ಶಿವಮೂರ್ತಿ, ಸಮಾಜ ಕಲ್ಯಾಣಾಧಿಕಾರಿ ಡಿ.ವಿನೂತನ್, ಪುರಸಭೆ ಮುಖ್ಯಾಧಿಕಾರಿ ಶ್ರೀನಿವಾಸ್, ಬನ್ನೂರು ಪುರಸಭಾ ಮುಖ್ಯಾಧಿಕಾರಿ ಸತೀಶ್, ಸೆಸ್ಕಾಂ ವೀರೇಶ್, ಭಾರತೀಯ ಕಿಸಾನ್ ಸಂಘದ ನಾಗಲಗೆರೆ ಶಿವಕುಮಾರ್, ಕಾರ್ಮಿಕ ಸಂಘಟನೆ ಆಲಗೂಡು ಪುಟ್ಟಮಲ್ಲಯ್ಯ, ಅಕ್ಟರ್, ಅಧಿಕಾರಿಗಳಾದ ಸಿಡಿಪಿಓ ಗೋವಿಂದ್, ಬಿಸಿಎಂ ರಾಜಣ್ಣ, ಸಿಆರ್‌ಪಿ ನಾಗೇಶ್, ಎಂ.ಎಸ್.ಉಮೇಶ್, ಕೆ.ಶಿವರಾಜು, ರೂಪ, ಸತೀಶ್ ಚಂದ್ರ, ಡಾ.ಮಲ್ಲಿಕಾರ್ಜುನಸ್ವಾಮಿ, ರಾಜಣ್ಣ, ಕೆಂಪರಾಜು, ಪುಟ್ಟಸ್ವಾಮಿ, ಗೋವಿಂದರಾಜು, ವಾರ್ಡನ್ ಮಹದೇವಸ್ವಾಮಿ, ಮಹದೇವ ಮೂರ್ತಿ, ಮುಖಂಡರಾದ ಮಹೇಶ್, ತ್ರಿವೇಣಿ ನಗರ ಮಹದೇವಮ್ಮ, ಮಹದೇವಸ್ವಾಮಿ ಸೇರಿದಂತೆ ಮತ್ತಿತರರಿದ್ದರು.

> ಡಾ.ಬಾಬು ಜಗಜೀವನ್ ರಾಂ ಅವರದು ನೆನಪಿನಲ್ಲಿ ಉಳಿಯುವಂತಹ ವ್ಯಕ್ತಿತ್ವ. ಅವರು ಕೇವಲ ರಾಜಕಾರಣಿ ಅಲ್ಲ. ಒಂದು ಚಳುವಳಿಯಾಗಿದ್ದರು. ತಮ್ಮ ಜೀವನದ ಎಲ್ಲಾ ಹಂತಗಳಲ್ಲಿ ದಲಿತ, ಹಿಂದುಳಿದ ವರ್ಗ, ಶೋಷಿತ ಸಮುದಾಯಗಳಿಗೆ ಧ್ವನಿಯಾಗಿದ್ದರು. ದೇಶಾದ್ಯಂತ 'ಬಾಬೂಜಿ' ಎಂದೇ ಕರೆಯಲ್ಪಡುವ ಬಾಬು ಜಗಜೀವನ ರಾಂ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯದ ಹೋರಾಟಗಾರ. ಅತ್ಯುತ್ತಮ ಸಂಸದೀಯ ಪಟುವಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟಗಾರ, ಸಂವಿಧಾನ ರಚನಾ ಸಭೆ ಸದಸ್ಯ ಮತ್ತು ದೇಶದ ಮೊದಲ ದಲಿತ ಉಪ ಪ್ರಧಾನಿಯಾಗಿ ನಮ್ಮ ದೇಶಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ.
> –ಟಿ.ಜಿ.ಸುರೇಶಾಚಾರ್, ತಹಸೀಲ್ದಾರ್

ಮಲ್ಕುಂಡಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ

ಮಲ್ಕುಂಡಿ, ಏ.6– ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಪಂ ವ್ಯಾಪ್ತಿಯ ಮಲ್ಕುಂಡಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ.

ಗ್ರಾಮದಲ್ಲಿ 3 ಸಾವಿರಕ್ಕೂ ಹೆಚ್ಚು ಜನರಿದ್ದು, ವಾರಕೊಮ್ಮೆ ನೀರು ಬಿಡಲಾಗುತ್ತಿದೆ. ಇದರಿಂದ ಸಮರ್ಪಕ ಕುಡಿಯುವ ನೀರು ಸಿಗದ ಪರಿಣಾಮ ಗ್ರಾಮಸ್ಥರು ಹಾಗೂ ಜಾನುವಾರುಗಳು ಪರಿತಪಿಸುವಂತಾಗಿದೆ. ಬೇಸಿಗೆಯಲ್ಲಿ ಸಾರ್ವಜನಿಕರ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸಲು ಗ್ರಾಪಂ ಮಟ್ಟದ ಅಧಿಕಾರಿಗಳ ಸಭೆ ನಡೆಸಲಾಗಿತ್ತು. ಆದರೆ ಸಮರ್ಪಕ ನೀರು ಪೂರೈಕೆಯಾಗದ ಕಾರಣ ಜನತೆ ಕಂಗಾಲಾಗಿದ್ದಾರೆ. ಅಲ್ಲದೇ ಗ್ರಾಮದಲ್ಲಿ 2 ಹೆಡ್ ಟ್ಯಾಂಕ್‌ಗಳಿದ್ದರೂ, ಕಾರ್ಯ ನಿರ್ವಹಿಸದೇ ಯಾವುದೇ ಪ್ರಯೋಜನಕ್ಕೆ ಬಾರದಂತಾಗಿದೆ. ವಾರಕೊಮ್ಮೆ ಕುಡಿಯುವ ನೀರು ಬಿಟ್ಟರೂ, ಅಲ್ಲಲ್ಲಿ ನೀರು ಸರಬರಾಜು ಮಾಡುವ ಪೈಪ್ ಒಡೆದು ಹೋಗಿ ನೀರು ಪೋಲಾಗುತ್ತಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಅದನ್ನು ದುರಸ್ತಿ ಮಾಡುವಲ್ಲಿ ವಿಫಲರಾಗಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಬೋರ್‌ವೆಲ್ ಕೊರೆಸುವಂತೆ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೇ ಗ್ರಾಮದಲ್ಲಿ ನೀರಿನ ಪೈಪ್ ಒಡೆದು ಕಲುಷಿತ ನೀರು ಹೆಡ್ ಟ್ಯಾಂಕ್‌ಗೆ ಸರಬರಾಜಾಗಿ ಕೆಲವರಿಗೆ ವಾಂತಿ, ಬೇಧಿ ಕಾಣಿಸಿಕೊಂಡಿದೆ. ವಾರಕೊಮ್ಮೆ ನೀರು ಬಿಡುವುದರಿಂದ ಜನತೆ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಕುಡಿಯುವ ನೀರಿಗಾಗಿ ಕಾಯುವ ಪರಿಸ್ಥಿತಿ ಎದುರಾಗಿದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

> ಗ್ರಾಮದಲ್ಲಿ ಕೈ ಬೋರ್‌ವೆಲ್ ಇಲ್ಲದಿರುವುದರಿಂದಲೇ ನೀರಿನ ಸಮಸ್ಯೆ ಹೆಚ್ಚಾಗಿದೆ. ಗ್ರಾಮದಲ್ಲಿ 3 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ. ಆದ್ದರಿಂದ ಗ್ರಾಮಕ್ಕೆ ಒಂದು ಕೈ ಬೋರ್‌ವೆಲ್ ಹಾಗೂ ಹೆಡ್‌ಟ್ಯಾಂಕ್ ನಿರ್ಮಾಣವಾಗಬೇಕಿದೆ.
> – ಮಂಜುನಾಥ್, ಗ್ರಾಮದ ನಿವಾಸಿ.

> ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಗ್ರಾಮದ ಹಲವೆಡೆ ನೀರು ಸರಬರಾಜು ಮಾಡುವ ಪೈಪ್ ಒಡೆದು ಹೋಗಿದ್ದರೂ ಅದನ್ನು ದುರಸ್ತಿಗೊಳಿಸಲು ಅಧಿಕಾರಿಗಳು ಮುಂದಾಗಿಲ್ಲ. ಇದರಿಂದ ಕಲುಷಿತ ನೀರು ಸೇವನೆ ಮಾಡಿ ಜನರ ಆರೋಗ್ಯ ಹದಗೆಟ್ಟಿದೆ. – ಎಂ.ಪುಟ್ಟಸ್ವಾಮಿ ಗ್ರಾಮದ ಮುಖಂಡ.

ಅಸ್ಪೃಶ್ಯತೆ, ಅಸಮಾನತೆ ಹೋಗಲಾಡಿಸುವಲ್ಲಿ

ಬಾಪೂಜಿ, ಬಾಬೂಜಿ, ಬಾಬಾ ಸಾಹೇಬರ ಕೊಡುಗೆ ಅಪಾರ

ಹುಣಸೂರು, ಏ.6– ದೇಶದಲ್ಲಿ ತಾಂಡವವಾಡುತ್ತಿದ್ದ ಅಸ್ಪೃಶ್ಯತೆ ಮತ್ತು ಅಸಮಾನತೆ ಹೋಗಲಾಡಿಸುವಲ್ಲಿ ಬಾಪೂಜಿ, ಬಾಬಾ ಹಾಗೂ ಬಾಬೂಜಿ ಕೊಡುಗೆ ಅಪಾರ. ಇಂತಹ ಮಹನೀಯರನ್ನು ನಿತ್ಯ ಸ್ಮರಿಸಬೇಕು ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿನಲ್ಲಿ ನಡೆದ ಹಸಿರು ಕ್ರಾಂತಿ ಹರಿಕಾರ ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟಗಾರರಾಗಿ ರಾಷ್ಟ್ರಪಿತರಾದರೆ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ಶಿಲ್ಪಿ ಹಾಗೂ ಬಾಬು ಜಗಜೀವನರಾಂ ಅವರು ಹಸಿರು ಕ್ರಾಂತಿ ಹರಿಕಾರರಾಗಿ ಭಾರತ ದೇಶಕ್ಕೆ ಸಲ್ಲಿಸಿದ ಸೇವೆ ಅನನ್ಯ. ಭಾರತದ ರಾಜಕಾರಣದಲ್ಲಿ ಬಾಬೂಜಿ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆ ಚಾರಿತ್ರಿಕ ದಾಖಲೆಯಾಗಿದೆ. ಕಾರ್ಮಿಕ, ಸಾರಿಗೆ ಸಂಪರ್ಕ, ಗೃಹ, ರೈಲ್ವೆ, ಕೃಷಿ ಹಾಗೂ ನೀರಾವರಿ ಖಾತೆಗಳ ಸಚಿವರಾಗಿ ಎಲ್ಲದಕ್ಕೂ ಮಿಗಿಲಾಗಿ ರಾಷ್ಟ್ರದ ಉಪ ಪ್ರಧಾನಿಯಾಗಿ ಸಾಧಿಸಿದ ಕ್ರಾಂತಿಕಾರಕ ಸಾಧನೆಗಳು ಅವರೊಬ್ಬ ಅಪ್ರತಿಮ ರಾಜಕೀಯ ಮುತ್ಸದ್ಧಿ ಹಾಗೂ ದೂರದೃಷ್ಟಿಯ ನಾಯಕನನ್ನಾಗಿಸಿವೆ. ಕೇಂದ್ರ ಕೃಷಿ ಸಚಿವರಾಗಿ ದೇಶದ ಆಹಾರ ಸಮಸ್ಯೆಗೆ ಪರಿಹಾರ ರೂಪಿಸಿ ದೇಶವು ಆಹಾರ ಸ್ವಾವಲಂಬನೆ ಸಾಧಿಸುವಲ್ಲಿ ಅವರ ಕೊಡುಗೆ ಅಪಾರವಾಗಿದೆ ಎಂದರು.



ಕಾರ್ಯಕ್ರಮವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಪ್ರಧಾನ ಭಾಷಣಕಾರ ಸಾಹಿತಿ ಜೆ.ಮಹದೇವ್ ಮಾತನಾಡಿ, ಡಾ.ಬಾಬು ಜಗಜೀವನರಾಂ ಭಾರತದ ಸಮಕಾಲೀನ ರಾಜಕಾರಣದಲ್ಲಿ ರಾಷ್ಟ್ರದ ಪ್ರಗತಿ ಪುರುಷರಾಗಿ ಗೋಚರಿಸುತ್ತಾರೆ. ಅವರಲ್ಲಿದ್ದ ಅಭಿವೃದ್ಧಿಪರ ಚಿಂತನೆಗಳು ಹಾಗೂ ದೇಶದ ಸಮಗ್ರ ಪ್ರಗತಿ ಕುರಿತ ವಿಚಾರಧಾರೆಗಳು ದೇಶವನ್ನು ಅಭಿವೃದ್ಧಿ ಮುಂಚೂಣಿಗೆ ತರುವಲ್ಲಿ ಸಫಲವಾಗಿದ್ದವು ಎಂದರು.

ಸಮಾರಂಭದಲ್ಲಿ ಕಾಂಗ್ರೆಸ್ ಕಾರ್ಯಾಧ್ಯಕ್ಷ ದೇವರಾಜ್, ಗಣಪತಿ, ಬ್ಲಾಕ್ ಅಧ್ಯಕ್ಷರಾದ ರವಿಪ್ರಸನ್ನ, ಬಾಲಸುಂದರ್, ಪ್ರೇಮ್ ಕುಮಾರ್, ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಘು, ಪ್ರಚಾರ ಸಮಿತಿ ಅಧ್ಯಕ್ಷ ರಾಮೇಗೌಡ, ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್, ನಗರ ಯುವ ಅಧ್ಯಕ್ಷ ಪೈಸಾಲ್, ಮಾಜಿ ಅಧ್ಯಕ್ಷ ವಕೀಲ ಪುಟ್ಟರಾಜ್, ಅಕ್ರಮ ಸಕ್ರಮ ಸದಸ್ಯ ಕುಮಾರ್, ಮಾಜಿ ಸದಸ್ಯ ಚಿಕ್ಕಸ್ವಾಮಿ, ಉದ್ಯಮಿ ರಾಜು, ಮುಖಂಡರಾದ ಜೆ.ಮಾದೇವ್, ಪರಶುರಾಮ್, ಸೌಮ್ಯ, ಶಂಕರ್, ಭೋಜ, ಸಂತೋಷ್, ಸೌಮ್ಯ, ನೇತ್ರಾವತಿ, ಮಹದೇವಮ್ಮ, ರಮೇಶ್, ಮಣಿ, ರಮೇಶ್, ಸುರೇಶ್ ಇತರರಿದ್ದರು.

ಪ್ರಸ್ತುತ ಮಕ್ಕಳಿಗೆ ವ್ಯಕ್ತಿತ್ವ ಅರಳಿಸುವ ಶಿಕ್ಷಣ ಅಗತ್ಯ

ನಿವೃತ್ತ ಉಪನ್ಯಾಸಕ ರಾಜು ಅಭಿಮತ

ನಂಜನಗೂಡು, ಏ.6– ಶಾಲೆಗಳಲ್ಲಿ ಹೆಚ್ಚು ಅಂಕ ಪಡೆಯುವ ಔಪಚಾರಿಕ ಶಿಕ್ಷಣ ಮಾತ್ರ ಸಿಗುತ್ತಿದ್ದು, ಮಕ್ಕಳಲ್ಲಿ ಸಾಮಾಜಿಕ ಹಾಗೂ ಭಾವನಾತ್ಮಕ ಪ್ರಜ್ಞೆ ಹೆಚ್ಚಿಸಿ ವ್ಯಕ್ತಿತ್ವ ಅರಳಿಸುವ ಶಿಕ್ಷಣ ಪ್ರಸ್ತುತ ದಿನಮಾನದಲ್ಲಿ ಅಗತ್ಯವಾಗಿದೆ ಎಂದು ನಿವೃತ್ತ ಉಪನ್ಯಾಸಕ ರಾಜು ಅಭಿಪ್ರಾಯಪಟ್ಟರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯ ಯೋಗ ಮಹಾಮನೆಯಲ್ಲಿ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಹಾಗೂ ನಂಜನಗೂಡು ಯೋಗ ಫೌಂಡೇಶನ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 21 ದಿನಗಳ ಉಚಿತ ಯೋಗ ಮತ್ತು ಬೌದ್ಧಿಕ್ ವಸಂತ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಅಂಕಪಟ್ಟಿಯಲ್ಲಿ ಹೆಚ್ಚು ಅಂಕ ಪಡೆಯಬೇಕು. ಬೇರೆ ಶಾಲೆ ಮಕ್ಕಳಿಗಿಂತ ಹೆಚ್ಚು ಅಂಕ ಪಡೆಯಬೇಕೆಂಬುದೇ ಶಾಲೆಗಳ ಉದ್ದೇಶವಾಗಿದೆ. ಹೀಗಾಗಿ ಶಾಲೆಗಳು ಔಪಚಾರಿಕ ಶಿಕ್ಷಣಕ್ಕೆ ಸೀಮಿತವಾಗಿವೆ. ಇದರಿಂದ ಮಕ್ಕಳಲ್ಲಿ ವ್ಯಕ್ತಿತ್ವ ವಿಕಸನ ಹೊಂದಲು ಸಾಧ್ಯವಾಗುವುದಿಲ್ಲ. ರ್‍ಯಾಂಕ್ ಪಡೆದು ವಿದ್ಯಾರ್ಥಿಗೆ ಸಾಮಾಜಿಕ ಪ್ರಜ್ಞೆಯೇ ಇಲ್ಲವಾದರೆ ಸಮಾಜ ಒಪ್ಪುವ ವ್ಯಕ್ತಿಯಾಗಿ ರೂಪುಗೊಳ್ಳಲು ಆಗುವುದಿಲ್ಲ ಎಂದರು.



ಉಚಿತ ವಸಂತ ಶಿಬಿರವನ್ನು ನಿವೃತ್ತ ಉಪನ್ಯಾಸಕ ರಾಜು ಉದ್ಘಾಟಿಸಿದರು.

ಮಕ್ಕಳಲ್ಲಿ ಸಾಮಾಜಿಕ ಹಾಗೂ ಭಾವನಾತ್ಮಕ ಪ್ರಜ್ಞೆ ಮೂಡಿಸುವ ಶಿಕ್ಷಣ ಶಾಲೆಗಳಲ್ಲಿ ಸಿಗುವಂತಾಗಬೇಕು. ಇಂತಹ ಮಹತ್ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿರುವ ಯೋಗ ಮಹಾಮನೆ ಸೇವೆ ಶ್ಲಾಘನೀಯ ಎಂದರು.

21 ದಿನಗಳ ಕಾಲ ನಡೆಯುವ ಈ ಉಚಿತ ಶಿಬಿರದಲ್ಲಿ ನೂರಾರು ಮಕ್ಕಳು ಭಾಗವಹಿಸಿದ್ದರು. ಶ್ರೀಪತಂಜಲಿ ಯೋಗ ಶಿಕ್ಷಣ ಅಧ್ಯಕ್ಷ ಆರ್.ವಿ.ರೇವಣ್ಣ, ಸಂಸ್ಥೆ ಉಡಿಗಾಲ ಪ್ರಕಾಶ್, ಎನ್.ಆರ್.ಗಣೇಶ್‌ಮೂರ್ತಿ ಉಪಸ್ಥಿತರಿದ್ದರು.

ವಿಶ್ವಕರ್ಮ ಯುವ ಬ್ರಿಗೇಡ್‌ಗೆ ಪದಾಧಿಕಾರಿಗಳ ಆಯ್ಕೆ

ಸರಗೂರು, ಏ.6– ಕೋಟೆ, ಸರಗೂರು ತಾಲೂಕು ವಿಶ್ವಕರ್ಮ ಯುವ ಬ್ರಿಗೇಡ್‌ನ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಇಲ್ಲಿಗೆ ಸಮೀಪದ ಹ್ಯಾಂಡ್ ಪೋಸ್ಟ್‌ನಲ್ಲಿರುವ ದಿನೇಶ್ ಫಾರ್ಮ್ ಹೌಸ್‌ನಲ್ಲಿ ನಡೆದ ಯುವ ಬ್ರಿಗೇಡ್ ಸರ್ವ ಸದಸ್ಯರ ಸಭೆಯಲ್ಲಿ ಅಧ್ಯಕ್ಷರಾಗಿ ವಕೀಲ ರಾಜಾಚಾರಿ, ಕಾರ್ಯದರ್ಶಿಯಾಗಿ ಎನ್.ಲೋಕೇಶ್, ಖಜಾಂಚಿಯಾಗಿ ಜನಾರ್ಧನ್ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆಯಾದರು.

ಕಾರ್ಯದರ್ಶಿ ಎನ್.ಲೋಕೇಶ್ ಮಾತನಾಡಿ, ತಾಲೂಕಿನಲ್ಲಿ ವಿದ್ಯೆಯಿಂದ ಪ್ರಗತಿ ಎಂಬ ಧ್ಯೇಯೋದ್ದೇಶದಿಂದ ಸಮಾನ ಮನಸ್ಕರು ಸೇರಿ ಸಂಘಟನೆ ರಚಿಸಿದ್ದೇವೆ. ಅಲ್ಲದೆ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಾ ಬಂದಿದ್ದೇವೆ. ಮುಂದಿನ ದಿನಗಳಲ್ಲಿ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂದರು.

ಸಭೆಯಲ್ಲಿ ನಿರ್ದೇಶಕರಾದ ಕಿರಣ್, ದಾಸಾಚಾರಿ, ನಿಂಗರಾಜು, ವಸಂತ್ ಕುಮಾರ್, ಸಿದ್ದಪ್ಪಾಜಿ, ಪ್ರದೀಪ್ ಕುಮಾರ್, ರವಿ, ಸಾ.ನಾ.ಗೋವಿಂದರಾಜು, ಆರ್.ಟಿ. ವಿಜಯಕುಮಾರ್, ನಾಗೇಶ್ ಎಸ್.ಆಚಾರ್, ಶೇಖರ್, ವೆಂಕಟೇಶ, ಚಂದನ್ ಸೇರಿದಂತೆ ನಾಗೇಂದ್ರ, ವಿನೋದ್ ಕುಮಾರ್, ಇನ್ನಿತರರಿದ್ದರು.



ನೂತನ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು.

ಬಾಬೂಜಿ ಅವರ ಆದರ್ಶಗಳು ಅನುಕರಣೀಯ

ವರುಣ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ

ತಿ.ನರಸೀಪುರ, ಏ.6– ಡಾ.ಬಾಬು ಜಗಜೀವನ್ ರಾಂ ದೇಶದ ಆಹಾರ ಮಂತ್ರಿಯಾಗಿದ್ದ ವೇಳೆ ಆಹಾರ ಕ್ಷಾಮ ಎದುರಾಗಿತ್ತು. ಆ ಸಂದರ್ಭ ಅವರು ತೆಗೆದುಕೊಂಡ ದಿಟ್ಟ ನಿರ್ಧಾರದಿಂದಾಗಿ ಇಂದು ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದು ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಸ್ಮರಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಹಸಿರು ಕ್ರಾಂತಿ ಹರಿಕಾರ ಹಾಗೂ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿಯಲ್ಲಿ ಬಾಬೂಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ಅವರು ಸಮಸಮಾಜದ ಹರಿಕಾರರಾಗಿದ್ದು, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯ ತಲುಪಬೇಕೆಂಬುದು ಅವರ ಆಶಯವಾಗಿತ್ತು. ಹೀಗಾಗಿ ಅವರ ಆದರ್ಶಗಳು ಅನುಕರಣೀಯ ಎಂದರು.

ಬಾಬೂಜಿ ಅವರು ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದರೂ, ತಮ್ಮ ಸಾಧನೆ ಮೂಲಕ ಜಗತ್ತು ತಮ್ಮತ್ತ ನೋಡುವಂತೆ ಮಾಡಿದರು. ಇದಕ್ಕೆ ಅವರು ಪಡೆದ ಶಿಕ್ಷಣ ಕಾರಣ. ಸಮಾಜದ ಕಟ್ಟ ಕಡೆ ವ್ಯಕ್ತಿಗೂ ಶಿಕ್ಷಣ ಸಿಗಬೇಕೆಂಬುದು ಅವರ ಆಶಯವಾಗಿತ್ತು ಎಂದರು.



ಕಬಿನಿ ಅತಿಥಿ ಗೃಹದಲ್ಲಿ ಬಾಬು ಜಗಜೀವನ್ ರಾಂ ಜಯಂತಿ ಆಚರಿಸಲಾಯಿತು.

ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ಬಾಬೂಜಿ ಅವರು ಬಾಲ್ಯದಲ್ಲೇ ಅಸ್ಪೃಶ್ಯತೆಯ ಕರಾಳ ಮುಖವನ್ನು ಕಂಡಿದ್ದರು. ಹೀಗಾಗಿ ಅವರು ಅಸ್ಪೃಶ್ಯತೆ ವಿರುದ್ಧ ನಿರಂತರ ಹೋರಾಟ ಮಾಡಿದರು. ರಾಜಕೀಯದಲ್ಲಿ ಅತ್ಯಂತ ಉನ್ನತ ಸ್ಥಾನಕ್ಕೆ ಏರಿದ ಮೊದಲ ದಲಿತ ನಾಯಕರಾಗಿದ್ದ ಬಾಬೂಜಿ ಅವರು ಉತ್ತಮ ಸಂಸದೀಯ ಪಟುವಾಗಿದ್ದು, ಆಹಾರ ಮತ್ತು ಸೈನಿಕ ತುರ್ತು ಪರಿಸ್ಥಿತಿಗಳಲ್ಲಿ ದಿಟ್ಟ ನಿರ್ಧಾರಗಳನ್ನು ಕೈಗೊಂಡು ಅವುಗಳನ್ನು ಸಮರ್ಪಕವಾಗಿ ನಿಭಾಯಿಸಿದ ಅಗ್ರಗಣ್ಯರು ಎಂದರು.

ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಮುದ್ದುಕೃಷ್ಣ, ಭೈರಾಪುರ ಶಕ್ತಿ ಕೇಂದ್ರದ ಅಧ್ಯಕ್ಷ ನಂದೀಶ್, ಪ್ರಧಾನ ಕಾರ್ಯದರ್ಶಿ ವಿಜಯ ಕುಮಾರ್, ಪ್ರಕಾಶ, ಜಗದೀಶ, ಪ್ರದೀಪ್, ದಿಲೀಪ್, ಬಾಲರಾಜ್, ಪ್ರಶಾಂತ್, ರಜತ್, ಮಂಜುನಾಥ್, ಕೇಬಲ್ ಸುರೇಶ್, ಹೆಚ್.ಎಸ್.ಮೂರ್ತಿ, ಎಲ್‌ಐಸಿ ಸೋಮಶೇಖರ್, ಅಡುಗೆ ಪ್ರಭು, ಬಜ್ಜಿ ನಿಂಗಪ್ಪ, ಆಲಗೂಡು ಮಾದು, ಕೃಷ್ಣ, ಅಶೋಕ, ಪ್ರದೀಪ, ಅದೃಷ್ಟ ಮಾದಪ್ಪ ಮೋಹನ್, ಮಣಿಕಂಠರಾಜಗೌಡ ಇತರರಿದ್ದರು.

ಇಂದಿನಿಂದ ಶ್ರೀಕರಿಯಮ್ಮ ದೊಡ್ಡಮ್ಮ ದೇವಿ ಸಿಡಿ ಮಹೋತ್ಸವ

ಭೇರ್ಯ, ಏ.6– ಭೇರ್ಯ ಗ್ರಾಮದ ಗ್ರಾಮದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ದೇವಿ ಸಿಡಿ ಮಹೋತ್ಸವ ಏ.7 ಹಾಗೂ 8 ರಂದು ವಿಜೃಂಭಣೆಯಿಂದ ನಡೆಯಲಿದ್ದು, ಜಾತ್ರಾ ಮಹೋತ್ಸವಕ್ಕೆ ಶ್ರೀಕರಿಯಮ್ಮ ದೊಡ್ಡಮ್ಮ ಟ್ರಸ್ಟ್ ವತಿಯಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಗ್ರಾಮದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ಸಿಡಿಗೆ ಮಂಗಳವಾರ ಸಂಜೆ ಸಂಪ್ರದಾಯದಂತೆ ಬಾಳೆಗೊನೆ ಕಟ್ಟಿ ಅಲಂಕಾರ ಮಾಡಿರಾತ್ರಿ ವೇಳೆ ಸಾವಿರಾರು ಮಂದಿ ಸಮ್ಮುಖದಲ್ಲಿ ಕೊಂಬು, ಕಹಳೆ, ಕೀಲು ಕುದುರೆ ಮತ್ತು ಡೊಳ್ಳು, ನಗಾರಿ ಮಂಗಳವಾದ್ಯದೊಂದಿಗೆ ಸುಮಾರು ಒಂದು ಕಿಮೀ ದೂರ ಎಳೆದು ತಂದು ನಂತರ ಶ್ರೀಕರಿಯಮ್ಮ ದೊಡ್ಡಮ್ಮ ದೇವಸ್ಥಾನದ ಸುತ್ತ 3 ಬಾರಿ ಪ್ರದಕ್ಷಿಣೆ ಹಾಕಲಾಗುವುದು. ನಂತರ ಜನರು ಹರಕೆ, ಕಾಣಿಕೆ, ಮುಡುಪುಗಳನ್ನು ಸಲ್ಲಿಸುವರು. ಸಿಡಿ ಎಳೆಯುವಾಗ ಹರಕೆ ಹೊತ್ತವರು ಉಪವಾಸವಿದ್ದು, ಬಾಯಿಗೆ ಬೀಗ ಹಾಕಿಕೊಂಡು ನಡೆಯುವರು. ಅಲ್ಲದೇ ಮುತ್ತೈದೆಯರು ತಂಬಿಟ್ಟಿನ ಆರತಿ ಬೆಳಗುವರು.



ವಿದ್ಯುತ್ ದೀಪಾಲಂಕಾರ: ಈಗಾಗಲೇ ಕಳೆದ 3 ದಿನಗಳಿಂದ ಗ್ರಾಮದ ಹಾಸನ–ಮೈಸೂರು ರಸ್ತೆ, ಸಾಲಿಗ್ರಾಮ – ಕೆ.ಆರ್.ಪೇಟೆ ರಸ್ತೆಯ ಉದ್ದಕ್ಕೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಇಡೀ ಭೇರ್ಯ ಗ್ರಾಮವೇ ಜಗಮಗಿಸುತ್ತಿದೆ. ಜಾತ್ರೆ ವಿಜೃಂಭಣೆಯಿಂದ ನಡೆಯಲಿದ್ದು, ಸಾವಿರಾರು ಜನರು ಸೇರುವ ನಿರೀಕ್ಷೆ ಇದೆ.

ಪೌರಾಣಿಕ ನಾಟಕ: ಜಾತ್ರಾ ಮಹೋತ್ಸವ ಅಂಗವಾಗಿ ಏ.8ರಂದು ರಾತ್ರಿ 9 ಗಂಟೆಗೆ ಶ್ರೀದೊಡ್ಡಮ್ಮ ಕರಿಯಮ್ಮ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಕುರುಕ್ಷೇತ್ರ ಎಂಬ ಪೌರಾಣಿಕ ನಾಟಕ ಆಯೋಜಿಸಲಾಗಿದೆ.

ಶಾಸಕ ಅನಿಲ್ ಚಿಕ್ಕಮಾದು ಅವರಿಂದ ಅಭಿವೃದ್ಧಿ ಕಾರ್ಯ ನಡೆದಿಲ್ಲ ಎಂಬ

ಕೃಷ್ಣನಾಯಕರ ಹೇಳಿಕೆಯಿಂದ ಕಾಂಗ್ರೆಸ್ಸಿಗರಿಗೆ ಮುಜುಗರ

ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ

ಹೆಚ್.ಡಿ.ಕೋಟೆ, ಏ.6– ತಾಲೂಕಿನಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರಿಂದ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ ಎಂದು ಇತ್ತೀಚೆಗೆ ಪಟ್ಟಣದಲ್ಲಿ ನಡೆದ ಜನರೊಂದಿಗೆ ಜನತಾದಳ ಸಮಾವೇಶದಲ್ಲಿ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಅವರು ಹೇಳಿರುವುದು ಕಾಂಗ್ರೆಸ್ಸಿಗರಿಗೆ ಮುಜುಗರ ತಂದಿದೆ ಎಂದು ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಪಟ್ಟಣದಲ್ಲಿ ನಡೆದ ಜನರೊಂದಿಗೆ ಜನತಾದಳ ಕಾರ್ಯಕ್ರಮದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಜಿ.ಡಿ.ಹರೀಶ್‌ಗೌಡ ಇನ್ನು ಅನೇಕ ಗಣ್ಯರ ಸಮ್ಮುಖದಲ್ಲಿ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಅವರು ಮಾತನಾಡುವ ಸಂದರ್ಭ ಕ್ಷೇತ್ರದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರ ಆಡಳಿತಾವಧಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ ಎಂದು ಹೇಳಿದ್ದರು. ಅಲ್ಲದೇ ತಾಲೂಕಿನಲ್ಲಿ ಡ್ರಗ್ಸ್ ದಂಧೆ, ಶಿಕ್ಷಣ, ರೈತರ ಸಮಸ್ಯೆಗಳು ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ಶಾಸಕರು ವಿಫಲವಾಗಿದ್ದಾರೆ ಎಂದು ತಿಳಿಸಿದ್ದರು. ಇದನ್ನು ಕಾಂಗ್ರೆಸ್ ಪಕ್ಷದವರು ಸಹಿಸಿಕೊಳ್ಳಲಾಗದೇ ಇಲ್ಲದ ಸಲ್ಲದ ಆರೋಪಗಳನ್ನು ಜೆಡಿಎಸ್ ಪಕ್ಷ ಹಾಗೂ ಮುಖಂಡ ಕೃಷ್ಣನಾಯಕರ ಮೇಲೆ ಮಾಡುತ್ತಿದ್ದಾರೆ ಎಂದರು.



ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ ಮಾತನಾಡಿದರು.

ತಾಲೂಕಿನಲ್ಲಿ ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಮಾಡಲಾಗಿದೆ ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದು, ಅಭಿವೃದ್ಧಿ ಕಾರ್ಯವನ್ನು ಅಂಕಿ ಅಂಶದ ಸಮೇತ ಜನರ ಮುಂದೆ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಘಟಕದ ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಚಿಕ್ಕತಿಮ್ಮನಾಯಕ, ಶ್ಯಾಮ್, ಅನು, ಎಂ.ಡಿ.ಮಂಚಯ್ಯ, ಲೇಖನಗೌಡ, ವಕೀಲ ಪ್ರಶಾಂತ್, ಶಿವಕುಮಾರ್, ಪ್ರದೀಪ, ಡಿ.ನಾಗರಾಜು, ಜವರೇಗೌಡ, ಬಿ.ಟಿ.ನರಸಿಂಹಮೂರ್ತಿ, ವೆಂಕಟೇಗೌಡ, ಸಣ್ಣತಮ್ಮಣ್ಣೇಗೌಡ, ಹರೀಶ್, ಉದಯಕುಮಾರ್, ಡಿ.ಪಿ.ಪ್ರಕಾಶ್, ಸುರೇಶ್, ಮಾದೇಗೌಡ, ಓ.ಕೆ.ಮಹೇಂದ್ರ, ಭೈರೇಗೌಡ ಇತರರಿದ್ದರು.

> ಹೆಚ್.ಡಿ.ಕೋಟೆಯಲ್ಲಿ ಇತ್ತೀಚೆಗೆ ನಡೆದ 'ಜನರೊಂದಿಗೆ ಜನತಾದಳ' ಸಮಾವೇಶಕ್ಕೆ ಸಾವಿರಾರು ಮಂದಿ ಆಗಮಿಸಿದ ಕಾರಣ ವೇದಿಕೆ ಮೇಲೆ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಲು ಆಗಮಿಸಿದ್ದ ಸಾವಿರಾರು ಕಾರ್ಯಕರ್ತರಲ್ಲಿ ಕೆಲವರನ್ನು ಪಕ್ಷಕ್ಕೆ ಬರಮಾಡಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಪಟ್ಟಣದಲ್ಲಿ ಅದ್ಧೂರಿ ಕಾರ್ಯಕ್ರಮ ಆಯೋಜಿಸಿ ಎಲ್ಲರನ್ನೂ ಜೆಡಿಎಸ್‌ಗೆ ಸೇರ್ಪಡೆ ಮಾಡಿಕೊಳ್ಳಲಾಗುವುದು. ತಾಲೂಕಿನ ಆಲನಹಳ್ಳಿ, ಕ್ಯಾತನಹಳ್ಳಿ ಸೇರಿದಂತೆ ಮುಖ್ಯ ರಸ್ತೆಗಳು ಅಭಿವೃದ್ಧಿ ಕಾಣದೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿದೆ. ಇದು ಶಾಸಕರಿಗೆ ಕಾಣುತ್ತಿಲ್ಲವೇ?
> – ಯತೀಶ್ ಕುಮಾರ್, ಕಾಡ ಮಾಜಿ ಸದಸ್ಯ.

ಬೆಳೆ ವಿಮೆ: 262 ಅರ್ಜಿಗಳು ತಿರಸ್ಕೃತ

ನಂಜನಗೂಡು, ಏ.6– ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ 2024–25ನೇ ಸಾಲಿನ ಮುಂಗಾರು ಹಾಗೂ ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆ ದತ್ತಾಂಶ ಬೆಳೆ ವಿಮೆ ನೋಂದಣಿ ಪ್ರಸ್ತಾವನೆಗಳೊಂದಿಗೆ ಹೋಲಿಕೆಯಲ್ಲಿ ತಾಳೆಯಾಗದ ಹಿನ್ನಲೆಯಲ್ಲಿ 262 ಅರ್ಜಿಗಳು ತಿರಸ್ಕೃತಗೊಂಡಿವೆ. ತಿರಸ್ಕೃತಗೊಂಡಿರುವ ರೈತರು ಸೂಕ್ತ ದಾಖಲಾತಿಗಳೊಂದಿಗೆ ಮತ್ತೊಮ್ಮೆ ಅರ್ಜಿ ಸಲ್ಲಿಸುವಂತೆ ಕೃಷಿ ಸಹಾಯಕ ನಿರ್ದೇಶಕ ಎಸ್.ಕೆ.ರವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕಿನ ಮುಂಗಾರು ಹಂಗಾಮಿನಲ್ಲಿ 260 ಹಾಗೂ ಬೇಸಿಗೆ ಹಂಗಾಮಿನಲ್ಲಿ 2 ಸೇರಿದಂತೆ ಒಟ್ಟು 262 ಅರ್ಜಿಗಳು ಬಂದಿದ್ದು, ಈ ಅರ್ಜಿಗಳಲ್ಲಿ 2024–25ನೇ ಸಾಲಿನ ಮುಂಗಾರು ಹಾಗೂ ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆ ದತ್ತಾಂಶವನ್ನು ಬೆಳೆ ವಿಮೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಹೋಲಿಕೆ ವೇಳೆ ತಾಳೆಯಾಗದ ಕಾರಣ 262 ಅರ್ಜಿಗಳು ತಿರಸ್ಕೃತಗೊಂಡಿವೆ.

ತಿರಸ್ಕೃತ ಅರ್ಜಿಗಳ ಮಾಹಿತಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಮತ್ತು ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ಏ.23ರೊಳಗೆ ಅಗತ್ಯ ದಾಖಲಾತಿಗಳಾದ 2024–25ರ ಪಹಣಿ (ಪಹಣಿಯಲ್ಲಿ ವಿಮೆಗೆ ನೋಂದಾಯಿಸಿದ ಬೆಳೆ ಇರಬೇಕು) ಒಂದು ವೇಳೆ ಬೆಂಬಲ ಬೆಲೆ ಯೋಜನೆಯಡಿ ಎಪಿಎಂಸಿಯಲ್ಲಿ ಮಾರಾಟ ಮಾಡಿದ್ದಲ್ಲಿ ರಶೀದಿಯ ದಾಖಲೆಯನ್ನು ಕೃಷಿ ಇಲಾಖೆಗೆ ಸಲ್ಲಿಸಿದಲ್ಲಿ ಅಂತಹ ಪ್ರಸ್ತಾವನೆಗಳನ್ನು ಅರ್ಹ ಪ್ರಕರಣಗಳೆಂದು ಪರಿಗಣಿಸಲಾಗುವುದು ಎಂದರು.

ಸಣ್ಣಸ್ವಾಮಿ ನಿಧನ



ಹುಣಸೂರು, ಏ.6– ಮಾಜಿ ಗ್ರಾಪಂ ಅಧ್ಯಕ್ಷ, ಬಿಬಿಸಿ ಕಾಲೋನಿ ಮುಖಂಡ ಸಣ್ಣಸ್ವಾಮಿ(56) ಸೋಮವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ.

ಮೈಸೂರು ಮಿತ್ರ

ರಂಗನತಿಟ್ಟು ಪಕ್ಷಿಧಾಮದಲ್ಲಿ 'ಪಕ್ಷಿ ಮಿತ್ರ'

ಮೈಸೂರು, ಮಂಡ್ಯ ಜಿಲ್ಲೆಯ ಶಾಲಾ ಮಕ್ಕಳಿಗೆ ಪಕ್ಷಿಪಾಠ

- 5ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಪಕ್ಷಿಧಾಮದಲ್ಲಿ ಬೋಟ್ ಸಫಾರಿ
- ಪಕ್ಷಿ ಮಿತ್ರ ಯೋಜನೆಗೆ ಹೊಸ ಬಸ್ ಖರೀದಿಸಿದ ಅರಣ್ಯ ಇಲಾಖೆ





'ಪಕ್ಷಿಮಿತ್ರ' ಕಾರ್ಯಕ್ರಮದಲ್ಲಿ ರಂಗನತಿಟ್ಟು ಪಕ್ಷಿಧಾಮ ವೀಕ್ಷಣೆಗೆ ಬಂದ ವಿವಿಧ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು. ಮತ್ತೊಂದು ಚಿತ್ರದಲ್ಲಿ ಬೋಟ್ ಸಫಾರಿ ಮಾಡುತ್ತಿರುವುದನ್ನು ಕಾಣಬಹುದು

ಮೈಸೂರು,ಏ.6(ಎಂಟಿವೈ)– ಕಾಡಂಚಿನ ಗ್ರಾಮಗಳ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ವನ್ಯಜೀವಿ ಸಂರಕ್ಷಣೆ ಕುರಿತು ಅರಿವು ಮೂಡಿಸಲು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆರಂಭಿಸಿರುವ 'ಯುವಮಿತ್ರ'ಕ್ಕೆ ಯುಎನ್‌ಡಿಪಿ ಮನ್ನಣೆ ದೊರೆತ ಬೆನ್ನಲ್ಲೇ, ಇದೀಗ ರಂಗನತಿಟ್ಟು ಪಕ್ಷಿಧಾಮದಲ್ಲಿ 'ಪಕ್ಷಿ ಮಿತ್ರ' ಆರಂಭಿಸಿ ಮೈಸೂರು, ಮಂಡ್ಯ ಜಿಲ್ಲೆಗಳ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪಕ್ಷಿ ಹಾಗೂ ಪರಿಸರ ಪಾಠ ಮಾಡಲು ಮುಂದಾಗಿದೆ.

> "ಇತ್ತೀಚೆಗೆ ಅರಣ್ಯ ಸಚಿವರು ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ ನೀಡಿದ್ದರು. ಈ ವೇಳೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಪಕ್ಷಿ ಸಂಕುಲ ಪರಿಚಯಿಸುವ ಕಾರ್ಯಕ್ರಮವನ್ನು ಆರಂಭಿಸುವಂತೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಹೊಸ ಬಸ್ಸೊಂದನ್ನು ಖರೀದಿಸಿ, 'ಪಕ್ಷಿ ಮಿತ್ರ' ಕಾರ್ಯಕ್ರಮ ಆರಂಭಿಸಲಾಗಿದೆ. ಈಗಾಗಲೇ 1200 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ರಂಗನತಿಟ್ಟು ಪಕ್ಷಿಧಾಮಕ್ಕೆ ಬಂದು ಬೋಟ್ ಸಫಾರಿ ಮಾಡಿ, ಪಕ್ಷಿ ವೀಕ್ಷಣೆ ಮಾಡಿದ್ದಾರೆ. ಮಕ್ಕಳಿಗೆ ಪಕ್ಷಿಗಳ ಬಗ್ಗೆ ಮಾಹಿತಿ ನೀಡಲು ಪರಿಸರ ಶಿಕ್ಷಣಾಧಿಕಾರಿಯೊಬ್ಬರನ್ನು ನೇಮಿಸಲಾಗಿದೆ. ಅಲ್ಲದೆ, ಶಾಲೆಗಳಿಂದ ಮಕ್ಕಳನ್ನು ಕರೆತರಲು ಒಬ್ಬರ ನಿಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಪರಿಸರ ಸಮತೋಲನ ಕಾಪಾಡಿಕೊಳ್ಳಲು ಪಕ್ಷಿಗಳ ಪಾತ್ರ, ಪಕ್ಷಿಗಳ ವೈವಿಧ್ಯತೆ, ರಂಗನತಿಟ್ಟಿನ ಪ್ರಾಮುಖ್ಯತೆ, ಇಲ್ಲಿನ ಪಕ್ಷಿಗಳ ವೈಶಿಷ್ಟ್ಯತೆ, ಜೀವನ ಕ್ರಮ, ವಲಸೆ ಪಕ್ಷಿಗಳ ಆಗಮನ ಸೇರಿದಂತೆ ಇನ್ನಿತರ ವಿಷಯಗಳನ್ನು ತಿಳಿಸಿಕೊಡಲಾಗುತ್ತಿದೆ. ಅಲ್ಲದೆ, ಮಕ್ಕಳಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.
>
> – ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ.



ಮೈಸೂರು ವನ್ಯಜೀವಿ ವಿಭಾಗವು 'ಪಕ್ಷಿ ಮಿತ್ರ' ಕಾರ್ಯಕ್ರಮವನ್ನು ಆರಂಭಿಸಿದ್ದು, ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಮೈಸೂರು, ಮಂಡ್ಯ ಜಿಲ್ಲೆಯ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಕರೆತಂದು ಪಕ್ಷಿ ಸಂಕುಲದ ಮಹತ್ವವನ್ನು ಮನವರಿಕೆ ಮಾಡಿಕೊಡುವ ನೂತನ ಕಾರ್ಯಕ್ರಮ ಆರಂಭಿಸಿದೆ. ಶಾಲೆಯಿಂದ ಮಕ್ಕಳನ್ನು ಪಕ್ಷಿಧಾಮಕ್ಕೆ ಕರೆತರಲು ಹೊಸ ಬಸ್ಸೊಂದನ್ನು ಖರೀದಿಸಿದೆ.

ಮನ್ನಣೆ ಪಡೆದ ಕಾರ್ಯಕ್ರಮ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮೂರು ವರ್ಷಗಳ ಹಿಂದೆ 'ಯುವ ಮಿತ್ರ' ಕಾರ್ಯಕ್ರಮ ಆರಂಭವಾಯಿತು. ಗುಂಡ್ಲುಪೇಟೆ ತಾಲೂಕಿನ ಕಾಡಂಚಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪರಿಸರ, ವನ್ಯಜೀವಿ ಸಂರಕ್ಷಣೆ ಕುರಿತು ಮಾಹಿತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಸಫಾರಿಗೆ ಕರೆದೊಯ್ದು, ಬಳಿಕ ಸಂವಾದದ ಮಾದರಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ನೀಡಲಾಗುತ್ತಿದೆ. 'ಯುವ ಮಿತ್ರ'ನ ಬಗ್ಗೆ ಯುಎನ್‌ಡಿಪಿ ಮೆಚ್ಚುಗೆ ವ್ಯಕ್ತಪಡಿಸಿದೆ.

ಪಕ್ಷಿ ಮಿತ್ರಕ್ಕೆ ಉತ್ತಮ ಸ್ಪಂದನೆ: ರಂಗನತಿಟ್ಟು ಪಕ್ಷಿಧಾಮದಲ್ಲಿ ಆರಂಭಿಸಿರುವ ಪಕ್ಷಿ ಮಿತ್ರ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರಕುತ್ತಿದೆ. ಉಭಯ ಜಿಲ್ಲೆಗಳ ಸರ್ಕಾರಿ ಶಾಲೆಗಳ 5ರಿಂದ 10ನೇ ತರಗತಿ ಮಕ್ಕಳ ತಂಡವನ್ನು ರಂಗನತಿಟ್ಟಿಗೆ ಕರೆದುಕೊಂಡು ಬಂದು ಬೋಟ್ ಸಫಾರಿಗೆ ಕರೆದೊಯ್ದು ಪಕ್ಷಿ ವೀಕ್ಷಣೆ ಮಾಡಿಸಲಾಗುತ್ತದೆ. ಬಳಿಕ ಅಲ್ಲಿನ ಸಭಾಂಗಣದಲ್ಲಿ ಪರಿಸರ ಪಾಠ ಮಾಡಿ, ರಂಗನತಿಟ್ಟು ಬಗ್ಗೆ ಮಾಹಿತಿ ನೀಡಲಾಗುತ್ತದೆ.

ಪಕ್ಷಿಧಾಮದಲ್ಲಿರುವ ದ್ವೀಪಗಳು, ಅಲ್ಲಿರುವ ಪಕ್ಷಿ ಪ್ರಭೇಧ, ವಲಸೆ ಪಕ್ಷಿಗಳು, ಜೌಗು ಪ್ರದೇಶದ ಮಹತ್ವ, ಮೊಸಳೆ, ಪಕ್ಷಿಗಳ ಸಂತಾನೋತ್ಪತ್ತಿ, ಜೀವನ ಕ್ರಮ, ಆಹಾರ ಪದ್ಧತಿ ಸೇರಿದಂತೆ ಇನ್ನಿತರ ಮಾಹಿತಿಯನ್ನು ಪರಿಸರ ಶಿಕ್ಷಣಾಧಿಕಾರಿಗಳು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಬರುವ ವಿದ್ಯಾರ್ಥಿಗಳಿಗೆ ಬೆಳಗಿನ ಉಪಹಾರ, ಮಧ್ಯಾಹ್ನ ಲಘು ಭೋಜನದ ವ್ಯವಸ್ಥೆಯನ್ನು ಅರಣ್ಯ ಇಲಾಖೆಯೇ ಮಾಡಲಿದ್ದು, ಸಂಜೆ ವೇಳೆಗೆ ಆಯಾ ಶಾಲೆಗೆ ವಿದ್ಯಾರ್ಥಿಗಳನ್ನು ವಾಪಸ್ ಕರೆದೊಯ್ದು ಬಿಡಲಾಗುತ್ತದೆ. ಈ ಕಾರ್ಯಕ್ರಮವನ್ನು ಅರಣ್ಯ ಇಲಾಖೆಯೇ ನಡೆಸುವುದರಿಂದ ಶಾಲಾ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ಸಂಗ್ರಹಿಸುವುದಿಲ್ಲ. ಉಚಿತವಾಗಿ ಮಕ್ಕಳಿಗೆ ಬೋಟ್ ಸಫಾರಿ ಮಾಡಿಸಿ, ಪಕ್ಷಿ ಲೋಕದ ಮಾಹಿತಿ ನೀಡಲಾಗುತ್ತಿದೆ. ಈಗಾಗಲೇ 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಂಡಿದ್ದು, ಪಕ್ಷಿಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

ಮುಕ್ತ ವಿವಿ ಕುಲಸಚಿವರಾಗಿ ಕುಸುಮಾ ಕುಮಾರಿ ವರ್ಗಾವಣೆ ರದ್ದು!

ಮೈಸೂರು, ಏ.6(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕೆಎಎಸ್ ಹಿರಿಯ ಶ್ರೇಣಿಯ ಅಧಿಕಾರಿ ಎಸ್. ಕುಸುಮಕುಮಾರಿ ವರ್ಗಾವಣೆ ಆದೇಶವನ್ನು ಎರಡು ದಿನದಲ್ಲೇ ರಾಜ್ಯ ಸರ್ಕಾರ ರದ್ದು ಪಡಿಸಿದೆ. ಅಲ್ಲದೆ, ಮಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡಲಾಗಿದ್ದ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ ಅವರನ್ನು ಇಲ್ಲಿಯೇ ಮುಂದುವರಿಸಲು ನಿರ್ಧರಿಸಲಾಗಿದೆ.

ಪ್ರಾದೇಶಿಕ ಆಯುಕ್ತರ ಕಚೇರಿಯ ಹೆಚ್ಚುವರಿ ಆಯುಕ್ತೆ ಹುದ್ದೆಯಿಂದ ತಿಂಗಳ ಹಿಂದೆ ಬಿಡುಗಡೆಯಾಗಿ ಸ್ಥಳ ನಿರೀಕ್ಷಣೆಯಲ್ಲಿದ್ದ ಎಸ್.ಕುಸುಮ ಕುಮಾರಿ ಅವರನ್ನು ಏ.4ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ) ಹುದ್ದೆಗೆ ನಿಯೋಜಿಸಲಾಗಿತ್ತು ಮರು ದಿನ ಭಾನುವಾರವಾಗಿದ್ದರಿಂದ ಸೋಮವಾರ ಅಧಿಕಾರ ಸ್ವೀಕರಿಸುವ ಸಿದ್ಧತೆಯಲ್ಲಿದ್ದ ಅವರಿಗೆ ರಾಜ್ಯ ಸರ್ಕಾರ ಶಾಕ್ ನೀಡಿದೆ.



ಇಂದು ಬೆಳಿಗ್ಗೆಯಷ್ಟೇ ಸರ್ಕಾರ ಆದೇಶವೊಂದನ್ನು ಹೊರಡಿಸಿದ್ದು, ಮುಕ್ತ ವಿವಿಯ ಕುಲಸಚಿವ ಹುದ್ದೆಗೆ ನಿಯೋಜಿಸಿದ್ದ ಆದೇಶವನ್ನು ಹಿಂಪಡೆದಿದೆ. ಆದರೆ, ಇವರೊಂದಿಗೆ ಸ್ಥಳ ನಿಯೋಜನೆ ಮಾಡಿದ್ದ ಇಬ್ಬರು ಅಧಿಕಾರಿಗಳಿಗೆ ಸಂಬಂಧಿಸಿದ ಆದೇಶ ಮುಂದುವರೆಸಲಾಗಿದೆ. ಸಕಲೇಶಪುರ ಉಪವಿಭಾಗಾಧಿಕಾರಿಯಾಗಿ ಹಲ್ಲುಮನಿ ತಿಮ್ಮಣ್ಣ, ಕರ್ನಾಟಕ ಲೋಕಸೇವಾ ಆಯೋಗದ ಸಹಾಯಕ ಕಾರ್ಯದರ್ಶಿ ಜಿ.ಕೆ.ಹರೀಶ್ ವರ್ಗಾವಣೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ರಾಜ್ಯಪಾಲರ ಆಜ್ಞಾನುಸಾರ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಕೆ.ಹೆಚ್.ಕೇಶವಪ್ರಸಾದ್, ಕುಸುಮಾ ಕುಮಾರಿ ವರ್ಗಾವಣೆ ಆದೇಶ ವಾಪಸ್ ಪಡೆದಿದ್ದಾರೆ.

ಒಟಿಪಿಯಿಂದ ಬದುಕಿತು ಬಡಜೀವ

ಬಾವಿಯೊಳಗಿಂದ 3 ದಿನದ ಬಳಿಕ ಬದುಕಿ ಬಂದ ವೃದ್ಧ

ಉಡುಪಿ, ಏ. 6: 'ಮುಳುಗುವವನಿಗೆ ಹುಲ್ಲು ಕಡ್ಡಿ ಕೂಡ ಆಸರೆ' ಎನ್ನುವಂತೆ ಅದೊಂದು ಗ್ಯಾಸ್ ಸಿಲಿಂಡರ್ ಒಟಿಪಿಯಿಂದ ವೃದ್ಧ ಜೀವವೊಂದು ದೊಡ್ಡ ಅಪಾಯದಿಂದ ಬದುಕಿಬಂದಿದೆ. ಆಯತಪ್ಪಿ ಬಾವಿಗೆ ಬಿದ್ದಿದ್ದ ವ್ಯಕ್ತಿಯನ್ನು ಗ್ಯಾಸ್ ಸಿಲಿಂಡರ್ ಒಟಿಪಿಯಿಂದ ರಕ್ಷಣೆ ಮಾಡಲಾಗಿದೆ. ಆ ಮೂಲಕ ಅಪರೂಪದ ಘಟನೆಗೆ ಉಡುಪಿ ಜಿಲ್ಲೆ ಸಾಕ್ಷಿ ಆಗಿದೆ. ಸದ್ಯ ರಕ್ಷಣೆಗೊಳಗಾದ ವೃದ್ಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಡೆದಿದ್ದೇನು: ಉಡುಪಿ ನಗರದ ಕೊಡವೂರು ವಾರ್ಡ್ ಕಂಬ್ಳಕಟ್ಟದಲ್ಲಿ ನಿರ್ಜನ ಪ್ರದೇಶದ ಮನೆಯಲ್ಲಿ ಶ್ರೀನಿವಾಸ್ ಆಚಾರ್ಯ (62) ಎಂಬುವವರು ಒಬ್ಬಂಟಿಯಾಗಿ ವಾಸಿಸುತ್ತಿದ್ದಾರೆ. ಇತ್ತೀಚೆಗೆ ಅನಾರೋಗ್ಯದಿಂದ ಸುಧಾರಿಸಿಕೊಂಡಿದ್ದ ಅವರು ತೋಟಕ್ಕೆ ನೀರು ಹಾಯಿಸಲು ತೆರಳಿದ್ದಾರೆ ಬಾವಿಗೆ ಹಾಕಿದ್ದ ಪಂಪ್‌ನಲ್ಲಿ ಕಸ ತುಂಬಿದೆ. ಅದನ್ನ ಸ್ವಚ್ಛ ಮಾಡಲು ಬಾವಿ ಕಡೆಗೆ ತೆರಳಿದ್ದಾರೆ. ಪೈಪ್ ಎಳೆಯಲು ಹೋಗಿ ಹಗ್ಗ ತುಂಡಾಗಿದೆ. ಈ ವೇಳೆ ಅವರು ಕೂಡ ಆಯತಪ್ಪಿ ಸುಮಾರು 15 ರಿಂದ 20 ಅಡಿ ಆಳದ ಬಾವಿಗೆ ಬಿದ್ದಿದ್ದಾರೆ.

ಒಂಟಿ ಮನೆ ಹಾಗೂ ಏಕಾಂಗಿಯಾಗಿ ಶ್ರೀನಿವಾಸ್ ಆಚಾರ್ಯ ವಾಸಿಸುತ್ತಿದ್ದ ಹಿನ್ನೆಲೆ ಯಾರ ಗಮನಕ್ಕೂ ಬಂದಿರಲಿಲ್ಲ. ಬಾವಿ ಒಳಗಿಂದ ಎಷ್ಟೇ ಬೊಬ್ಬೆ ಹೊಡೆದರು ಯಾರ ಅರಿವಿಗೂ ಬಂದಿಲ್ಲ. ಇನ್ನೇನು ಮಾಡುವುದು ಎಂದು ಬಾವಿಯಲ್ಲಿದ್ದ ಪೈಪ್‌ವೊಂದನ್ನು ಹಿಡಿದು ಕುಳಿತುಕೊಂಡಿದ್ದಾರೆ. ಶ್ರೀನಿವಾಸ್ ಆಚಾರ್ಯ ಅವರು ಹೇಳುವ ಪ್ರಕಾರ ಮೂರು ದಿನಗಳ ಕಾಲ ಬಾವಿಯಲ್ಲಿ ಇದ್ದೆ ಎನ್ನುತ್ತಿದ್ದಾರೆ.

ಜೀವ ಉಳಿಸಿತು ಗ್ಯಾಸ್ ಸಿಲಿಂಡರ್ ಒಟಿಪಿ: ಶ್ರೀನಿವಾಸ್ ಆಚಾರ್ಯರ ಜೀವ ಉಳಿಸಿದ್ದು ಗ್ಯಾಸ್ ಸಿಲಿಂಡರ್! ಶ್ರೀನಿವಾಸ್ ಅವರು ಸಿಂಗಲ್ ಗ್ಯಾಸ್ ಸಿಲಿಂಡರ್ ಹೊಂದಿದ್ದಾರೆ. ಗ್ಯಾಸ್ ಬುಕ್ ಮಾಡಿ ಪರಿಚಯಸ್ಥರಾದ ಗಣೇಶ್ ಎಂಬುವರಿಂದ ಖಾಲಿ ಸಿಲಿಂಡರ್ ಪಡೆದಿದ್ದರು. ಆ ಮೂಲಕ ಹೊಸ ಸಿಲಿಂಡರ್ ಪಡೆಯುವ ನಿರೀಕ್ಷೆಯಲ್ಲಿದ್ದರು. ಈ ನಡುವೆ ಬಾವಿಗೆ ಬಿದ್ದಿದ್ದಾರೆ.

ಮೂರು ದಿನದ ಬಳಿಕ ಪತ್ತೆ: ಹೊಸ ಸಿಲಿಂಡರ್ ಪಡೆಯಲು ಒಟಿಪಿ ಬೇಕಾಗಿತ್ತು. ಗ್ಯಾಸ್ ಸರಬರಾಜಿಗೆ ಬಂದಾಗ ಶ್ರೀನಿವಾಸ್ ಆಚಾರ್ಯ ಮನೆಯಿಂದ ನಾಪತ್ತೆಯಾಗಿದ್ದರು. ಸ್ಥಳೀಯರು ಸಿಲಿಂಡರ್ ನೀಡಿದ್ದ ಗಣೇಶ್ ಅವರಿಗೆ ಮಾಹಿತಿ ನೀಡಿದ್ದಾರೆ ಗಣೇಶ್ ತಮ್ಮ ಬಾಡಿಗೆ ಮನೆಯಲ್ಲಿ ಇರುವ ವ್ಯಕ್ತಿಗಳ ಮೂಲಕ ಶ್ರೀನಿವಾಸ್‌ಗಾಗಿ ಹುಡುಕಾಡಿದ್ದಾರೆ. ಈ ವೇಳೆ ತೋಟದ ಮನೆಯ ಮೂಲೆಯಲ್ಲಿರುವ ಬಾವಿಯಲ್ಲಿ ಶ್ರೀನಿವಾಸ್ ಬಿದ್ದಿರುವುದು ಪತ್ತೆ ಆಗಿದೆ.

ತಕ್ಷಣವೇ ಕಾರ್ಯಾಚರಣೆ ನಡೆಸಿದ ಅಗ್ನಿಶಾಮಕ ಸಿಬ್ಬಂದಿ, ಶ್ರೀನಿವಾಸ್ ಆಚಾರ್ಯರನ್ನು ಬಾವಿಯಿಂದ ಮೇಲಕ್ಕೆ ಎತ್ತುವ ಮೂಲಕ ರಕ್ಷಣೆ ಮಾಡಿದ್ದಾರೆ. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವ ಅವರು ಸಂಪೂರ್ಣ ಗುಣಮುಖರಾಗಿದ್ದಾರೆ.

ಸಿದ್ದಗಂಗಾ ಮಠದ ಶಿವಕುಮಾರ ಶ್ರೀಗಳು ಮಹಾನ್ ಸಂತರು

ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ.ಉಮಾದೇವಿ ಸ್ಮರಣೆ



'ಸಿದ್ದಗಂಗಾ ಶಿವಕುಮಾರ ಶ್ರೀ' ಪ್ರಶಸ್ತಿ ಪುರಸ್ಕೃತ ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ.ಉಮಾದೇವಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಏ.6(ಪಿಎಂ)– ತುಮಕೂರು ಸಿದ್ದಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರು ಅಸಂಖ್ಯಾತರ ಜೀವನದಲ್ಲಿ ಉನ್ನತ ಮಟ್ಟದ ಪರಿವರ್ತನೆ ತಂದ ಮಹಾನ್ ಸಂತರು ಎಂದು 'ಸಿದ್ದಗಂಗಾ ಶಿವಕುಮಾರ ಶ್ರೀ' ಪ್ರಶಸ್ತಿ ಪುರಸ್ಕೃತ ನಿವೃತ್ತ ಪ್ರಾಧ್ಯಾಪಕಿ ಡಾ.ಎಸ್.ಪಿ.ಉಮಾದೇವಿ ಸ್ಮರಿಸಿದರು.

ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ನೀಲಗಂಗಾ ಮಹಿಳಾ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಡಾ.ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ತಮ್ಮ ನಿಸ್ವಾರ್ಥ ಸೇವೆಯ ಕಾರಣಕ್ಕೆ ಶಿವಕುಮಾರ ಶ್ರೀಗಳು ನಡೆದಾಡುವ ದೇವರು ಎಂದೇ ಜನಮನದಲ್ಲಿ ನೆಲೆಯಾಗಿದ್ದರು. ಶ್ರೀಗಳು ಸಮಾಜ ಸೇವೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಅವರು ಸರಳತೆಯಲ್ಲಿ ನೆಮ್ಮದಿ ಕಾಣುವ ಮೂಲಕ ಸಮಾಜಕ್ಕೆ ಮಹತ್ವದ ಕೊಡುಗೆ ನೀಡಿದರು. ಅವರದು ಸಹನೆ, ಸಮಾಧಾನ, ಮಾತೃಹೃದಯಿ ಹಾಗೂ ಆದರ್ಶ ವ್ಯಕ್ತಿತ್ವವಾಗಿತ್ತು ಎಂದು ತಿಳಿಸಿದರು.

ಇದಕ್ಕೂ ಮುನ್ನ ಶಿವಕುಮಾರ ಶ್ರೀಗಳು ಹಾಗೂ ಬಸವಣ್ಣನವರ ಫೋಟೋಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಬಳಗದ ಅಧ್ಯಕ್ಷೆ ಗೀತಾ ರಾಜಶೇಖರ್, ಉಪಾಧ್ಯಕ್ಷೆ ಗೀತಾ ಈಶ್ವರ್ ಸೇರಿದಂತೆ ಬಳಗದ ಸದಸ್ಯರು ಹಾಜರಿದ್ದರು.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಏ.6(ಎಂಕೆ)– ಅಪರಿಚಿತ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೈಸೂರಿನ ಗನ್‌ಹೌಸ್ ಎದುರಿನ ಕೋಟೆ ಮಾರಮ್ಮ ದೇವಸ್ಥಾನದ ಬಳಿ ಮಲಗಿದ್ದ ಸ್ಥಿತಿಯಲ್ಲೇ 40 ವರ್ಷ ವಯೋಮಾನದ ಅಪರಿಚಿತ ವ್ಯಕ್ತಿ ಭಾನುವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ದೇವರಾಜ ಠಾಣೆ ಪೊಲೀಸರು, ಸ್ಥಳ ಮಹಜರು ನಡೆಸಿ ಮೃತ ದೇಹವನ್ನು ಕೆ.ಆರ್. ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದ್ದಾರೆ.

ಮೃತ ವ್ಯಕ್ತಿಯು ಭಿಕ್ಷುಕನಾಗಿದ್ದು, ಆಹಾರವಿಲ್ಲದೆ ನಿತ್ರಾಣಗೊಂಡು ಮಲಗಿದ್ದ ಸ್ಥಿತಿಯಲ್ಲೆ ಮೃತಪಟ್ಟಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏ. 23ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಏ. 6– ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆದಿಜಗದ್ಗುರುಗಳ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುತ್ತಿರುವುದರ ಜೊತೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಕೃಪಾಶೀರ್ವಾದದೊಂದಿಗೆ 2009ರ ಫೆಬ್ರವರಿಯಿಂದ ಪ್ರತಿ ತಿಂಗಳು ಸಾಮೂಹಿಕ ವಿವಾಹಗಳನ್ನು ನಡೆಸುತ್ತಿರುವ ಶ್ರೀಮಠವು ಜನಸಾಮಾನ್ಯರ ಕಲ್ಯಾಣ ಕಾರ್ಯಕ್ಕೆ ಮುಂದಾಗಿದೆ. ಎಲ್ಲಾ ವರ್ಗದವರೂ ಈ ಕಲ್ಯಾಣ ಕಾರ್ಯದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ಈ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ, ಕುಪ್ಪಸಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ.

23 ಏಪ್ರಿಲ್ 2026 ಗುರುವಾರ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮವಿದ್ದು, 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಅಥವಾ ದೂರವಾಣಿ: 08221–232217, 232033, 9741342222 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ಶಿಕ್ಷಣದ ಮೂಲಕ ಬಾಬೂಜಿ ಅಸಾಮಾನ್ಯ ವ್ಯಕ್ತಿಯಾದರು; ಕ್ರಾಂತಿಕಾರಿ ನಿರ್ಧಾರಗಳ ಕೈಗೊಂಡರು

ಮೈಸೂರು ವಿವಿ ಕುಲಪತಿ ಪ್ರೊ|| ಎನ್.ಕೆ.ಲೋಕನಾಥ್ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನರಾಂ ಅಧ್ಯಯನ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ನಡೆದ ಭಾರತ ಸಂವಿಧಾನದ ಪ್ರಸ್ತಾವನೆಯ ಆಶಯಗಳು ಮತ್ತು ಬಾಬೂ ಜಗಜೀವನರಾಮ್ ವಿಶೇಷ ಉಪನ್ಯಾಸ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು,ಏ.6(ಎಂಟಿವೈ)– ಶಿಕ್ಷಣವು ಸಾಮಾನ್ಯ ವ್ಯಕ್ತಿಯನ್ನು ಅಸಾಮಾನ್ಯ ವ್ಯಕ್ತಿಯನ್ನಾಗಿ ರೂಪಿಸುವ ಶಕ್ತಿಯನ್ನು ಹೊಂದಿದೆ ಎನ್ನುವುದಕ್ಕೆ ಡಾ.ಬಾಬು ಜಗಜೀವನರಾಂ ಅತ್ಯುತ್ತಮ ಉದಾಹರಣೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ, ಪಂಗಡದ ವಿಶೇಷ ಘಟಕದ ಸಹಯೋಗದೊಂದಿಗೆ ನಡೆದ ಭಾರತ ಸಂವಿಧಾನದ ಪ್ರಸ್ತಾವನೆಯ ಆಶಯಗಳು ಮತ್ತು ಬಾಬೂ ಜಗಜೀವನರಾಮ್ ವಿಶೇಷ ಉಪನ್ಯಾಸ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಿಕ್ಷಣ ಮಾತ್ರ ಸಾಮಾನ್ಯ ವ್ಯಕ್ತಿಯನ್ನು ಅಸಮಾನ್ಯ ವ್ಯಕ್ತಿಯನ್ನಾಗಿ ರೂಪಿಸುವ ಶಕ್ತಿಯನ್ನು ಹೊಂದಿದೆ. ಬಾಬು ಜಗಜೀವನರಾಂ ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿ. ಆದರೆ ಅವರು ಪಡೆದ ಶಿಕ್ಷಣ ಅವರನ್ನು ಅಸಾಮಾನ್ಯರನ್ನಾಗಿ ಮಾಡಿತು. ಇದರಿಂದ ಇಡೀ ದೇಶ ಅವರನ್ನು ಗುರುತಿಸಿತು. ಬಿಹಾರ ಈಗಲೂ ಹಿಂದುಳಿದ ರಾಜ್ಯ, ಅಲ್ಲಿ ಉನ್ನತ ಶಿಕ್ಷಣ ಪಡೆದರು.

ಡಾ.ಬಾಬೂ ಜಗಜೀವನರಾಂ ಅವರ ಮಾತುಗಳು ಮದನ್‌ಮೋಹನ್ ಮಾಳವೀಯ ಅವರ ಮೆಚ್ಚುಗೆಗೆ ಪಾತ್ರವಾಗಿತ್ತು ಸಾಮಾಜಿಕವಾಗಿ ತೊಡಗಿಸಿಕೊಳ್ಳಬೇಕೆಂಬ ಕಾರಣದಿಂದ ರಾಜಕೀಯಕ್ಕೆ ಡಾ.ಬಾಬೂ ಜಗಜೀವನರಾಂ ಬರುತ್ತಾರೆ. ಈ ಸಂದರ್ಭದಲ್ಲಿ ಸುಭಾಷ್ ಚಂದ್ರ ಬೋಸ್ ಸೇರಿದಂತೆ ಅನೇಕ ಸಾಧಕರು ಇವರ ಜತೆ ಇರುತ್ತಾರೆ. ಸಾಮಾನ್ಯ ವ್ಯಕ್ತಿ ಎಂತೆಂತಹ ಸಾಧಕರ ಸಹವಾಸಕ್ಕೆ ಶಿಕ್ಷಣದಿಂದ ಮಾತ್ರ ಸಾಧ್ಯವಾಯಿತು ಎಂದು ಹೇಳಿದರು.

ಬದಲಾವಣೆ ತರಬೇಕಾದರೆ ಅಧಿಕಾರ ಇರಬೇಕು ಎಂದು ತಿಳಿದ ಬಾಬೂ ಜಗಜೀವನರಾಂ, ರಾಜಕೀಯಕ್ಕೆ ಬಂದ ನಂತರ ಅನೇಕ ಬದಲಾವಣೆಗಳನ್ನು ತರುತ್ತಾರೆ. ಕಾರ್ಮಿಕ ಸಚಿವರಾಗಿ, ರಕ್ಷಣಾ ಸಚಿವರಾಗಿ ಜನಪರ, ದೇಶದ ಪರ ದುಡಿಯುತ್ತಾರೆ. ದೇಶದಲ್ಲಿ ಆಹಾರದ ಕೊರತೆ ಉಂಟಾದಾಗ ಹಸಿರು ಕ್ರಾಂತಿಗೆ ನಾಂದಿ ಹಾಡುತ್ತಾರೆ. ಎಂದರು.

ಚಿಂತಕ ನಾ.ದಿವಾಕರ ಮಾತನಾಡಿ, ಸಂವಿಧಾನವನ್ನು ದೇಶದ ಗ್ರಂಥ ಅಂದುಕೊಳ್ಳಬಾರದು. ಅದು ದೇಶದ ಆತ್ಮ. ಸಂವಿಧಾನದಲ್ಲಿನ ಆಶಯಗಳನ್ನು ಸಾಕಾರಗೊಳಿಸುವುದು ಕಟ್ಟಕಡೆಯ ವ್ಯಕ್ತಿಯ ಕರ್ತವ್ಯವಾಗಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೇಶವನ್ನು ಸಾರ್ವಭೌಮ, ಸ್ವಾವಲಂಬಿ ರಾಷ್ಟ್ರವನ್ನಾಗಿ ಕಟ್ಟುವ ಕನಸು ಕಂಡಿದ್ದ ದಾರ್ಶನಿಕರಲ್ಲಿ ಡಾ.ಬಾಬೂ ಜಗಜೀವನರಾಮ್ ಒಬ್ಬರು. ಅವರು ಸಾಂವಿಧಾನಿಕ ಆಶಯಗಳನ್ನು ಪೂರೈಸಲು ಪ್ರಯತ್ನಿಸಿದರು. ಒಂದು ಕಪ್ಪುಚುಕ್ಕೆಯನ್ನು ಅವರ ವೈಯಕ್ತಿಕ ಹಾಗೂ ರಾಜಕೀಯ ಜೀವನದಲ್ಲಿ ಕಾಣಲು ಸಾಧ್ಯವಿಲ್ಲ. ಪ್ರಮುಖ ಸಚಿವ ಹುದ್ದೆಗಳನ್ನು ನಿಭಾಯಿಸಿ ಅನೇಕ ಕ್ರಾಂತಿಕಾರಿ ತೀರ್ಮಾನಗಳನ್ನು ತೆಗೆದುಕೊಂಡಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ, ಬಾಬೂ ಜಗಜೀವನರಾಂ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿಶೇಷ ಘಟಕದ ಉಪ ಕುಲಸಚಿವ ಕೆ.ಎನ್. ಮಂಜುನಾಥ್, ಸಂದರ್ಶಕ ಪ್ರಾಧ್ಯಾಪಕ ಹೆಚ್.ಆರ್.ಭೀಮಾಶಂಕರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅಕ್ರಮ ದಾಸ್ತಾನು; 48 ಸಿಲಿಂಡರ್ ಜಪ್ತಿ



ಅಕ್ರಮವಾಗಿ ದಾಸ್ತಾನು ಮಾಡಿದ್ದ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡಿರುವುದು

ಮೈಸೂರು, ಏ.6(ಎಂಕೆ)– ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಅಭಾವದ ನಡುವೆ ಅಕ್ರಮವಾಗಿ ಗ್ಯಾಸ್ ಸಿಲಿಂಡರ್‌ಗಳನ್ನು ಸಂಗ್ರಹಿಸಿ ಮಾರಾಟ ಮಾಡುವವರ ವಿರುದ್ಧ ಕ್ರಮಕ್ಕೆ ಮುಂದಾಗಿರುವ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು, 48 ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದು ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.



ಮಂಟೇಸ್ವಾಮಿ

ಮೈಸೂರು ತಾಲೂಕಿನ ಹುಯಿಲಾಳು ಗ್ರಾಮ ಹಾಗೂ ನಂಜನಗೂಡಿನ ತ್ಯಾಗರಾಜ ಕಾಲೋನಿಯಲ್ಲಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಅಕ್ರಮ ದಾಸ್ತಾನು ಮತ್ತು ಮಾರಾಟ ಮಾಡುತ್ತಿರುವ ಖಚಿತ ಮಾಹಿತಿಯಂತೆ ದಾಳಿ ನಡೆಸಿರುವ ಆಹಾರ ಇಲಾಖೆ ಅಧಿಕಾರಿಗಳು, ಪರಿಶೀಲನೆ ನಡೆಸಿ, ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು, ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮಧ್ಯ ಪ್ರಾಚ್ಯ ಯುದ್ಧದಿಂದಾಗಿ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ವಾಣಿಜ್ಯ ಸಿಲಿಂಡರ್ ವಿತರಣೆಯಲ್ಲಿ ಬಾರೀ ವ್ಯತ್ಯಯವಾಗಿದ್ದು, ಈ ಪರಿಸ್ಥಿತಿ ಗೃಹ ಬಳಕೆ ಸಿಲಿಂಡರ್‌ಗಳ ವಿತರಣೆಯಲ್ಲಿ ಉಂಟಾಗಬಾರದು ಎಂಬ ಕಾರಣಕ್ಕೆ ಮುನ್ನೆಚ್ಚರಿಕಾ ಕ್ರಮವಾಗಿ ಸಿಲಿಂಡರ್‌ಗಳ ಅಕ್ರಮ ದಾಸ್ತಾನು ಮೇಲೆ ತೀವ್ರ ನಿಗಾ ವಹಿಸಲಾಗಿದೆ. ಈ ನಿಟ್ಟಿನಲ್ಲಿ ತಂಡಗಳನ್ನು ರಚಿಸಿ, ವ್ಯಾಪಕ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಎರಡು ಪ್ರತ್ಯೇಕ ಸ್ಥಳಗಳಲ್ಲಿ 48 ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದಿದ್ದೇವೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎಲ್‌ಪಿಜಿ ಸಿಲಿಂಡರ್‌ಗಳ ಅಕ್ರಮವಾಗಿ ಸಂಗ್ರಹಿಸುವ ಮತ್ತು ಭರ್ತಿ ಘಟಕಗಳನ್ನು ನಡೆಸುವವರ ಮೇಲೆ ನಿಗಾ ಇಟ್ಟಿದ್ದೇವೆ. ಈಗಾಗಲೇ ಜಿಲ್ಲೆಯಲ್ಲಿ ಹಲವೆಡೆ ದಾಳಿಗಳನ್ನು ನಡೆಸಲಾಗಿದೆ. ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ದೂರು ದಾಖಲಿಸಲಾಗುವುದು. ಅದರಂತೆ ನಂಜನಗೂಡಿನ ತ್ಯಾಗರಾಜ ಕಾಲೋನಿಯಲ್ಲಿದ್ದ ಶೆಡ್ ಮೇಲೆ ದಾಳಿ ನಡೆಸಿ, 5 ಕೆ.ಜಿ ತೂಕದ 2 ಸಿಲಿಂಡರ್, 1 ಲಕ್ಷ್ಮಿ ಬಜಾಜ್ ಸಿಲಿಂಡರ್, 2 ಮೈಕೋ ಹೈಫನ್ ಹೆಸರಿನ ಸಿಲಿಂಡರ್ ವಶಪಡಿಸಿಕೊಳ್ಳಲಾಗಿದೆ. ಶೆಡ್ ಹೊಂದಿದ್ದ ಫಾಜ್ಹಿಲ್ ಮತ್ತು ಚಾರ್ಲಿ ಎಂಬವರ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ ಎಂದರು.

ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ಸ್ವಾಮಿ ಎಂಬುವರು ತಮ್ಮ ಮನೆಯಲ್ಲಿ ಅಕ್ರಮವಾಗಿ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಮೇರೆಗೆ ದಾಳಿ ನಡೆಸಿ, ದಾಸ್ತಾನು ಮಾಡಿದ್ದ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದು ಇಲವಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದರು.

ಮುಂದುವರೆಯಲಿದೆ: ಎಲ್‌ಪಿಜಿ ಸಿಲಿಂಡರ್ ಅಕ್ರಮ ದಾಸ್ತಾನು ವಿರುದ್ಧ ಕಾರ್ಯಾಚರಣೆ ಮುಂದುವರೆಯಲಿದೆ. ಹಾಗೆಯೇ ಸರ್ಕಾರಿ ಆಸ್ಪತ್ರೆ, ಹಾಸ್ಟೆಲ್, ಕಚೇರಿ ಹಾಗೂ ಇನ್ನಿತರೆ ಅಗತ್ಯತೆಗಳಿಗೆ ವಾಣಿಜ್ಯ ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಪೂರೈಕೆ ಮಾಡಲಾಗುತ್ತಿದೆ ಎಂದು ಹೇಳಿದರು.

5 ಕೆ.ಜಿ ಸಿಲಿಂಡರ್ ಲಭ್ಯ: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಜೊತೆಗೆ 5 ಕೆಜಿ ಸಿಲಿಂಡರ್ ಪೂರೈಕೆಯಲ್ಲೂ ವ್ಯತ್ಯಯವಾದ ಹಿನ್ನಲೆಯಲ್ಲಿ 5 ಕೆಜಿ ಸಿಲಿಂಡರ್ ವಿತರಣೆಯನ್ನು ನಿಲ್ಲಿಸಲಾಗಿತ್ತು. ಈಗ ಮತ್ತೆ 5 ಕೆಜಿ ಸಿಲಿಂಡರ್‌ಗಳ ವಿತರಣೆ ಆರಂಭವಾಗಿದೆ. ಹಾಗೆಯೇ ಹಂತ ಹಂತವಾಗಿ ವಾಣಿಜ್ಯ ಸಿಲಿಂಡರ್ ವಿತರಣೆಯಲ್ಲೂ ಚೇತರಿಕೆ ಕಂಡುಬರುತ್ತಿದೆ ಎಂದು ಎಲ್‌ಪಿಜಿ ವಿತರಕರ ಸಂಘ(ಎಲ್‌ಡಿಎಐ)ದ ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ ತಿಳಿಸಿದ್ದಾರೆ.

ಭಾರತೀಯ ಶಿಕ್ಷಕರಿಗೆ ಜಾಗತಿಕ ಮಟ್ಟದಲ್ಲಿ ಗೌರವ

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೆಮ್ಮೆಯ ನುಡಿ

ಮೈಸೂರು,ಏ.6(ಪಿಎಂ)– ಭಾರತೀಯ ಶಿಕ್ಷಕರು ತಮ್ಮ ಜ್ಞಾನ, ಶಿಸ್ತು, ನೈತಿಕತೆ ಹಾಗೂ ಸಂವಹನ ಕೌಶಲ್ಯದ ಮೂಲಕ ಜಾಗತಿಕ ಮಟ್ಟದಲ್ಲಿ ಗೌರವಿಸಲ್ಪಡುತ್ತಿದ್ದಾರೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿಗಳೂ ಆದ ಖ್ಯಾತ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಬಿಜಿಎಸ್ ಬಿಎಡ್ ಕಾಲೇಜಿನಲ್ಲಿ ಸೋಮವಾರ ಪ್ರಥಮ ವರ್ಷದ ಬಿಎಡ್ ಪ್ರಶಿಕ್ಷಣಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ 'ಉದ್ಗಮ' ಶೀರ್ಷಿಕೆಯ ಸ್ವಾಗತ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಿಕ್ಷಕ ವೃತ್ತಿ ಒಂದು ಪವಿತ್ರ ಮತ್ತು ಗೌರವಾನ್ವಿತ ವೃತ್ತಿಯಾಗಿದೆ. ಶಿಕ್ಷಕರೇ ಎಲ್ಲದರ ಸೃಷ್ಟಿಕರ್ತರು. ಕಳೆದ 30 ವರ್ಷಗಳ ಹಿಂದೆ ಜಗತ್ತಿನ ಯಾವುದೇ ಭಾಗದಲ್ಲಿರುವ ವ್ಯಕ್ತಿಯೊಂದಿಗೆ ಯಾವ ಸಮಯದಲ್ಲಾದರೂ ಸಂಪರ್ಕ ಸಾಧಿಸಲು ಕನಿಷ್ಠ 3 ದಿನಗಳು ಬೇಕಾಗುತ್ತಿತ್ತು. ಪ್ರಸ್ತುತ ಕೆಲವೇ ಸೆಕೆಂಡುಗಳಲ್ಲಿ ಸಂಪರ್ಕಿಸಲು ಸಾಧ್ಯವಾಗಿರುವುದು ಶಿಕ್ಷಕರು ಬೋಧಿಸಿದ ವಿಜ್ಞಾನ ಮತ್ತು ಶಿಕ್ಷಣದ ಫಲವಾಗಿದೆ ಎಂದು ತಿಳಿಸಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನವನ್ನು ನಿರಂತರವಾಗಿ ನವೀಕರಿಸಿಕೊಳ್ಳುವುದು ಅಗತ್ಯ. ಜ್ಞಾನವನ್ನು ನವೀಕರಿಸದಿದ್ದರೆ ಇಂದಿನ ಪರಿಸ್ಥಿತಿಯಲ್ಲಿ ಸ್ಪರ್ಧಾತ್ಮಕರಾಗಿರಲು ಸಾಧ್ಯವಿಲ್ಲ. ಗ್ರಾಮೀಣ ಪ್ರತಿಭೆಗಳನ್ನು ಅನ್ವೇಷಿಸಿ ಬೆಳೆಸುವಲ್ಲಿ ಆದಿಚುಂಚನಗಿರಿ ಸ್ವಾಮೀಜಿಗಳು ಮಹತ್ವದ ಪಾತ್ರವಹಿಸುತ್ತಿದ್ದಾರೆ. ಶಿಕ್ಷಕರ ಕರ್ತವ್ಯವು ವಿದ್ಯಾರ್ಥಿಗಳನ್ನು ಕೇವಲ ಪರೀಕ್ಷೆಗಳಿಗೆ ಸಿದ್ಧಗೊಳಿಸುವುದಲ್ಲ, ಜೊತೆಗೆ ಜೀವನಕ್ಕೆ ಸಜ್ಜುಗೊಳಿಸುವುದೂ ಆಗಿದೆ ಎಂದರು.


ಬಿಎಡ್ ಪದವಿಯು ಸಹನೆ, ಶಿಸ್ತು, ಆತ್ಮವಿಶ್ವಾಸ ಮತ್ತು ಸಹಾನುಭೂತಿ ಬೆಳೆಸುತ್ತದೆ. ಜೊತೆಗೆ ಬಿಎಡ್ ಪದವೀಧರರಿಗೆ ಜಾಗತಿಕ ಮಟ್ಟದಲ್ಲಿ ಉತ್ತಮ ಅವಕಾಶಗಳಿವೆ. ಶಿಕ್ಷಕ ವೃತ್ತಿಯಲ್ಲಿ ಯಶಸ್ಸು ಪದವಿಗಳಿಂದ ಮಾತ್ರ ನಿರ್ಧಾರವಾಗುವುದಿಲ್ಲ. ಉತ್ತಮ ಮನೋಭಾವ, ನಡೆ–ನುಡಿ ಹಾಗೂ ಪರಿಸ್ಥಿತಿಗಳಿಗೆ ಪೂರಕ ಸಾಮರ್ಥ್ಯ ವೃದ್ಧಿಯು ಯಶಸ್ಸಿನ ಮೂಲ ಎಂದು ಹೇಳಿದರು.

ಒಬ್ಬ ಶಿಕ್ಷಕ ನೀಡುವ ಒಂದು ಮೆಚ್ಚುಗೆಯ ಮಾತು ಕೂಡ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಬಲ್ಲದು. ನೋಬೆಲ್ ಪ್ರಶಸ್ತಿ ಪುರಸ್ಕೃತರೆಲ್ಲರೂ ದೊಡ್ಡ ಸಂಸ್ಥೆಗಳಿಂದ ಬಂದವರಲ್ಲ, ಸಾಮಾನ್ಯ ಕುಟುಂಬಗಳಿಂದ ಬಂದ ಅನೇಕರು ತಮ್ಮ ಪರಿಶ್ರಮ ಮತ್ತು ಸಂಕಲ್ಪದಿಂದ ಮಹತ್ತರ ಸಾಧನೆ ಮಾಡಿದ್ದಾರೆ. ಇದನ್ನು ಮನಗಂಡು ವಿದ್ಯಾರ್ಥಿಗಳು ಕಠಿಣ ಪರಿಶ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಸಂಸ್ಥೆಯ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಂಡು ಅವುಗಳನ್ನು ನನಸಾಗಿಸಬೇಕು. ನೀವು ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳ ಪವಿತ್ರ ನೆಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೀರಿ. ಅವರ ಆಶೀರ್ವಾದ ಸದಾ ನಿಮ್ಮೊಂದಿಗಿರಲಿ. ನೀವು ಜೀವನದಲ್ಲಿ ಮಹತ್ತರ ಯಶಸ್ಸು ಸಾಧಿಸುವಂತಾಗಲಿ ಎಂದು ವಿದ್ಯಾರ್ಥಿಗಳಿಗೆ ಹಾರೈಸಿದರು. ಕಾಲೇಜಿನ ಆಡಳಿತಾಧಿಕಾರಿ ಯಶೋಧ, ಪ್ರಾಂಶುಪಾಲ ಡಾ.ನಾಗರಾಜು, ಅಧ್ಯಾಪಕರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.


'ಉದ್ಗಮ' ಸ್ವಾಗತ ಸಮಾರಂಭದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರನ್ನು ಸನ್ಮಾನಿಸಲಾಯಿತು.

ದೆಹಲಿ ವಿಧಾನಸಭೆಗೆ ನುಗ್ಗಿ, ಒಳಗೆ ಹೂಗುಚ್ಛ ಇಟ್ಟಿದ್ದ ವ್ಯಕ್ತಿ ಬಂಧಿತ



ನವದೆಹಲಿ: ಸೋಮವಾರ ಮಧ್ಯಾಹ್ನ ಕಾರೊಂದು ದೆಹಲಿ ವಿಧಾನಸಭೆ ಆವರಣದ ಗಡಿಯ ಗೇಟ್‌ಗಳಲ್ಲಿ ಒಂದನ್ನು ಬಲವಂತವಾಗಿ ದಾಟಿ ಒಳನುಗ್ಗಿದ್ದ ಪ್ರಕರಣದಲ್ಲಿ ವ್ಯಕ್ತಿಯೋರ್ವನನ್ನು ಬಂಧಿಸಲಾಗಿದೆ.

ಆ ಕಾರು ರಾಜಧಾನಿಯ ಭದ್ರತೆಯನ್ನು ಬೆಚ್ಚಿಬೀಳಿಸುವ ರೀತಿಯಲ್ಲಿ ಅಲ್ಲಿಂದ ಪರಾರಿಯಾಯಿತು. ಆದರೆ, ಕೆಲವು ಗಂಟೆಗಳ ತೀವ್ರ ಶೋಧ ಕಾರ್ಯಾಚರಣೆಯ ನಂತರ ಆ ವ್ಯಕ್ತಿಯನ್ನು ಬಂಧಿಸಲಾಗಿದ್ದು, ಕಾರನ್ನೂ ವಶಪಡಿಸಿಕೊಳ್ಳಲಾಗಿದೆ. ಆ ವ್ಯಕ್ತಿಯನ್ನು ಸರಬಜೀತ್ ಸಿಂಗ್ ಎಂದು ಗುರುತಿಸಲಾಗಿದ್ದು, ಕಾರು ಉತ್ತರ ದೆಹಲಿಯ ದಟ್ಟ ಜನಸಾಂದ್ರತೆಯ ವಸತಿ ಪ್ರದೇಶವಾದ ರೂಪ್ ನಗರದಲ್ಲಿ ಪತ್ತೆಯಾಗಿದೆ.

ಇತ್ತೀಚೆಗೆ ಮುಕ್ತಾಯಗೊಂಡಿದ್ದ ಬಜೆಟ್ ಅಧಿವೇಶನದ ಸಮಯದಲ್ಲಿ ವಿಧಾನಸಭೆಗೆ ಬಂದಿದ್ದ ಬಾಂಬ್ ಬೆದರಿಕೆಗಳ ನಂತರವೇ ಈ ಘಟನೆ ಸಂಭವಿಸಿರುವುದು ಗಮನಾರ್ಹ. ಉತ್ತರ ಪ್ರದೇಶದ ನೋಂದಣಿ ಸಂಖ್ಯೆಯಿದ್ದ ಆ ಕಾರು ಮಧ್ಯಾಹ್ನ ಸುಮಾರು 2 ಗಂಟೆಯ ಸುಮಾರಿಗೆ ಗೇಟ್ ನಂ. 2 ಅನ್ನು ಒಡೆದು ವಿಧಾನಸಭೆ ಆವರಣಕ್ಕೆ ನುಗ್ಗಿ, ನಂತರ ಅಲ್ಲಿಂದ ತಪ್ಪಿಸಿಕೊಂಡಿತ್ತು.

ಯುಪಿ–26 ಎಝಡ್ 8090 ಸಂಖ್ಯೆಯ ಟಾಟಾ ಸಿಯೆರಾ ವಾಹನ, ಭದ್ರತಾ ಕರ್ತವ್ಯದಲ್ಲಿದ್ದ ಸಿಆರ್‌ಪಿಎಫ್ ಸಿಬ್ಬಂದಿ ನಿಯೋಜಿಸಲಾಗಿದ್ದ ವಿಐಪಿ ಪ್ರವೇಶ ದ್ವಾರವನ್ನು ಒಡೆದು ಒಳನುಗ್ಗಿತು.

ಅಡ್ಡಗಟ್ಟನ್ನು ದಾಟಿದ ತಕ್ಷಣ ಚಾಲಕನು ವಾಹನವನ್ನು ತೀವ್ರವಾಗಿ ನಿಲ್ಲಿಸಿ, ಶಾಂತವಾಗಿ ಕಾರಿನಿಂದ ಇಳಿದು, ಗೇಟ್ ಹತ್ತಿರ ಒಂದು ಹೂಗುಚ್ಛವನ್ನು ಇಟ್ಟು ಮತ್ತೆ ವಾಹನಕ್ಕೆ ಹತ್ತಿ ಅಲ್ಲಿಂದ ತೆರಳಿದ್ದ. ಚಾಲಕನು ನಂತರ ವಿಧಾನಸಭಾ ಸ್ಪೀಕರ್ ವಿಜಯೇಂದ್ರ ಗುಪ್ತ ಅವರ ಕಚೇರಿಯ ಕಡೆಗೆ ಹೋಗಿ, ದ್ವಾರದ ಹತ್ತಿರ ಹೂಗುಚ್ಛವನ್ನು ಇಟ್ಟು ಹಿಂತಿರುಗಿದ ಎಂದು ದೆಹಲಿ ಕಾರ್ಯದರ್ಶಾಲಯದ ಒಬ್ಬ ಅಧಿಕಾರಿ ತಿಳಿಸಿದ್ದಾರೆ.

ಚಾಲಕನು ಸ್ಪೀಕರ್ ಅವರ ಕಾರಿನ ಮೇಲೆ ಮಸಿ ಎರಚಿದ್ದಾನೆಂದೂ ಅವರು ಹೇಳಿದರು. ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳದ ತಂಡ ಧಾವಿಸಿದ್ದು, ಇದುವರೆಗೆ ಆ ಹೂಗುಚ್ಛದಲ್ಲಿ ಯಾವುದೇ ಸ್ಫೋಟಕ ವಸ್ತು ಅಥವಾ ಅನುಮಾನಾಸ್ಪದ ವಸ್ತು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ ಆಟೋ ಎಲ್‌ಪಿಜಿ ಹೆಚ್ಚಿಸಿದ ಇಂಡಿಯನ್ ಆಯಿಲ್

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಆಟೋ ಎಲ್‌ಪಿಜಿ ಸರಬರಾಜನ್ನು ಹೆಚ್ಚಿಸಿದೆ. ಜಾಗತಿಕ ಭೂರಾಜಕೀಯ ಅಸ್ಥಿರತೆಯ ಪರಿಣಾಮವಾಗಿ ಬೇಡಿಕೆ ತೀವ್ರವಾಗಿ ಏರಿಕೆಯಾಗಿದೆ ಎಂದು ಕಂಪನಿ ಹೇಳಿದೆ.



ರಾಜ್ಯದಲ್ಲಿ ತೈಲ ಮಾರುಕಟ್ಟೆ ಕಂಪನಿಗಳು ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳನ್ನು ನಡೆಸುತ್ತಿವೆ. ಇದರಲ್ಲಿ ಇಂಡಿಯನ್ ಆಯಿಲ್ 55 ಸ್ಟೇಷನ್‌ಗಳನ್ನು ನಿರ್ವಹಿಸುತ್ತಿದೆ. 300ಕ್ಕೂ ಹೆಚ್ಚು ಖಾಸಗಿ ಎಎಲ್ ಡಿಎಸ್ ಗಳಿದ್ದರೂ, ಅವುಗಳಲ್ಲಿ ಸುಮಾರು 80 ಶೇಕಡದಷ್ಟು ಕಾರ್ಯನಿರ್ವಹಿಸದಿರುವುದರಿಂದ ಸರಬರಾಜಿನಲ್ಲಿ ಕೊರತೆ ಉಂಟಾಗಿದೆ.

ಸೀಮಿತ ಮೂಲಸೌಕರ್ಯ ಮತ್ತು ವಿತರಣೆ ಸಾಮರ್ಥ್ಯವೂ ಲಭ್ಯತೆ ಮೇಲೆ ಪರಿಣಾಮ ಬೀರುತ್ತಿವೆ ಎಂದು ಕಂಪನಿ ತಿಳಿಸಿದೆ. ಬೆಲೆ ವ್ಯತ್ಯಾಸವೂ ಬೇಡಿಕೆ ಮೇಲೆ ಪ್ರಭಾವ ಬೀರಿದೆ. ಬೆಂಗಳೂರಿನಲ್ಲಿ ಸರ್ಕಾರಿ ಪೆಟ್ರೋಲ್ ಬಂಕ್‌ಗಳಲ್ಲಿ ಆಟೋ ಎಲ್‌ಪಿಜಿ ಲೀಟರ್‌ಗೆ 89.52 ರೂಪಾಯಿಗೆ ಲಭ್ಯವಿದ್ದರೆ, ಖಾಸಗಿ ಸ್ಟೇಷನ್‌ಗಳಲ್ಲಿ 99 ರೂಪಾಯಿಯಿಂದ 105ರೂಪಾಯಿಗಳವರೆಗೆ ಮಾರಾಟವಾಗುತ್ತಿದೆ. ಇದರಿಂದ ಸರ್ಕಾರಿ ಬಂಕ್‌ಗಳಲ್ಲಿ ದೀರ್ಘ ಸಾಲಿನಲ್ಲಿ ಆಟೋಗಳು ನಿಂತಿರುವುದು ಕಂಡುಬರುತ್ತಿದೆ. ರಾಜ್ಯದಲ್ಲಿ ಸುಮಾರು 70 ಶೇಕಡಾ ಆಟೋ ರಿಕ್ಷಾಗಳು ಡ್ಯುಯಲ್ ಫ್ಯೂಯಲ್ ವ್ಯವಸ್ಥೆ ಹೊಂದಿರುವುದರಿಂದ ಅಗತ್ಯವಿದ್ದರೆ ತಾತ್ಕಾಲಿಕವಾಗಿ ಪೆಟ್ರೋಲ್ ಬಳಸುವಂತೆ ಇಂಡಿಯನ್ ಆಯಿಲ್ ಸಲಹೆ ನೀಡಿದೆ.

ಆಟೋ ಚಾಲಕರು ಪ್ರತಿಭಟನೆಗೆ ಮುಂದು: ಬೆಂಗಳೂರಿನಲ್ಲಿ ಆಟೋ ಎಲ್‌ಪಿಜಿ ಕೊರತೆಯನ್ನು ವಿರೋಧಿಸಿ ಆಟೋ ಚಾಲಕರ ಸಂಘಗಳು ಪ್ರತಿಭಟನೆ ನಡೆಸಲು ನಿರ್ಧರಿಸಿವೆ. ಸರ್ಕಾರದ ನಿರ್ಲಕ್ಷ್ಯದಿಂದ ಜೀವನೋಪಾಯ ಮೇಲೆ ಗಂಭೀರ ಪರಿಣಾಮ ಬೀರಿದೆ ಎಂದು ಅವರು ಆರೋಪಿಸಿದ್ದಾರೆ. ಆದರ್ಶ ಆಟೋ ಮತ್ತು ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಎಂ. ಮಂಜುನಾಥ್, ಆದಾಯ ಕುಸಿತ ಮತ್ತು ಇಂಧನ ಲಭ್ಯತೆಯ ಅಸ್ಥಿರತೆಯಿಂದ ಚಾಲಕರು ಸಂಕಷ್ಟದಲ್ಲಿದ್ದಾರೆ ಎಂದು ಹೇಳಿದ್ದಾರೆ. ಸಾರಿಗೆ ಇಲಾಖೆ ಸೇರಿದಂತೆ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಪರಿಹಾರವಾಗಿಲ್ಲ ಎಂದು ಹೇಳುತ್ತಾರೆ.

ಬಹುತೇಕ ಚಾಲಕರಿಗೆ ಆರ್ಥಿಕವಾಗಿ ನಷ್ಟವುಂಟಾಗಿದೆ. ಇಎಂಐ ಪಾವತಿಸಲು ಸಾಧ್ಯವಾಗುತ್ತಿಲ್ಲ. ಮನೆ ಬಾಡಿಗೆ ಹಾಗೂ ಮಕ್ಕಳ ಶಾಲಾ ಶುಲ್ಕ ಪಾವತಿಸಲು ಕಷ್ಟವಾಗುತ್ತಿದೆ ಎಂದು ತಿಳಿಸಿದ್ದಾರೆ.

ಪ್ರತಿ ಆಟೋಗೆ ದಿನಕ್ಕೆ ಕನಿಷ್ಠ 6 ಲೀಟರ್ ಎಲ್‌ಪಿಜಿ ಪೂರೈಕೆ ಖಚಿತಪಡಿಸಬೇಕು ಎಂದು ಸಂಘಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸಿವೆ. ಬೆಂಗಳೂರಿನಲ್ಲಿ ದಿನಕ್ಕೆ ಸುಮಾರು 300 ಟನ್ ಆಟೋ ಎಲ್‌ಪಿಜಿ ಬೇಡಿಕೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಸಿಎನ್ ಜಿ ಪರಿವರ್ತನೆಗೆ ಸರ್ಕಾರ ನೆರವು ನೀಡಬೇಕು ಎಂದು ಬೇಡಿಕೆ ಇಟ್ಟಿದ್ದು, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ಆಟೋ ಸಂಘ ನಿರ್ಧರಿಸಿದೆ.

ತಾಯಿ ಆಸೆಯಂತೆ ಪುನರುಜ್ಜೀವನಗೊಳಿಸಿದ ದೇವಾಲಯದಲ್ಲಿ ಕಾಲಕಳೆದು ಸಾರ್ಥಕತೆ

ಸರಳತೆಗೆ ಮತ್ತೊಂದು ಸಾಕ್ಷಿ ಡ್ಯಾನ್ಸಿಂಗ್ ಸ್ಟಾರ್ ಪ್ರಭುದೇವ

ಮೈಸೂರು, ಏ.6– ಭಾರತೀಯ ಚಿತ್ರರಂಗದ ಡ್ಯಾನ್ಸಿಂಗ್ ಸ್ಟಾರ್ ಖ್ಯಾತಿಯ ಪ್ರಭುದೇವ, ತಮ್ಮ ಸರಳತೆ ಮೂಲಕ ಮತ್ತೊಮ್ಮೆ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

ಜಮೀನಿನಲ್ಲಿ ಕೆಲಸಗಾರರೊಂದಿಗೆ ಕಾಲಕಳೆಯುವುದು, ಬಾಲ್ಯ ಸ್ನೇಹಿತರೊಂದಿಗೆ ಕಿಚಾಯಿಸಿಕೊಂಡು ಸಂತಸಪಡುವುದು, ಹಾಡಿ–ಕುಣಿಯುವುದು, ಬಡವ–ಶ್ರೀಮಂತರೆನ್ನದೆ ಬೆರೆಯುವುದು, ಇಂತಹ ಹತ್ತು ಹಲವು ಸಂಗತಿಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ. ಸಂಪತ್ತು–ಕೀರ್ತಿಯ ಅಮಲಲ್ಲಿ ತೇಲುವ ಅದೆಷ್ಟೋ ಮಂದಿಗೆ ಪ್ರಭುದೇವ ಮಾದರಿಯಾಗಿದ್ದಾರೆ.

ನಂಜನಗೂಡು ತಾಲೂಕಿನ ಕೆಂಬಾಲು ಗ್ರಾಮದಲ್ಲಿ ತಮ್ಮ ತಾಯಿ ಆಸೆಯಂತೆ 2025ರ ಎಪ್ರಿಲ್ ತಿಂಗಳಿನಲ್ಲಿ ಮಲೆ ಮಹದೇಶ್ವರ ದೇವಸ್ಥಾನವನ್ನು ಪುನರುಜ್ಜೀವಗೊಳಿಸಿರುವ ಪ್ರಭುದೇವ, ಮೂರು ದಿನಗಳ ಹಿಂದೆ ಆ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದೇವಸ್ಥಾನದ ಹೊರ ಆವರಣದಲ್ಲಿ ನಿದ್ದೆ ಮಾಡಿ, ಎಚ್ಚರವಾದ ನಂತರ ಸಮೀಪದ ತೆಂಗಿನಮರದಿಂದ ಸ್ಥಳೀಯರು ತಂದು ಕೊಟ್ಟ ಎಳನೀರು ಸೇವಿಸಿ ಆಸ್ವಾದಿಸಿದ್ದಾರೆ. ಸುಮಾರು ಒಂದು ಗಂಟೆ ಕಾಲ ದೇವಸ್ಥಾನದ ಬಳಿಯೇ ಕಾಲ ಕಳೆದು, ಸ್ಥಳೀಯರೊಂದಿಗೆ ಆತ್ಮೀಯವಾಗಿ ಬೆರೆತು ಹೋದರು. ಖ್ಯಾತ ನಟನ ಸಿಂಪಲ್ ಲೈಫ್‌ಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ.



ಕೆಂಬಾಲು ಗ್ರಾಮದಲ್ಲಿ ನೂರಾರು ವರ್ಷಗಳಷ್ಟು ಹಳೆಯದಾದ, ಚೋಳರ ಕಾಲದ ಮಲೆ ಮಹದೇಶ್ವರ ಸ್ವಾಮಿ ದೇವಾಲಯವಿತ್ತು. ತಮ್ಮ ತಾಯಿ ಮಹದೇವಮ್ಮ ಅವರ ಆಸೆಯಂತೆ ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ ಈ ದೇವಸ್ಥಾನವನ್ನು ನವೀಕರಿಸಿದ್ದ ನಟ ಪ್ರಭುದೇವ ಅವರು ಅದನ್ನು ಕಳೆದ ವರ್ಷ ಉದ್ಘಾಟಿಸಿದ್ದರು.

ನಟ ಪ್ರಭುದೇವ ಅವರ ತಾಯಿ ಮಹದೇವಮ್ಮ ಅವರು ಮೂಲತಃ ಕೆಂಬಾಳುವಿನ ಸಮೀಪದ ದೂರ ಗ್ರಾಮದವರು. ತಮ್ಮ ಹುಟ್ಟೂರಿನಲ್ಲಿ ದೇವಾಲಯ ನಿರ್ಮಿಸಬೇಕೆಂಬ ಅವರ ಆಸೆಯನ್ನು ಪುತ್ರ ಪ್ರಭುದೇವ ಅವರ ಬಳಿ ಹೇಳಿಕೊಂಡಿದ್ದರು. ಹೀಗಾಗಿ, ಪ್ರಭುದೇವ ಅವರು ಕಳೆದ ಏಪ್ರಿಲ್‌ನಲ್ಲಿ ತಮ್ಮ ಪತ್ನಿ ಹಿಮಾನಿ ಅವರೊಂದಿಗೆ ಆಗಮಿಸಿ, ಹೋಮ–ಹವನಗಳ ಮೂಲಕ ದೇವಾಲಯದ ಜೀರ್ಣೋದ್ಧಾರ ಮಾಡಿದ್ದರು.

SITE FOR SALE
50X80, EAST FACING
80 FT ROAD
CLEAR TITLE
At TSK Serenity Layout
Belavadi
Contact: Mr. Akash
Mob: 84314-85855

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯುರಿಟಿ ಗಾರ್ಡ್ (ಪುರುಷರು)
ಇನ್ಫೋಸಿಸ್ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಕುವೆಂಪುನಗರದಲ್ಲಿ, ದಟ್ಟಗಳ್ಳಿ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಕೂರ್ಗಳ್ಳಿ, hootgali, ವಿಜಯನಗರ 3rd stage, ಗೋಕುಲಂ, J P Nagara, ವಿದ್ಯಾರಣ್ಯಪುರಂ, ಚಾಮುಂಡಿಪುರಂ ಮತ್ತು ಮೈಸೂರು ಸುತ್ತ ಮುತ್ತ ಬೇಕಾಗಿದ್ದಾರೆ
9606808975, 8310098788

BECOME A RECOGNIZED SPEAKER IN PRESCHOOL EDUCATION!
Preschool Education Speakers Awards 2026
& 44th Batch Convocation
Step into the spotlight | Share your expertise.
Get honored.
We Invite
PRESCHOOL TEACHERS | COORDINATOR
OWNERS | PUBLISHERS
12th April 2026 Registration at 9 AM
at Hotel Kings Kourt, Mysore
IMKTA Since 2003
IMKTA TEACHER TRAINING PROGRAMS INDIA MYSORE
www.imkta.in
Join Diploma Montessori/ Primary Teacher Training
FOR SSLC, PUC OR ANY DEGREE CANDIDATES
Call for Registration 7829937469

ಪ್ರಕಟಣೆ
ಕುಂಚಿಟಿಗರ ಸಂಘ (ರಿ,) ಮೈಸೂರು
ಕುಂಚಿಟಿಗರ ಸಂಘ(ರಿ,) ದಿವಾನ್ಸ್ ರಸ್ತೆ ದೇವರಾಜ ಮೊಹಲ್ಲಾ, ಮೈಸೂರು, ಕಚೇರಿಗೆ 100 ಕೆವಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ಕೋಟೇಷನ್ ನೀಡಲು ಬಯಸುವ ಆಸಕ್ತರು ಸಂಘದ ಕಛೇರಿಗೆ ಬಂದು ನೀಡಬೇಕೆಂದು ಕೋರುತ್ತೇವೆ. ಕಚೇರಿ ಇ–ಮೇಲ್ ಅಥವಾ ಕಛೇರಿಗೆ ತಮ್ಮ ಕೋಟೇಷನ್ ನೀಡಬಹುದು.
ಸಂಪರ್ಕಿಸಿ: ಕಛೇರಿ ಸಮಯ ; 11.00am ರಿಂದ 05.00pm
ಕಛೇರಿ ಮೋ.ಸಂ; 9035389047/0821–2422973
ಇ–ಮೇಲ್ : kunchitigarasangha@gmail.com
ಸಹಿ/– ಅಧ್ಯಕ್ಷರು
ಕುಂಚಿಟಿಗರ ಸಂಘ(ರಿ.) ಮೈಸೂರು

WE ARE HIRING
System Needs
An award-winning IT company, is looking for dynamic and experienced candidates for the following Positions:

► IT Networking / Service Engineer	3 Post
► Marketing Executive	2 Post
► Surveillance Expert	2 Post

Preference will be given to candidates with experience in the IT field.
■ Attractive salary based on experience.
Contact: 8453-833-633
Email: systemneeds@systemneeds.in

COOK WANTED
SOUTH INDIAN FEMALE COOK REQUIRED
for a Telugu Non-Vegetarian Family residing at Vontikoppal, Mysore.
Experience in cooking Vegetarian & Non-vegetarian food preferred.
Call : 96635-22200

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ಹರಿಹರಪುರ (ಜೋಡಿ ಇನಾಂ ಇಗ್ಗಲಿ) ಗ್ರಾಮದ ದಾಖಲೆ, ಸಾಲುಂಡಿ ಗ್ರಾಮದಲ್ಲಿ ವಾಸವಾಗಿದ್ದ **"ಶ್ರೀ. ಬಸವ ಉರುಫ್ ಬಸವೇಗೌಡ ಬಿನ್ ಕೋಳಿಶಿದ್ದ ಉರುಫ್ ಕೋಳಿಶಿದ್ದೇಗೌಡ ಮತ್ತು ವಗೈರೆ"** ರವರುಗಳ ಬಾಬ್ತು "ಈ ಕೆಳಗಿನ ಷೆಡ್ಯೂಲ್ ನಲ್ಲಿ ಹೇಳಿರುವ" ಪೂರ್ತಾ ಜಮೀನು ತಾಲ್ಲೂಕು ಕಛೇರಿ, ನಾಡಕಛೇರಿ ಮತ್ತು ತಹಶೀಲ್ದಾರ್ ರವರ ಸರ್ವೆ ದಾಖಲೆಗಳ ಪ್ರಕಾರ ಮೇಲ್ಕಂಡ **"ಶ್ರೀ. ಬಸವ ಉರುಫ್ ಬಸವೇಗೌಡ ಬಿನ್ ಕೋಳಿಶಿದ್ದ ಉರುಫ್ ಕೋಳಿಶಿದ್ದೇಗೌಡ"** ರವರ ಮಗ **"ಮಾದೇಗೌಡರ"** ಹೆಂಡತಿ **"ನಂಜಮ್ಮ ಉರುಫ್ ಬೋಳಮ್ಮ"** ರವರ ಹೆಸರಿನಲ್ಲಿ ಖಾತೆ ವಗೈರೆಗಳು ದಾಖಲಾತಿಯಾಗಿದ್ದು, ನಂತರ ತಾಲ್ಲೂಕು ತಹಶೀಲ್ದಾರ್ ರವರ ದಿನಾಂಕ: **26–09–1977** ನೇ ತಾರೀಖಿನ ಆರ್ಡರ್ ಸಂಖ್ಯೆ PR.3/1977-78 ರ ಮೇರೆ ಸದರಿ "ಮಾದೇಗೌಡರ" ಹೆಂಡತಿ "ನಂಜಮ್ಮ ಉರುಫ್ ಬೋಳಮ್ಮ" ರವರ ಮಗ **"ಶ್ರೀ. ನಂಜೇಗೌಡ ಬಿನ್ ಮಾದೇಗೌಡ"** ಎಂಬುವವರಿಗೆ ವಾರಸು ಹಕ್ಕಿನ ಮೂಲಕ R.R. ಸಂಖ್ಯೆ 3403 ಮತ್ತು 4303 ಖಾತೆ ದಾಖಲಾಗಿದ್ದು, ನಂತರ ಸದರಿ ಮೇಲ್ಕಂಡ ಪೂರ್ತಾ ಸ್ವತ್ತಿನ ಖಾತೆದಾರರಾಗಿ, ಮಾಲೀಕರಾಗಿ ಸದರಿ **"ಶ್ರೀ. ನಂಜೇಗೌಡ ಬಿನ್ ಮಾದೇಗೌಡ"** ರವರು ಮತ್ತು ಅವರ ಕುಟುಂಬದವರು ಸೇರಿ ಮೇಲ್ಕಂಡ ಎರಡು ಸರ್ವೆ ನಂಬರ್‌ಗಳ **ಒಟ್ಟು ವಿಸ್ತೀರ್ಣ 2–10 ಎರಡು ಎಕರೆ ಹತ್ತು ಗುಂಟೆವುಳ್ಳ ಪೂರ್ತಾ ಜಮೀನನ್ನು** ದಿನಾಂಕ: 14–09–2016 ರಂದು **ಟಿ. ನರಸೀಪುರ ಸಬ್‌ರಿಜಿಸ್ಟ್ರಾರ್ ರವರ ಕಛೇರಿಯಲ್ಲಿ ಒಂದನೇ ಪುಸ್ತಕದ ದಸ್ತಾವೇಜು ಸಂಖ್ಯೆ TNP-1-02504-2016-17** ನೇ ನಂಬರ್ ರಿಜಿಸ್ಟರ್ಡ್ ಕ್ರಯಪತ್ರದ ಮೂಲಕ **"ಶ್ರೀಮತಿ. ವಿ.ಎಸ್. ಲತಾ ಕೋಂ ಟಿ.ಕೆ. ವಿಜಯ್ ಕಣ್ಣನ್"** ಎಂಬುವವರಿಗೆ ಮಾರಾಟ ಮಾಡಿರುವುದು ಸರಿಯಷ್ಟೆ, ಅದರಂತೆ, ಸದರಿ ಮೇಲ್ಕಂಡ **ಶ್ರೀಮತಿ. ವಿ.ಎಸ್. ಲತಾ ಕೋಂ ಟಿ.ಕೆ. ವಿಜಯ್ ಕಣ್ಣನ್** ರವರ ಹೆಸರಿಗೆ ಎಂ.ಆರ್. ನಂ. H10/2016–2017 ರ ಮೇರೆ ಈ ಮೇಲ್ಕಂಡ ಪೂರ್ತಾ ಸ್ವತ್ತಿನ ಖಾತೆ ವಗೈರೆಗಳು ದಾಖಲಾಗಿರುತ್ತದೆ. ಆ ಮೇರೆ ಸದರಿಯವರು ಈ ಮೇಲ್ಕಂಡ ಪೂರ್ತಾ ಸ್ವತ್ತಿನ ಹಾಲೀ ಮಾಲೀಕರಾಗಿದ್ದು, ಮೇಲ್ಕಂಡ ಪೂರ್ತಾ ಸ್ವತ್ತಿನ ಸಂಪೂರ್ಣ ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ **ಶ್ರೀಮತಿ. ವಿ.ಎಸ್. ಲತಾ ಕೋಂ ಟಿ.ಕೆ. ವಿಜಯ್ ಕಣ್ಣನ್** ರವರು ಈ ಮೇಲ್ಕಂಡ ಪೂರ್ತಾ ಸ್ವತ್ತನ್ನು ನನ್ನ ಕಕ್ಷಿದಾರರಾದ **ಶ್ರೀ. ಕೃಷ್ಣ** ರವರಿಗೆ ಶುದ್ಧ ಕ್ರಯಕ್ಕೆ ಕೊಡಲು ಕ್ರಯದ ಕರಾರನ್ನು ಮಾಡಿಕೊಂಡಿದ್ದು, ಅದರಂತೆ, ಈ ಮೇಲ್ಕಂಡ ಪೂರ್ತಾ ಸ್ವತ್ತಿನ ಮೇಲೆ ಮೇಲ್ಕಂಡ ಮೂಲ ಮಾಲೀಕತ್ವದ ವಿವರದಂತೆ ಯಾರಾದರೂ ಯಾವುದೇ ರೀತಿಯಾದ ಮಾಲೀಕತ್ವದ ಹಕ್ಕುಗಳನ್ನು ಹೊಂದಿದ್ದಲ್ಲಿ, ಸ್ವಾಧೀನತೆ ಹಕ್ಕುಗಳನ್ನು ಹೊಂದಿದ್ದಲ್ಲಿ, ವಾರಸು ಹಕ್ಕುಗಳನ್ನು ಹೊಂದಿದ್ದಲ್ಲಿ ಸೂಕ್ತ ಅಸಲು ಸಾಕ್ಷ್ಯದಾಖಲೆಗಳೊಂದಿಗೆ ಈ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮುದ್ರಿತಗೊಂಡ ದಿನಾಂಕದಿಂದ 10 (ಹತ್ತು) ದಿವಸಗಳ ಕಾಲಮಿತಿಯಲ್ಲಿ ನಮ್ಮನ್ನು ಸಂಪರ್ಕಿಸಬಹುದಾಗಿರುತ್ತದೆ. ತಪ್ಪಿದಲ್ಲಿ ಯಾವುದೇ ಆಕ್ಷೇಪವಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಕ್ರಯವನ್ನು ಊರ್ಜಿತಗೊಳಿಸುತ್ತಾರೆ. ನಂತರದಲ್ಲಿ ಬಂದ ಯಾವುದೇ ಹಕ್ಕುಗಳನ್ನು ಪರಿಗಣಿಸುವುದಿಲ್ಲ ಹಾಗೂ ಕಾನೂನಿನ ರೀತಿ ಊರ್ಜಿತವಿಲ್ಲವೆಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ಹರಿಹರಪುರ (ಜೋಡಿ ಇನಾಂ ಇಗ್ಗಲಿ) ಗ್ರಾಮಕ್ಕೇ ಸೇರಿದ ಸರ್ವೆ ನಂ. **179/2** ರಲ್ಲಿ ವಿಸ್ತೀರ್ಣ **0–30 (ಮೂವತ್ತು ಗುಂಟೆ)** ಮತ್ತು ಡಿಟೋ ಗ್ರಾಮದ ಸರ್ವೆ ನಂ. **179/4** ರಲ್ಲಿ ವಿಸ್ತೀರ್ಣ **1–20 (ಒಂದು ಎಕರೆ ಇಪ್ಪತ್ತು ಗುಂಟೆ),** ಈ ಮೇಲ್ಕಂಡ ಎರಡು ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ **2–10 (ಎರಡು ಎಕರೆ ಹತ್ತು ಗುಂಟೆ)**ವುಳ್ಳ ಪೂರ್ತಾ ಜಮೀನು.

Date : 27-03-2026. Place: Mysuru

SIRKANTH
Advocate

Office at No-51 /1, 2nd Floor, 6th Cross, 6th Main, Saraswathipuram
Mysuru | Ph : 99004 11143

NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

G9 projects Designing your Dreams
Vee2 Developers
POORVA SHELTERS PHASE -III
20×30 | 30×40 &20×40 | 30×50
Price Starts from
₹ 2,299/-sq.ft
Near to Marvel PU College
Lalithadripura Ring road Mysuru
8088-707-707

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ
ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ "ಮೈಸೂರು ಮಿತ್ರ", ಏಪ್ರಿಲ್ 16, 2026ಕ್ಕೆ 46 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 47ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2026 ರೊಳಗೆ ಸಮಗೆ ತಲುಪುವಂತೆ ಕಳುಹಿಸಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು:
9448525060 / 8073030835
ಜಾಯ್ ಅಂಥೋಣಿ ತೋಮಸ್: 8951668960, ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು ಪ್ರಸಾದ್ ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871	**ಮಂಡ್ಯ** ಕೆ. ಮೋಹನ್‌ರಾಜ್ 8762960325	**ಶ್ರೀರಂಗಪಟ್ಟಣ** ವಿನಯ್ ಕಾರೇಕುರ ಶ್ರೀರಂಗಪಟ್ಟಣ 9686893234
ಹುಣಸೂರು ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720626	**ಚಾಮರಾಜನಗರ** ಸಿದ್ಧಲಿಂಗಸ್ವಾಮಿ ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265667	**ಟಿ. ನರಸೀಪುರ** ಕುಮಾರ್ ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ ಸೋಮಶೇಖರ್ ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426	**ಕೆ.ಆರ್. ನಗರ** ಮಂಜುನಾಥ ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345	**ಮಳವಳ್ಳಿ** ಸರಸ್ವತಿ. ವಿ ನಂ.47, 1ನೇ ಕ್ರಾಸ್, ಎಸ್.ಆ.ಎಸ್ ಮಳವಳ್ಳಿ ಟೌನ್–571430 9632407806
ಹಾಸನ ಆರ್.ಎನ್.ಸೋಮೇಶ್‌ಗೌಡ ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 7019311936	**ಕುಶಾಲನಗರ** ರಘು ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401	**ಜಯಪುರ** ಬಿಳಿಗಿರಿ ಜಯಪುರ 9945479288
ಪಿರಿಯಾಪಟ್ಟಣ ವಿರೇಶ್ ಪಿರಿಯಾಪಟ್ಟಣ 8660057128	**ವಿರಾಜಪೇಟೆ** ಮಂಜುನಾಥ ವಿರಾಜಪೇಟೆ 9900949353	**ಯಳಂದೂರು** ವಿ.ನಾಗರಾಜು ಮೈತ್ರಿ ಮೆಡಿಕಲ್ಸ್ ಬಳೆಪೇಟೆ, ಯಳಂದೂರು 9844349191
ಕೆ.ಆರ್.ಪೇಟೆ (ಶ್ರೀನಿವಾಸ) ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438	**ಹೆಚ್.ಡಿ.ಕೋಟೆ** ಮಂಜುನಾಥ ಎಸ್. ಹೆಚ್.ಡಿ.ಕೋಟೆ 9483574452	**ಕೆ.ಎಂ.ದೊಡ್ಡಿ** ಸತೀಶ್ ಎ.ಎಲ್ ಕೆ.ಎಂ.ದೊಡ್ಡಿ 9242120338
ಹುಣಸೂರು ರಘು ರಘು ಫೋಟೋ ವರ್ಲ್ಡ್ ಹುಣಸೂರು 9845590889	**ನಂಜನಗೂಡು** ರಂಗಸ್ವಾಮಿ ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್ –571301 9901602226	**ಕೊಳ್ಳೇಗಾಲ** ನಾಗೇಂದ್ರ ಸ್ವಾಮಿ ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

CENTRAL INSTITUTE OF PETROCHEMICALS ENGINEERING & TECHNOLOGY
(Dept. of Chemicals & Petrochemicals, Ministry of Chemicals & Fertilizers, Govt. of India)
CIPET:CSTS-MYSURU, Govt. of India
No. 437/A, Hebbal Industrial Area, Mysuru-570 016. Ph: 0821-2510618 / 2516322
E- Mail: cipetmys1@gmail.com / mysore@cipet.gov.in Web: www.cipet.gov.in
AICTE Approved Courses
CIPET - ADMISSION OPEN FOR LATERAL ENTRY DIPLOMA 2nd YEAR 2026-27
Job Assured

Name of Diploma Course	Course Duration	Entry Qualification	
Diploma in Plastics Mould Technology (DPMT)	2 Years	PUC with Science OR ITI	NO AGE LIMIT
Diploma in Plastics Technology (DPT)	2 Years		

*Candidates appeared / appearing PUC with Science OR ITI examination also eligible to apply for above courses
For Assistance: 94802 53024 / 97914 31827 / 81244 89163